5. ಮಂತ್ರಿಗಳವರಿಂದ ಹೇಳಿಕೆ

ಅ) ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ.

+ ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ, ಈ ಗಂಭೀರವಾದ ವಿಷಯದ ಮೇಲೆ ಸಾಕಷ್ಟು ಚರ್ಚೆ ಇಲ್ಲಿ ಆಗಿದೆ. ಈ ವ್ಯಾಪಕವಾದ ಒಂದು ಪರಿಸ್ಥಿತಿ ಕರ್ನಾಟಕದಲ್ಲಿ ಮಾತ್ರವಲ್ಲ, ಕುಡಿಯುವ ನೀರಿನ ಪ್ರಶ್ನೆ ಇದು ಇಡೀ ದೇಶದಲ್ಲಿದೆ. ಇದು ವಿಕೇಂದ್ರಿಕೃತವಾದ ಒಂದು ಸಮಸ್ಯೆ. ಇದನ್ನು ಸರಿಪಡಿಸುವ ವಿಧಾನ ವಿಕೇಂದ್ರೀಕೃತವಾಗಿ ನಾವು ಮಾಡಬೇಕಾಗುತ್ತದೆ. ಈ ಮಾತನ್ನು ಹೇಳುವುದಕ್ಕೆ ಕಾರಣವೇನೆಂದರೆ ಕರ್ನಾಟಕದಲ್ಲಿ 56 ಸಾವಿರ ಹಳ್ಳಿಗಳವೆ. ಮತ್ತೆ 70 ಲಕ್ಷ ಕುಟುಂಬಗಳಿವೆ. ಇವರಿಗೆಲ್ಲರಿಗೂ ಸಂಬಂಧಪಟ್ಟಿರುವ ವಿಷಯವಿರುವುದರಿಂಥ ಇದು ಬಹಳ ಗಂಭೀರವಾದ ಪ್ರಶ್ನೆ. ನಾನು ಒಪ್ಪಿಕೊಳ್ಳುತ್ತೇನೆ. ಮತ್ತೆ ಇದು ಕ್ಲಿಷ್ಟಕರವಾದ ಪ್ರಶ್ನೆ ಕೂಡ ಹೌದು. ಇದನ್ನು ಪಕ್ಷಾತೀತವಾಗಿ ನಾವು ಈ ಪ್ರಶ್ನೆಯನ್ನು ಸರಿಪಡಿಸುವುದಕ್ಕೆ ಪ್ರಯತ್ನಮಾಡಬೇಕು. ತಾವು ವಿರೋಧ ಪಕ್ಷದ ನಾಯಕರು ಮತ್ತೆ ಸದಸ್ಯರು ಬಹಳಷ್ಟು ರಚನಾತ್ಮಕವಾಗಿ ಪಕ್ಷಾತೀತವಾಗಿಯೇ ಈ ವಿಷಯದ ಬಗ್ಗೆ ಮಾತನಾಡಿದ್ದೀರಿ, ಧನ್ಯವಾದಗಳು. ನಾನು ಅದೇ ಧಾಟಿಯಲ್ಲಿ ಉತ್ತರ ಹೇಳುವಂಥ ಪ್ರಯತ್ನವನ್ನು ಮಾಡುತ್ತೇನೆ. ಆ ನಂತರ ಏನಾದರೂ ಪ್ರಶ್ನೆ ಇದ್ದರೂ ಅದಕ್ಕೂ ಉತ್ತರ ಹೇಳುತ್ತೇನೆ.. ಈ ವರ್ಷದ ಪ್ರಾರಂಭದಲ್ಲಿ ಅಂದರೆ ಫೆಬ್ರವರಿ ತಿಂಗಳಲ್ಲಿ ರುವ ಪರಿಸ್ಥಿತಿಯನ್ನು ನಾವು ಮೊದಲು ಅರ್ಥಮಾಡಿಕೊಳ್ಳೋಣ. ಆಮೇಲೆ ಸಮಸ್ಯೆಗೆ ಹೋಗೋಣ. ಈ ವರ್ಷದ ಫೆಬ್ರವರಿ ತಿಂಗಳಲ್ಲಿ ಕರ್ನಾಟಕದಲ್ಲಿ 13 237 ಪೈಪ್ಡ್ ವಾಟರ್‌ಸಪ್ಲೈ ಸ್ಕೀಮ್ ಇದೆ. 15,533 ಮಿನಿವಾಟರ್ ಸಪ್ಲೈ ಸ್ಕೀಮ್ ಕರ್ನಾಟಕದಲ್ಲಿದೆ. ಮತ್ತೆ 1,66,669 ಬೋರ್‌ವೆಲ್ಸ್ ಫಿಟೆಡ್ ವಿತ್ ಹ್ಯಾಂಡ್‌ಪಂಪ್ ಕೂಡ ಇವೆ. ಕರ್ನಾಟಕದ 56 ಸಾವಿರ ಗ್ರಾಮಗಳ ಪೈಕಿ ನೀರಿನ ವ್ಯವಸ್ಥೆ ಇಲ್ಲದಿರತಕ್ಕಂಥ ಹಳ್ಳಿಗಳು 207 ಮಾತ್ರ. 207 ಹಳ್ಳಿಗಳಲ್ಲಿ ನೀರಿನ ವ್ಯವಸ್ಥೆ ಮಾಡಲಿಕ್ಕಾಗಿಲ್ಲ. ಅದರಲ್ಲಿ ಉತ್ತರ ಕರ್ನಾಟಕ ಮತ್ತು ಶಿವಮೊಗ್ಗದಲ್ಲಿರುವ ಚಿಕ್ಕಚಿಕ್ಕ ಹ್ಯಾಬಿಟೇಷನ್ಸ್‌ಗಳು ಏನಿವೆ, ಅವು ಸೇರಿವೆ. ಲೋ ಪಾಪ್ಯುಲೇಷನ್ ಹ್ಯಾಬಿಟೇಷನ್ಸ್, ವೆಸ್ಟರ್ನ್ ಘಾಟ್ಸ್ ಭಾಗದಲ್ಲಿರುವ ಆ ಭಾಗದಲ್ಲಿ 207 ಗ್ರಾಮಗಳಿಗೆ. ಅದಕ್ಕೆ ಓಪನ್ ವೆಲ್ಸ್ ಮಾಡುವಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಹಣ ಕೂಡ ಇದೆ. ಆದರೂ ಬೇರೆ ಮಾರ್ಗ ಇಲ್ಲ. ಅಂಥ ಕಡೆ ಲೊ ಪಾಪ್ಯುಲೇಷನ್ ವೆಸ್ಟರ್ನ್ ಘಾಟ್ಸ್ ರೀಜನ್‌ನಲ್ಲಿ ಎಲ್ಲಿ ಬೋರ್‌ವೆಲ್ ಹಾಕಲಿಕ್ಕೆ ಸಾಧ್ಯವಿಲ್ಲ, ಬೇರೆ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವಿಲ್ಲ, ಅಂಥ ಕಡೆ ಓಪನ್ ವೆಲ್ಸ್‌ಗಳನ್ನು ಮಾಡುವ ವ್ಯವಸ್ಥೆ ಇದೆ. ತಾವು ಕೇಳುತ್ತಿದ್ದೀರಿ, ಅದಕ್ಕಾಗಿ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದೆ. ಓಪನ್ ವೆಲ್ಸ್ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆ ಅಷ್ಟೇ ಅಲ್ಲ, ಎಲ್ಲಿ ಅದರ ಅವಶ್ಯಕತೆ ಇದೆ, ಅಲ್ಲಿ ಮಾಡಬಹುದು. ಅದಕ್ಕೆ ನಾರ್ಮ್ಸ್ ಬೇರೆ ಇವೆ. ಈಗಿರುವ ನಾರ್ಮ್ಸ್

ಪ್ರಕಾರ ಒಂದು ಸಾವಿರಕ್ಕಿಂತ ಪಾಪ್ಯುಲೇಷನ್ ಜಾಸ್ತಿ ಇದ್ದರೆ ಪೈಪ್ಡ್ ವಾಟರ್, 500ರಿಂದ ಒಂದು ಸಾವಿರ ಇದ್ದರೆ ಮಿನಿವಾಟರ್, ಅದಕ್ಕೆ ಕಡಿಮೆ ಇದ್ದರೆ ಬೋರ್‌ವೆಲ್ ವಿತ್ ಹ್ಯಾಂಡ್ ಪಂಪ್ಸ್. ಈ ರೀತಿ ಇದ್ದರೂ ಕೂಡ ಎಲ್ಲೆಲ್ಲಿ ಸಮಸ್ಯೆಗಳಿವೆ, ಅಂಥ ಕಡೆ ನಾರ್ಮ್ಸ್‌ನ್ನು ನಾವು ಕೈಬಿಡುತ್ತೇವೆ. ಅದರಲ್ಲೇನೂ ಅನುಮಾನವಿಲ್ಲ. ನಾರ್ಮ್ಸ್ ಎಲ್ಲಿ ಪ್ರಾಬ್ಲಮ್ ವಿಲೇಜ್ ಇದೆ, ಅಂಥ ಕಡೆ ನಾರ್ಮ್ಸ್ ಅಡ್ಡ ಬರುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿಶೇಷವಾಗಿ ಉತ್ತರ ಕನ್ನಡದಲ್ಲಿ ನಾರ್ಮ್ಸ್‌ನ್ನು ರಿಲ್ಯಾಕ್ಸ್ ಮಾಡುವ ಅವಶ್ಯಕತೆ ಇದೆ. ಮಾಡುತ್ತೇವೆ. ನಾರ್ಮ್ಸ್ ಏನೂ ಅಡ್ಡಬರುವುದಿಲ್ಲ. ಹಣದ ಬಗ್ಗೆ ತಾವೆಲ್ಲರೂ ಪ್ರಶ್ನೆ ಕೇಳಿದಿರಿ. ಅದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಎಷ್ಟು ಹಣ ಇದೆ, ನಾನು ಸೂಕ್ಷ್ಮವಾಗಿ ಅದರ ಬಗ್ಗೆ ಹಣದ ಕೊರತೆಯೇನು ಇಲ್ಲ ಎಂದು ಹೇಳಿದೆ. ಅದೇ ಮಾತನ್ನು ಸ್ವಲ್ಪ ಬಿಡಿಸಿ ಹೇಳುತ್ತಿದ್ದೇನೆ. ಈಗ 1999-2000ದಲ್ಲಿ ಅಂದರೆ ಕಳೆದವರ್ಷದಲ್ಲಿ ಸ್ಟೇಟ್‌ಸೆಕ್ಟಾರ್‌ನಲ್ಲಿ 75 ಕೋಟಿ ರೂಪಾಯಿ ಬಜೆಟ್ ಇದ್ದರೂ 116 ಕೋಟಿ ರೂಪಾಯಿಗಳು ರಿಲೀಸ್ ಆಗಿದೆ. ಅದೇ ರೀತಿ ಸೆಂಟ್ರಲ್‌ಸೆಕ್ಟಾರ್‌ನಲ್ಲಿ 99 ಕೋಟಿ ರೂಪಾಯಿಗಳ ಬಜೆಟ್ ಇದ್ದರೂ 114 ಕೋಟಿ ರೂಪಾಯಿಗಳು ರಿಲೀಸ್ ಆಗಿದೆ.

ಆಮೇಲೆ ಎಕ್ಸ್‌ಟರ್ನಲಿ ಏಡೆಡ್ ಪ್ರಾಜೆಕ್ಟ್ಸ್. ಇದರಲ್ಲಿ 150 ಕೋಟಿ ರೂಪಾಯಿ ಖರ್ಚಾಗಿದೆ. ಮತ್ತೆ ಸ್ಕೇರ್ಸಿಟಿ ಅಡಿಯಲ್ಲಿ 25 ಕೋಟಿ ರೂಪಾಯಿ ಖರ್ಚಾಗಿದೆ. ಅಂದರೆ ಒಟ್ಟು 405 ಕೋಟಿ ರೂಪಾಯಿ ಹೋದ ವರ್ಷ ಅಂದರೆ 1999-2000ರಲ್ಲಿ ಖರ್ಚಾಗಿದೆ. ಮತ್ತೆ ಮುಂದೆ ಬರುವ ವರ್ಷದಲ್ಲಿ ಕೂಡ ಬಜೆಟ್‌ಗಿಂತ ಹೆಚ್ಚಿನ ಹಣ ಖರ್ಚು ಆಗೇ ಆಗುತ್ತದೆ. ಬಜೆಟ್‌ನಲ್ಲಿ 350 ಕೋಟಿ ರೂಪಾಯಿ ನಾವು ತೋರಿಸಿದ್ದರೂ 400-450 ಕೋಟಿ ರೂಪಾಯಿ ಈಗಿರುವ ವರ್ಷದಲ್ಲಿ ನೀರಿಗೋಸ್ಕರ ಖರ್ಚಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಹಣಕಾಸಿನ ಮಂತ್ರಿಗಳೂ ಹೌದು. ಕ್ಯಾಬಿನೆಟ್‌ನಲ್ಲಿ ಹೇಳಿದ್ದಾರೆ, ಹೊರಗಡೆ ಹೇಳಿದ್ದಾರೆ. ಕುಡಿಯುವ ನೀರಿನ ಪ್ರಶ್ನೆ ಬಂದಾಗ ಬಜೆಟ್ ಮತ್ತು ಹಣಕಾಸಿನ ಕೊರತೆ ಇರುವುದಿಲ್ಲ ಎಂದು ಹೇಳಿದ್ದಾರೆ. ಹೋದ ಸಲವೂ ಬಜೆಟ್‌ಗಿಂತ ಎಷ್ಟೋ ಪಟ್ಟು ನಾವು ಜಾಸ್ತಿ ಖರ್ಚು ಮಾಡಿದ್ದೇವೆ. ಈ ವರ್ಷ ಕೂಡ ಮಾಡುತ್ತೇವೆ. ಈಗ ಕ್ವಾಲಿಟಿ ಏನು ಇದೆ, ಈ ಗುಣಮಟ್ಟ. ಗುಣಮಟ್ಟದ ಬಗ್ಗೆ ಗಂಭೀರವಾದಂತಹ ಪ್ರಶ್ನೆ ಇದೆ. ಈ ಗುಣಮಟ್ಟ ದೋಷ ಇರತಕ್ಕಂಥ ಗ್ರಾಮಗಳಲ್ಲಿ ನಾವು ಹೆಚ್ಚಿನ ಖರ್ಚು ಮಾಡಿ ಅದನ್ನು ಸರಿಪಡಿಸಬೇಕಾಗುತ್ತದೆ. ಬೇರೆ ಕಡೆಯಿಂದ ನೀರು ತರಬೇಕಾಗುತ್ತದೆ. ಅದಕ್ಕೋಸ್ಕರ ಈ ರಾಜೀವ್ ಗಾಂಧಿ ಸಬ್‌ಮಿಷನ್ ಇದೆ ಎಂಬುದು ತಮಗೆ ಗೊತ್ತಿದೆ. ಈಗಾಗಲೇ ರಾಜೀವ ಗಾಂಧಿ ಸಬ್‌ಮಿಷನ್ ಕೆಳಗಡೆ 28 ಪ್ರಾಜೆಕ್ಟ್‌ಗಳು ಸ್ಯಾಂಕ್ಷನ್ ಆಗಿವೆ. 192 ಹಳ್ಳಿಗಳಿಗೆ ಕ್ವಾಲಿಟಿ ಪ್ರಾಬ್ಲಮ್ ಇರತಕ್ಕ ಹಳ್ಳಿಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ. 28 ಪ್ರಾಜೆಕ್ಟ್ ವ್ಯಾಪ್ತಿಯಲ್ಲಿ 192 ಹಳ್ಳಿಗಳು ಬರುತ್ತವೆ. ಇದಕ್ಕೆ 74 ಕೋಟಿ ರೂಪಾಯಿ

ಔಟ್‌ಲೇ ಇದೆ. ಈ ಕೆಲಸ ನಡೆಯುತ್ತಿದೆ. 74 ಕೋಟಿ ರೂಪಾಯಿ ಔಟಲೇ 28 ಪ್ರಾಜೆಕ್ಟ್ಸ್ ಮತ್ತು 192 ಹಳ್ಳಿಗಳು. ಈಗ ನೆದರ್‌ಲ್ಯಾಂಡ್ಸ್ ಪ್ರಾಜೆಕ್ಟ್ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್ ಅವರು ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಸಾಕಷ್ಟು ಆತಂಕವನ್ನು ವ್ಯಕ್ತಪಡಿಸಿದರು. ಅದಕ್ಕೋಸ್ಕರವಾಗಿ ನಾವು ಈ ಮಾತನ್ನು ಹೇಳಬೇಕಾಗುತ್ತದೆ. ಪ್ರಾರಂಭದಲ್ಲಿ ನೆದರ್‌ಲ್ಯಾಂಡ್ಸ್ ಪ್ರಾಜೆಕ್ಟ್‌ನಲ್ಲಿ ಸ್ವಲ್ಪ ದೋಷಗಳು ಇದ್ದರೂ ಕೂಡ ಈಗ ಅದು ಸರಿಪಡಿಸಲಿಕ್ಕೆ ಆಗಿದೆ. ಮತ್ತು ಧಾರವಾಡ, ಗದಗ್, ಬಾಗಲಕೋಟೆ, ಬಿಜಾಪುರ ಜಿಲ್ಲೆಗಳಿಗೆ ಅದು ಅನ್ವಯಿಸುತ್ತದೆ. ಈ ನೆದರ್‌ಲ್ಯಾಂಡ್ಸ್ ಪ್ರಾಜೆಕ್ಟ್ ಅಡಿಯಲ್ಲಿ 201 ಹಳ್ಳಿಗಳಲ್ಲಿ ಈಗಾಗಲೇ ನೀರು ಕೊಡಲಿಕ್ಕೆ ಸಾಧ್ಯವಾಗಿದೆ. ಈ 201 ಹಳ್ಳಿಗಳ ಪೈಕಿ ಹೆಚ್ಚು ಕಡಿಮೆ 150 ಹಳ್ಳಿಗಳು ಈ ಲ್ಯಾಂಡ್ ಆರ್ಮಿಯಿಂದ ಮಾಡಿಸಿದ್ದೇವೆ. ಇದಕ್ಕೆ 87 ಕೋಟಿ ರೂಪಾಯಿ ಖರ್ಚಾಗಿದೆ. ಆದಕಾರಣ ನೆದರ್‌ಲ್ಯಾಂಡ್ಸ್ ಪ್ರಾಜೆಕ್ಟ್‌ನಲ್ಲಿ ಪ್ರಾರಂಭದಲ್ಲಿರತಕ್ಕ ದೋಷಗಳು ಈಗ ಅದನ್ನು ಸರಿಪಡಿಸಿ ಆ ಕೆಲಸ ಬಹಳ ತ್ವರಿತವಾಗಿ ಯಶಸ್ವಿಯಾಗಿ ನಡೆದಿದೆ ಎಂದು ಹೇಳಲಿಕ್ಕೆ ನಾನು ಕಷ್ಟಪಡುತ್ತೇನೆ. ಅನಂತರ ಬಾಬಲೇಶ್ವರ್ ಸ್ಕೀಮ್ ವಿಚಾರ ಮಾನ್ಯ ಶಿವಾನಂದ್ ಪಾಟೀಲ್ ಅವರು ಹೇಳಿದರು. ಇದು ಬಿಜಾಪುರ ತಾಲ್ಲೂಕ್‌ಗೆ ಬರುತ್ತದೆ. ಇದರ ಬಗ್ಗೆ ಪ್ರಸ್ತಾಪ ಮಾಡಿದರು. ಇದರ ಬಗ್ಗೆ ಹೇಳಬೇಕಾದರೆ 225 ಲಕ್ಷ ರೂಪಾಯಿ ಟೆಂಡರ್ ಆಗಿತ್ತು. ಆನಂತರ ಪುನಃ ಟೆಂಡರ್ ಮಾಡಿಸಿ 140 ಲಕ್ಷ ರೂಪಾಯಿಗೆ ಅದು ಅವಾರ್ಡ್ ಆಯಿತು. ಈಗ ನಾನು ಮುಚ್ಚುಮರೆ ಇಲ್ಲದಂತೆ ಹೇಳುತ್ತೇನೆ. ಏಕೆಂದರೆ ನನಗೆ ಟ್ರಾನ್ಸ್‌ಪರೆನ್ಸಿಯಲ್ಲಿ ವಿಶ್ವಾಸ ಇದೆ. ನಾನು ಯಾವುದಕ್ಕೂ ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಈಗ ಖರ್ಚಾಗಿದ್ದು, 180 ಲಕ್ಷ ರೂಪಾಯಿ. ಕಾರಣ ಏನೆಂದರೆ ಆ ಪೈಪ್‌ಗಳನ್ನು ಹಾರ್ಡ್ ರಾಕ್‌ನಲ್ಲಿ ಕೂಡಿಸಬೇಕಾಗಿತ್ತು. ಅದಕ್ಕೋಸ್ಕರ 180 ಲಕ್ಷ ರೂಪಾಯಿ ಖರ್ಚಾಗಿದೆ. ಈಗ ಯಶಸ್ವಿಯಾಗಿ ಅದು ಕಮೀಷನ್ ಆಗಿದೆ. ಮಾನ್ಯ ಸದಸ್ಯರಿಗೆ ಈ ವಿಷಯ ಗೊತ್ತಿದೆ. ಆದರೂ ಸಹ ಇದರ ಬಗ್ಗೆ ಬಹಳಷ್ಟು ಪ್ರಸ್ತಾಪ ಮಾಡಿದರು. ಏಕೆ ಪ್ರಸ್ತಾಪ ಮಾಡಿದರೋ ನನಗೆ ಗೊತ್ತಿಲ್ಲ. ಕೋಲಾರದ ಬಗ್ಗೆ ಮಾನ್ಯ ಭೈರೇಗೌಡರು ಪ್ರಸ್ತಾಪ ಮಾಡಿದರು. ಅವರು ನಮ್ಮ ಹಳೆಯ ಸ್ನೇಹಿತರು. ಭಾರೀ ಅನುಭವ ಇರತಕ್ಕವರು. ಕೋಲಾರ ಜಿಲ್ಲೆಯಲ್ಲಿ ಇನ್‌ಕಂಪ್ಲೀಟ್ಸ್ ವರ್ಕ್ ಇದೆ ಎಂದು ತಾವು ಹೇಳಿದಿರಿ. ನಾನು ಒಪ್ಪಿಕೊಳ್ಳುತ್ತೇನೆ. ಕಾರಣವೇನೆಂದರೆ ನೀವು ತಪ್ಪು ತಿಳಿದುಕೊಳ್ಳದೇ ಇದ್ದರೆ ಹೇಳುತ್ತೇನೆ. ಅಲ್ಲಿ ಬಹಳ ಇನ್‌ಡಿಸ್ಕ್ರಿಮಿನೇಟ್ ಆಗಿ ಪ್ರಾಜೆಕ್ಟ್‌ನ್ನು ಕೈಗೊಂಡಿದ್ದಾರೆ. ಅಂದರೆ ಎಷ್ಟು ಕಾಲಾವಧಿ ಎಂದು ನೋಡದೇ ಹಣ ನೋಡದೇ ಏನೂ ನೋಡದೇ, ಇನ್‌ಡಿಸ್ಕ್ರಿಮಿನೇಟ್ ಆಗಿ ನಾವು ಪ್ರಾಜೆಕ್ಟ್‌ನ್ನು ತೆಗೆದುಕೊಂಡರೆ ಕಷ್ಟ. ನೀವು ಹೇಳಿರುವುದನ್ನು ಹೇಳಿದ್ದೀರಿ. ಕೋಲಾರ ಜಿಲ್ಲೆಯಲ್ಲಿ ಒಟ್ಟಾರೆ ಹೇಳಬೇಕಾದರೆ ಇನ್‌ಕಂಪ್ಲೀಟ್ ಪ್ರಾಜೆಕ್ಟ್ ಜಾಸ್ತಿ ಇರುವುದಕ್ಕೆ ಇದು ಪ್ರಮುಖವಾದಂತಹ ಕಾರಣ. ಅದಕ್ಕೋಸ್ಕರ ಭೈರೇಗೌಡರಿಗೆ ಹೇಳುತ್ತಿದ್ದೇನೆ. ಅದಕ್ಕೋಸ್ಕರ ನಾವು ಈ ವರ್ಷದ ಕಾರ್ಯಕ್ರಮದಲ್ಲಿ ಒಂದು ಸಾವಿರ ಎಂಐಎಸ್,

ಅಂದರೆ ಮಿನಿ ವಾಟರ್ ಸಪ್ಲೈ ಸ್ಕೀಮ್ಸ್, ಇನ್ನೊಂದು ಸಾವಿರ ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್ಸ್ ಅನ್ನು ನಾವು ಈ ವರ್ಷದ ಕಾರ್ಯಕ್ರಮದಲ್ಲಿ ಸೇರಿಸುತ್ತಿದ್ದೇವೆ. ಅದನ್ನು ಒಂದೇ ವರ್ಷದಲ್ಲ ಪೂರೈಸಬೇಕು ಎಂದು ನಮ್ಮ ನಿರ್ಧಾರ ಇದೆ. ಏಕೆಂದರೆ ಒಂದೇ ವರ್ಷದಲ್ಲಿ ಮಾಡುವ ಕೆಲಸ ಐದು ವರ್ಷವಾದರೆ ಭ್ರಷ್ಟಚಾರ ಆಗುತ್ತದೆ. ಏನಾಗಬಾರದೋ ಅವೆಲ್ಲಾ ಆಗುತ್ತದೆ. ಆದಕಾರಣ ಒಂದೇ ವರ್ಷದಲ್ಲಿ ನನ್ನ ಅನುಭವದಲ್ಲಿ ಮಿನಿ ವಾಟರ್ ಸಪ್ಲೈ ಇದ್ದರೆ, ಒಂದೇ ವರ್ಷದಲ್ಲಿ ಪೂರೈಸುವುದಕ್ಕೆ ಏನೂ ತೊಂದರೆಯಿಲ್ಲ. ಪೈಪ್ಡ್ ವಾಟರ್ ಇದ್ದರೆ ಒಂದೊಂದು ಸಾರಿ ಎರಡು ವರ್ಷಗಳು ಆಗಬಹುದು. ಆದರೆ ಐದೈದು ವರ್ಷವಾದರೆ ನಮ್ಮ ವ್ಯವಸ್ಥೆಯಲ್ಲಿ ಏನಾದರೂ ತಪ್ಪು ಇದೆ ಎಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅದಕ್ಕೆ ಈ ತಪ್ಪನ್ನು ತೋರಿಸುವುದಕ್ಕೋಸ್ಕರ ನಾವು 1000 ಪೈಪ್ಡ್ ವಾಟರ್ ಅನ್ನು ಈ ವರ್ಷದ ಕಾರ್ಯಕ್ರಮದಲ್ಲಿ ತೋರಿಸಿದ್ದೇವೆ. ಒಂದೇ ಒಂದು ವರ್ಷದಲ್ಲಿ ಅದನ್ನು ಪೂರೈಸಬೇಕು ಎಂಬ ಉದ್ದೇಶ ಇದೆ. ಇದು ಸರ್ಕಾರದ ನಿರ್ಧಾರ ಇದೆ. ಪೂರ್ ಕ್ವಾಲಿಟಿ ವಿಚಾರ. ಮೊದಲು ನೀವು ಹೇಳಿದ್ದಕ್ಕೆಲ್ಲಾ ನಾವು ಉತ್ತರ ಕೊಡಬೇಕಲ್ಲ. ಇದರ ಬಗ್ಗೆ ಮಾನ್ಯ ಹನುಮೇಗೌಡರು ಬಹಳಷ್ಟು ಮಾತನಾಡಿದರು. ಪೂರ್ ಕ್ವಾಲಿಟಿ ಬಗ್ಗೆ, ಭ್ರಷ್ಟಚಾರದ ಬಗ್ಗೆ ಮಾತನಾಡಿದರು. ಈ ಪೂರ್ ಕ್ವಾಲಿಟಿ ಬಗ್ಗೆ ನಾವೇನು ಡಿಪಾರ್ಟ್‌ಮೆಂಟಲ್ ವರ್ಕ್ಸ್ ಮಾಡುತ್ತಿದ್ದೇವೆ. ಅದರಲ್ಲಿ ಪೂರ್ ಕ್ವಾಲಿಟಿ ಕಂಡು ಬರುತ್ತಿದೆ. ಅದರಲ್ಲಿ ಅನುಮಾನವೇ ಇಲ್ಲ. ಗುಣಮಟ್ಟವನ್ನು ಡಿಪಾರ್ಟ್‌ಮೆಂಟಲ್ ವರ್ಕ್ಸ್‌ನಲ್ಲಿ ಹೆಚ್ಚಿಸಬೇಕಾಗುತ್ತದೆ. ಕ್ವಾಲಿಟಿ ಅಷ್ಟೊಂದು ಚೆನ್ನಾಗಿಲ್ಲ ಎಂದು ನಾನು ಒಪ್ಪಲಿಕ್ಕೆ ತಯಾರಿದ್ದೇವೆ. ಅದಕ್ಕೋಸ್ಕರ ಎಲ್ಲಾ ಜಿಲ್ಲಾ ಪರಿಷತ್ ಕಾಮಗಾರಿಗಳು ಟೆಂಡರ್ ಮುಖಾಂತರ, ಟೆಂಡರ್ ಮುಖೇನ ಆಗಬೇಕು ಎಂದು ನಾವು ತೀರ್ಮಾನಕ್ಕೆ ಬಂದಿದ್ದೇವೆ. ಈಗ ಕೆಲವರು ಅದಕ್ಕೂ ಟೀಕೆ ಮಾಡುತ್ತಾರೆ. ಡಿಪಾರ್ಟ್‌ಮೆಂಟಲ್ ವರ್ಕ್ಸ್‌ನಲ್ಲಿ ಕಳಪೆ ಕೆಲಸ ಆಗುತ್ತಿದೆ, ಕ್ವಾಲಿಟಿ ಚೆನ್ನಾಗಿಲ್ಲ ಎನ್ನುತ್ತಾರೆ. ಟೆಂಡರ್ ಮಾಡಬೇಕಾದರೆ ಅದಕ್ಕೂ ಟೀಕೆ ಮಾಡುವ ಜನ ಇದ್ದಾರೆ.

ಶ್ರೀ ಕೆ.ಎಚ್.ಹನುಮೇಗೌಡ: ನಾನು ನಿನ್ನೆ ಹೇಳಿದ್ದು ಸಾಕಷ್ಟು ಹಣ ಬೋರ್ ಹಾಕುವುದಕ್ಕೆ ಖರ್ಚಾಗಿದೆ. ಹ್ಯಾಂಡ್ ಪಂಪನ್ನೂ ಫಿಕ್ಸ್ ಮಾಡಿದ್ದಾರೆ. ನೀರಾವರಿ ಸರಬರಾಜು ಯೋಜನೆಗಳಿಗೂ ಕೋಟ್ಯಾಂತರ ರೂಪಾಯಿ ಹಣ ಖರ್ಚಾಗಿದೆ. ಈಗ ಆಗಿರುವ ತೊಂದರೆ ಏನು ಅಂದರೆ ನೀವು ಜವಾಬ್ದಾರಿ ವಹಿಸಿದ್ದೀರಲ್ಲ, ಇಂಜಿನಿಯರ್ಸ್, ಅವರು ಇದರ ಕಡೆಗೆ ಗಮನ ಕೊಡುತ್ತಿಲ್ಲ. ಅವರು ಸುಳ್ಳು ಬಿಲ್ ಮಾಡಿಕೊಂಡು, ಈ ಮೆಂಬರ್‌ಗಳನ್ನು ಕಟ್ಟಿಕೊಂಡು ತಿರುಗುತ್ತಿದ್ದಾರೆ. ಅದನ್ನು ಕಡಿಮೆ ಮಾಡಿ, ಅದನ್ನು ತಪ್ಪಿಸಿ. ಈಗ ಹಾಕಿರುವ ಹಣ ಸಾಕು- ಸಧ್ಯಕ್ಕೆ ಕೆಲಸ ಮಾಡಿಸುವುದು ಹೇಳಿ.

ಶ್ರೀ ಎಂ.ವೈ.ಘೋರ್ಪಡೆ: ಅದನ್ನೇ ಹೇಳುತ್ತಿದ್ದೇನೆ. ನಾನು ಅದಕ್ಕೇ ಉತ್ತರ ಕೊಡುತ್ತಿದ್ದೇನೆ. ಈ ಇಂಜಿನಿಯರ್ಸ್ ಮಾಡುವ ಕೆಲಸದಲ್ಲಿ ಸಾಕಷ್ಟು ದೋಷ ಇದೆ

ಎಂದು ತಾವು ಹೇಳುತ್ತಿದ್ದೀರಿ. ಅದನ್ನು ಸರಿಪಡಿಸುವ ಅವಶ್ಯಕತೆ ಇದೆ. ಅವರು ಫಂಡ್ಸ್ ಮೆಂಟೆನೆನ್ಸ್‌ಗೋಸ್ಕರ ತೆಗೆದುಕೊಳ್ಳುತ್ತಾರೆ. ಕ್ಯಾಪಿಟಲ್ ವರ್ಕ್ಸ್ ಎಂದು ತೆಗೆದುಕೊಳ್ಳುತ್ತಾರೆ. ಮೈಂಟೆನೆನ್ಸ್‌ಗೋಸ್ಕರ ಎಷ್ಟು ಖರ್ಚಾಯಿತು? ಏತಕ್ಕೆ ಖರ್ಚಾಯಿತು? ಇದರ ಬಗ್ಗೆ ಸ್ವಲ್ಪ ಸ್ಪಷ್ಟವಾದಂತಹ ಚಿತ್ರ ನಮಗೆ ಇರಬೇಕು ಎಷ್ಟು ಸ್ಪಷ್ಟವಾಗಿರಬೇಕೋ ಅಷ್ಟು ಸ್ಪಷ್ಟವಾಗಿಲ್ಲ ಎಂದು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. Inefficiency of the Engineering Department. ಸ್ವಲ್ಪ ಕ್ಯಾಪಿಟಲ್ ಅಂಡ್ ಮೈಂಟೆನೆನ್ಸ್‌ಗೆ ಕೊಟ್ಟಿರತಕ್ಕಂಥ ಹಣ, ಯಾವ ರೀತಿ ಉಪಯೋಗ ಆಗುತ್ತಿದೆ? ಇದರ ಬಗ್ಗೆ ನಾವು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಇದರ ಒಂದು ಎವ್ಯಾಲ್ಯೂಯೇಷನ್ ಮಾಡಬೇಕು. ಅದರ ಬಗ್ಗೆ ಏನು ಮಾಡಬೇಕು ಎಂದು ನಾನು ಕೊನೆಗೆ ಹೇಳುತ್ತೇನೆ. ಸಧ್ಯಕ್ಕೆ ಇಷ್ಟು ಹೇಳುತ್ತೇನೆ. ಇದರಲ್ಲಿ ದೋಷ ಇಲ್ಲ ಎಂದು ನಾನು ಹೇಳಲಿಕ್ಕೆ ತಯಾರಿಲ್ಲ. ದೋಷ ಇದೆ. ಅದನ್ನು ಸರಿಪಡಿಸುವ ವಿಧಾನ ಏನು? ಅದರ ಬಗ್ಗೆ ನಾವು ಚರ್ಚೆ ಮಾಡೋಣ. ಇದಕ್ಕೋಸ್ಕರ ಈ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ಈ ರೀತಿ ಇದೆ, ಆದಕಾರಣ ನಾವು ಇದನ್ನು ಕೂಡ ವಿಕೇಂದ್ರೀಕರಣ ಮಾಡುವುದಕ್ಕೆ ಹೋಗಿದ್ದೇವೆ. ಮಾಡುತ್ತಿದ್ದೇವೆ. ಈಗ ಜಿಲ್ಲಾ ಮಟ್ಟದಲ್ಲಿ ಈ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ಹಳ್ಳಿ ಮಟ್ಟದಲ್ಲಿ ಯಾವ ಕೆಲಸ ಮಾಡಬೇಕೋ ಅದನ್ನು ಮಾಡುತ್ತಿಲ್ಲ, ಎನ್ನುತ್ತಾರೆ. ಅದಕ್ಕೋಸ್ಕರ ನಾನು ಹಿಂದೆ ಮಂತ್ರಿ ಇದ್ದಾಗ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಈ ರಿಪೇರಿ ಕೆಲಸ ನಡೆಯಬೇಕು ಎಂದು ನಾನೇ ಮಾಡಿದ್ದು.

1- 10 ಪಿ.ಎಂ

ಮೊಬೈಲ್ ಯೂನಿಟ್ಸ್ ಮಾಡಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಪ್ರತಿಯೊಂದು ಹಳ್ಳಿಗೆ ಹೋಗಿ ಬೋರ್‌ವೆಲ್ ಸರಿಯಾಗಿ ನಡೆಯುತ್ತಿದೆಯೆ ಅಥವ ಇಲ್ಲವೇ ಎಂಬುದನ್ನು ನೋಡಿ ರಿಪೇರಿ ಮಾಡುವ ಅವಶ್ಯಕತೆ ಇದ್ದರೆ ಮಾಡುವ ಕಾರ್ಯಕ್ರಮ ಒಂದೆರಡು ವರ್ಷ ಚೆನ್ನಾಗಿ ನಡೆಯಿತು. ಈಗ ವಿಶ್ವಬ್ಯಾಂಕ್‌ನವರು ಸಹ ಮೈನ್‌ಟೆನೆನ್ಸ್‌ನ್ನು ವಿಕೇಂದ್ರೀಕರಣ ಮಾಡಿ ಎಂದು ಹೇಳುತ್ತಿದ್ದಾರೆ. ಅಂದರೆ ಪೈಪ್ಡ್ ವಾಟರ್, ಮಿನಿ ವಾಟರ್ ಸ್ಕೀಮ್‌ಗಳೇನಿದೆ ಅದನ್ನು ಹಳ್ಳಿಯವರೆ ನೋಡಿಕೊಳ್ಳಲಿ ಎಂದು. ಪ್ರಾರಂಭದಲ್ಲಿ ಸ್ವಲ್ಪ ತೊಂದರೆಯಾದರು ಚಿಂತೆ ಇಲ್ಲ ಆದರೆ ಆ ತತ್ವವೇನಿದೆ ಅದಕ್ಕೆ ವಿರೋಧ ಮಾಡುವುದು ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ನಾವು ಬೋರ್‌ವೆಲ್ ರಿಪೇರಿ ಕೆಲಸ ತಾಲ್ಲೂಕು ಮಟ್ಟದಲ್ಲಿ ಆಗಬೇಕು, ಬೇರೆ ಮೈನ್‌ಟೆನೆನ್ಸ್ ಕೆಲಸ ಹಳ್ಳಿ ಮಟ್ಟದಲ್ಲೇನಿದೆ ಅವರಿಗೆ ಏನಾದರು ಕಷ್ಟವಾದರೆ, ತೊಂದರೆಯಾದರೆ ಅವರು ಜಿಲ್ಲಾ ಪಂಚಾಯಿತಿಯವರಿಂದ ಮಾಡಿಸಬಹುದು. ಜಿಲ್ಲಾಪಂಚಾಯಿತಿಯವರು ನಮ್ಮ ಜವಾಬ್ದಾರಿ ಇಲ್ಲವೆಂದು ಹೇಳಬಾರದು. ಆ ರೀತಿ ಹೇಳಲು ಅವಕಾಶವಿಲ್ಲ. 13-4-2000ದ ನಮ್ಮ ಸುತ್ತೋಲೆಯಲ್ಲಿ ಇದರ ಬಗ್ಗೆ

ಸ್ಪಷ್ಟವಾಗಿ ಹೇಳಿದ್ದೇವೆ. ಈ ಜವಾಬ್ದಾರಿಯನ್ನು ತಾಲ್ಲೂಕು ಮಟ್ಟದಲ್ಲಿ, ಹಳ್ಳಿಯ ಮಟ್ಟದಲ್ಲಿ ಮಾಡುತ್ತಿದ್ದರು ಅವರಿಗೆ ಸಹಾಯವೇನಾದರೂ ಬೇಕಾಗಿದ್ದರೆ ಜಿಲ್ಲಾ ಮಟ್ಟದ ಸಿಬ್ಬಂದಿಯವರು ಸಹಾಯ ಮಾಡಬೇಕು. ಅವರು ನಮ್ಮ ಜವಾಬ್ದಾರಿ ಇಲ್ಲವೆಂದು ಹೇಳಬಾರದು. ಆದರೂ ಸಹ ಇದರ ಬಗ್ಗೆ ಇಷ್ಟೊಂದು ವಿರೋಧ ಏಕೆ ಬರುತ್ತಿದೆಯೆಂದು ನನಗೆ ಅರ್ಥವಾಗುತ್ತಿಲ್ಲ. ಜಿಲ್ಲಾ ಮಟ್ಟದ ಎಂಜಿನಿಯರ್‌ಗಳೇನಿದ್ದಾರೆ ಅವರಿಗೆ ಈ ತೀರ್ಮಾನ ಸರಿಹೋಗುತ್ತಿಲ್ಲವೆಂದು ನನಗನ್ನಿಸುತ್ತಿದೆ. ಬೋರ್‌ವೆಲ್ ಮೈನ್‌ಟೆನೆನ್ಸ್ ತಾಲ್ಲೂಕು ಮಟ್ಟದಲ್ಲಿ ಆಗಬೇಕು. ಏಕೆಂದರೆ ಹತ್ತಿರ ಆ ವ್ಯವಸ್ಥೆ ಇದ್ದರೆ ಜನರು ಅವರನ್ನು ಕೆಲಸ ಮಾಡುವವರೆಗೆ ಬಿಡುವುದಿಲ್ಲ. ರಿಪೇರಿ ಮಾಡುವವರೆಗೆ ಬಿಡುವುದಿಲ್ಲ. ಪೈಪ್ಡ್ ವಾಟರ್, ಮಿನಿ ವಾಟರ್ ಏನಿದೆ ಅದರಲ್ಲಿ ತೊಂದರೆ ಬಂದರೆ ರಿಪೇರಿ ಮಾಡರು ತಕ್ಷಣ ಸಾಕಷ್ಟು ಶಕ್ತಿ ಇಲ್ಲದಿದ್ದರೆ ಜಿಲ್ಲಾಮಟ್ಟದ ಸಿಬ್ಬಂದಿಗಳೇನಿದ್ದಾರೆ ಅವರು ಸಹಾಯ ಮಾಡಬೇಕು. ಅವರುಗಳು ಇಲ್ಲವೆಂದು ಹೇಳಬಾರದು. ಇದು ನಮ್ಮ ಜವಾಬ್ದಾರಿಯಲ್ಲವೆಂದು ತಪ್ಪಿಸಿಕೊಳ್ಳುವುದು ಸರಿಯಲ್ಲ. ಇದರ ಬಗ್ಗೆ ಈ ಸುತ್ತೋಲೆಯಲ್ಲಿ ಬಹಳ ಸ್ಪಷ್ಟವಾಗಿ ತಿಳಿಸಲಾಗಿದೆ. ಈ ರೀತಿ ಅಧಿಕಾರಿಗಳು ಏನಾದರೂ ಉತ್ತರವನ್ನು ಕೊಟ್ಟರೆ ಅವರಿಗೆ ಈ ಸುತ್ತೋಲೆಯನ್ನು ತೋರಿಸಿ. ಎಲ್ಲ ಸದಸ್ಯರಿಗೂ ಈ ಸುತ್ತೋಲೆಯನ್ನು ಕಳಿಸುತ್ತೇನೆ. ಕುಡಿಯುವ ನೀರಿನ ಸಮಸ್ಯೆ ಜಾಸ್ತಿಯಾದಾಗ ಇದು ನಮಗೆ ಬರುವುದಿಲ್ಲ, ನಾವು ಇದರ ಕೆಲಸ ಮಾಡುವುದಿಲ್ಲವೆಂದು ಜಿಲ್ಲಾ ಮಟ್ಟದ ಎಂಜಿನಿಯರ್ ಅಧಿಕಾರಿಗಳು ಹೇಳಿದರೆ ಆಗ ಈ ಸುತ್ತೋಲೆಯನ್ನು ಅವರಿಗೆ ತೋರಿಸಿ. ಅವರಿಂದ ಕೆಲಸವನ್ನು ಮಾಡಿಸಿ. ಕ್ರಮೇಣ ಈ ಮೈನ್‌ಟೆನೆನ್ಸ್‌ನ್ನು ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಸಾಕಷ್ಟು ಮಾಡಲು ಸಾಧ್ಯವಾಗುತ್ತದೆ.

ಶ್ರೀ ಬಿ.ಬಿ.ಶಿವಪ್ಪ: ತಾವು ಮೈನ್‌ಟೆನೆನ್ಸ್ ಬಗ್ಗೆ ಮಾತನಾಡುತ್ತಿದ್ದೀರಿ ತಾಲ್ಲೂಕು ಪಂಚಾಯಿತಿಗೆ ಮೈನ್‌ಟೆನೆನ್ಸ್‌ನ್ನು ಕೊಟ್ಟಿದ್ದೀರಿ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಅವರಿಗೆ ಬೇಕಾದಂಥ ಸಾಮಗ್ರಿಗಳು ಸಿಗುವುದಿಲ್ಲ, ಅವರ ಹತ್ತಿರ ಅದು ಇರುವುದಿಲ್ಲ. ಅದು ಜಿಲ್ಲಾ ಪಂಚಾಯಿತಿಯಿಂದಲೇ ಬರಬೇಕಾಗುತ್ತದೆ. ಆದ್ದರಿಂದ ಆ ಸಾಮಗ್ರಿಯನ್ನು ಸ್ಟಾಕ್ ಮಾಡುವ ವ್ಯವಸ್ಥೆ ಸಹ ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಬರಬೇಕು.

ಶ್ರೀ ಎಂ.ವೈ.ಘೋರ್ಪಡೆ: ಎಷ್ಟೋ ಕಡೆ ಯಾವ ಸಾಮಾನು ಬೇಕಾಗಿಲ್ಲ ಅದನ್ನು ಬಹಳಷ್ಟು ಸ್ಟಾಕ್ ಮಾಡಿ ಇಟ್ಟಿದ್ದಾರೆ. ಅದನ್ನು ನಾನು ಗಮನಿಸಿದ್ದೇನೆ. ಅದಕ್ಕೆ ಯಾರು ಜವಾಬ್ದಾರರು?

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಅಲ್ಲಿ ಕಳಪೆ ಪೈಪುಗಳು, ನಲ್ಲಿಗಳು ಇದೆ. ನಲ್ಲಿಯನ್ನು ಹಾಕಿದ ಕೂಡಲೆ ತಿರುವಲು ಆಗುವುದಿಲ್ಲ. ಕಮೀಷನ್‌ಗೋಸ್ಕರ

ಎಲ್ಲೋ ತೆಗೆದುಕೊಂಡು ಲಾಟ್‌ಗಟ್ಟಲೆ ಇಟ್ಟುಬಿಟ್ಟಿರುತ್ತಾರೆ. ಅದರ ಬಗ್ಗೆ ತಾವು ಚಿಂತನೆ ಮಾಡಬೇಕು.

ಶ್ರೀ ಎಂ.ವೈ.ಘೋರ್ಪಡೆ: ಅಂಥ ಅಧಿಕಾರಿಗಳಿಗೆ ವಿಕೇಂದ್ರಿಕರಣ ವ್ಯವಸ್ಥೆ ಬೇಕಾಗಿಲ್ಲ.

ಶ್ರೀ ಬಿ.ಸೋಮಶೇಖರ್: ತಾವು ಹೇಳುವುದು ಸರಿ. ತಾಲ್ಲೂಕು ಪಂಚಾಯಿತಿಗಳಿಗೆ ಮೈನ್‌ಟೆನೆನ್ಸ್ ನೀಡುವ ಬಗ್ಗೆ ಸುತ್ತೋಲೆ ಕಳಿಸಿದ್ದೀರಿ, ಇದು ಬಹಳ ಸ್ವಾಗತಾರ್ಹವಾದುದು. It is a welcome move. Instructions have already gone, but they have not yet taken up repairwork. Only to manage the units, proper personnel must be there in the Taluk Panchayat.

ತಾಲ್ಲೂಕು ಪಂಚಾಯಿತಿಯಲ್ಲಿ ಅದನ್ನು ಮೈನ್‌ಟೆನ್ ಮಾಡಲು ಸೂಕ್ತವಾದ ಸಿಬ್ಬಂದಿ ಇರಬೇಕು ಮತ್ತು ಅವರಿಗೆ ಇದರ ಬಗ್ಗೆ ತರಬೇತಿಯನ್ನು ಕೊಡಬೇಕು. ಆದರೆ ತಮ್ಮ ನಿರ್ಧಾರವೇನಿದೆ ಅದು ಸ್ವಾಗತಾರ್ಹವಾದುದು.

ಶ್ರೀ ಕೆ.ಶ್ರೀನಿವಾಸಗೌಡ: ತಾಲ್ಲೂಕು ಪಂಚಾಯಿತಿಗೇನು ಈ ಕೆಲಸವನ್ನು ವಹಿಸುತ್ತಿದ್ದೀರಿ, ಅದಕ್ಕೆ ಬೇಕಾಗಿರುವ ಇನ್‌ಫ್ರಾಸ್ಟ್ರಕ್ಚರನ್ನು ಪಿ.ಹೆಚ್.ಇ.ನಲ್ಲಿನ ಇಂಜಿನಿಯರಿಂಗ್ ಸೆಕ್ಷನ್‌ನಲ್ಲಿ ಇಟ್ಟಿದ್ದೀರಿ. ಅದನ್ನು ಕೂಡಲೆ ವರ್ಗಾವಣೆಯನ್ನು ತಾಲ್ಲೂಕು ಪಂಚಾಯಿತಿಗೆ ಮಾಡಬೇಕು. ಇವತ್ತು ಬೇಸಿಗೆ ಕಾಲ ಪ್ರತಿ ದಿವಸ ಕಷ್ಟವಾಗುತ್ತದೆ. ಆದ್ದರಿಂದ ಇವತ್ತೇ ಸುತ್ತೋಲೆ ಹೊರಡಿಸಿ ಅವರದ್ದು ಏನೇನಿದೆ ಅದನ್ನು ತಾಲ್ಲೂಕು ಪಂಚಾಯಿತಿಗೆ ವರ್ಗಾವಣೆ ಮಾಡಿದರೆ ಸರಿಯಾಗುತ್ತದೆ ಈಗ ಕೇವಲ ಕಾಗದದ ಮೇಲೆ ವರ್ಗಾವಣೆ ಮಾಡಿರುವುದರಿಂದ ಪ್ರಯೋಜನವಾಗುವುದಿಲ್ಲ.

ಶ್ರೀ ಎಂ.ವೈ.ಘೋರ್ಪಡೆ: ನಮಗೆ ಏನು ಹೇಳುತ್ತಿದ್ದೀರಿ ಅದನ್ನು ನೇರವಾಗಿ ತಿಳಿಸಲು ಬೇಕಾದರೆ ವಿಭಾಗಗಳಿಗೆ ಭೇಟಿ ಕೊಡುತ್ತೇನೆ. ವಿಶ್ವಬ್ಯಾಂಕ್ ಯೋಜನೆಯ ಬಗ್ಗೆ ಸಾಕಷ್ಟು ಟೀಕೆಯಾಗಿದೆ. ಅದರ ಕೆಲಸಗಳು ಸರಿಯಾಗಿ ಆಗಿಲ್ಲ ಇದರ ಎವಾಲ್ಯುಯೇಷನ್ ಮಾಡಬೇಕೆಂದು ಹೇಳಿದ್ದಾರೆ. ಈ ಎವಾಲ್ಯುಯೇಷನ್ ತತ್ವವೇನಿದೆ ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಮತ್ತು ಟಾಟಾ ಕನ್ಸ್‌ಲ್ಟೆನ್ಸಿ ಸರ್ವೀಸ್‌ಗೆ ಈ ಕೆಲಸವನ್ನು ವಹಿಸಿಕೊಡಬೇಕೆಂದು ನಮ್ಮ ಉದ್ದೇಶವಾಗಿದೆ. ವಿಶ್ವಬ್ಯಾಂಕಿನ ಕೆಲಸವನ್ನು ಎವಾಲ್ಯುಯೇಟ್ ಮಾಡಲು ಅವರಿಗೆ ವಹಿಸಬೇಕೆಂದಿದ್ದೇವೆ. ಇದಕ್ಕೆ ವಿಶ್ವಬ್ಯಾಂಕ್‌ನವರು ಒಪ್ಪಿಗೆಯನ್ನು ಈಗಾಗಲೆ ಕೊಟ್ಟಿದ್ದಾರೆ. ಸಧ್ಯದಲ್ಲಿ ಈ ಕೆಲಸ ಪ್ರಾರಂಭವಾಗುತ್ತದೆ. ಏಕೆಂದರೆ ತಾಂತ್ರಿಕವಾದ ದೃಷ್ಟಿಯಿಂದ ಶುದ್ಧವಾಗಿರಬೇಕು,

ಯಾರದ್ದೇ ಹೆಸರು ಬರಬಾರದು, ಆದ್ದರಿಂದ ಟಾಟಾ ಕನ್‌ಸಲ್ಟೆನ್ಸಿಯವರು ಯು ಕೆಲಸವನ್ನು ಮಾಡಲಿ. ಟೆಕ್ನಿಕಲ್ ಕ್ವಾಲಿಟಿ ನೋಡಲಿ, ಪ್ರೊಸೀಜರ್ ಫಾರ್ ಎಗ್ನಿಕ್ಯೂಷನ್ ನೋಡಲಿ, adequacy of institutional arrangement ಇವೆಲ್ಲ ಅವರ ವ್ಯಾಪ್ತಿಗೆ ನಾವು ಕೊಡುತ್ತೇವೆ. ಅದರಲ್ಲಿ ಏನಾದರೂ ದೋಷವಿದ್ದರೆ ನಾವೆಲ್ಲರೂ ಸೇರಿ ಸರಿಪಡಿಸೋಣ. ಸಿಮಿಲರ್ ಎವಾಲ್ಯುಯೇಷನ್ ಫಾರ್ ಅದರ್ ಸ್ಕೀಮ್ಸ್‌ಗೆ ಸಹ ಬೇಕಾಗುತ್ತದೆ. ಈ ರೀತಿಯಾಗಿ similarly evaluation by external expertsನ್ನು ಬೇರೆ ಸ್ಕೀಮ್‌ಗಳಲ್ಲಿ ಮಾಡಿದರೆ ಸೂಕ್ತವೆಂದು ಅನ್ನಿಸುತ್ತದೆ. ನಮ್ಮ ಸರ್ಕಾರದ ದೃಷ್ಟಿಯಲ್ಲಿ ಮತ್ತು ನನ್ನ ದೃಷ್ಟಿಯಲ್ಲಿ ನೀರಿನ ಅಂತರ್ಜಲದ ಮಟ್ಟವೇನು ಕೆಳಕ್ಕೆ ಹೋಗುತ್ತಿದೆ ಅದು ಮೂಲಭೂತವಾದ ಪ್ರಶ್ನೆಯಾಗಿದೆ. 1972ರಲ್ಲಿ ಮಾನ್ಯ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಗುಲ್ಬರ್ಗಾದಲ್ಲಿ ಬರಗಾಲ ಬಂದಿದ್ದಾಗ ನಾನು ಹಣಕಾಸಿನ ಸಚಿವನಾಗಿದ್ದೆ. ನನ್ನನ್ನು ಪರಿಶೀಲನೆಗಾಗಿ ಕಳಿಸಿದ್ದರು. ಆಗ ಬೋರ್‌ವೆಲ್‌ಗಳು ಇರಲಿಲ್ಲ. ಸೇದುವ ಬಾವಿಯಿಂದ ಜನರು ಬದುಕುತ್ತಿದ್ದರು. ಆದರೆ ಇವತ್ತು ಸೇದುವ ಬಾವಿಯಿಂದ ಜನರು ಬದುಕಲು ಸಾಧ್ಯವಿಲ್ಲ. ಬರಗಾಲ ಬಂದಾಗ, ಬಿಸಿಲು ಜಾಸ್ತಿಯಾದಾಗ ಆಗತಾನೆ ಜಾರಿಗೆ ಬಂದಿದ್ದ ಬೋರ್‌ವೆಲ್ ಸ್ಕೀಮ್ ಪ್ರಕಾರ ನಾನೇ ಆರೇಳು ಕಡೆ ಹಾಕಿಸಿದೆ. ಬೋರ್‌ವೆಲ್ ಹಾಕುವ ಕ್ರಮ ನಮ್ಮ ರಾಜ್ಯದಲ್ಲಿ 1972ರಲ್ಲಿ ಪ್ರಾರಂಭವಾಯಿತು. ಈಗ 800 ಅಡಿಗೆ ಹೋದರು ಸಹ ನೀರು ಸಿಗುವುದಿಲ್ಲ. 1972ರಿಂದ ಇಲ್ಲಿಯವರೆಗಿನ ಮೂವತ್ತು ವರ್ಷಗಳ ಅವಧಿಯಲ್ಲಿ ನೀರಿನ ಅಂತರ್ಜಲದ ಮಟ್ಟ ಎಷ್ಟು ಕೆಳಕ್ಕೆ ಹೋಗಿದೆಯೆಂಬುದನ್ನು ತಾವೆಲ್ಲಾ ಗಮನಿಸಬೇಕು. ಕೇವಲ ಪಕ್ಷದ ದೃಷ್ಟಿಯಿಂದ ಇದನ್ನು ಮಾತನಾಡುವುದಲ್ಲ, ಇದು ಗಂಭೀರವಾದ ಪ್ರಶ್ನೆ. ಇದನ್ನು ಹಾಗೆಯೆ ಬಿಟ್ಟರೆ ಮುಂದಿನ ಹತ್ತು ಇಪ್ಪತ್ತು ವರ್ಷಗಳಲ್ಲಿ ಏನಾಗುತ್ತದೆ ಎಂಬ ಬಗ್ಗೆ ಯಾರಿಗೂ ಯೋಚನೆ ಮಾಡಲು ಸಾಧ್ಯವಾಗುವುದಿಲ್ಲ. ಇಂದು ಬೋರ್‌ವೆಲ್‌ಗಳಲ್ಲಿ ಬಹಳ ಕಾಂಪಿಟೇಷನ್ ಆಗುತ್ತಿದೆ. ರೆಗ್ಯುಲೇಷನ್ ವ್ಯವಸ್ಥೆ ಯಾವುದು ಇಲ್ಲ. ಇದರ ರೆಗ್ಯುಲೇಟರಿ ಅಥಾರಿಟಿ ಇರಬೇಕು. ಇದಕ್ಕೆ ಸಂಬಂಧಪಟ್ಟಂತೆ ಒಂದು ಬಿಲ್ಲು ಇದೇ ಮನೆಯಲ್ಲಿ ಪಾಸ್ ಆಗಿದೆ. ಆದರೆ ಅದಕ್ಕೆ ಇನ್ನು ರಾಷ್ಟ್ರಪತಿಯವರ ಒಪ್ಪಿಗೆ ಬರಲಿಲ್ಲ.

ಈ ಬಿಲ್ಲಿಗೆ ಪ್ರೆಸಿಡೆಂಟ್ ಅಸೆಂಟ್ ಕೊಡಬೇಕಾದರೆ Ministry of Law and Justice and Ministry of Water Resources ಅವರನ್ನು ಕನ್‌ಸಲ್ಟ್ ಮಾಡಿ ಕೊಡುತ್ತಾರೆ. ಅದನ್ನು ಕೊಡಬೇಕೆಂದು ನಾವೆಲ್ಲರೂ ಕೂಡ ಒತ್ತಾಯ ಮಾಡೋಣ. ಇದೇ ಮನೆಯಲ್ಲಿ ಪಾಸಾಗಿರತಕ್ಕಂಥ ಬಿಲ್ ಪ್ರೆಸಿಡೆಂಟ್ ಅಸೆಂಟ್ ಪಡೆದು ಬಂದನಂತರ ಅದನ್ನು ಕಾರ್ಯಗತ ಮಾಡುವುದರಲ್ಲಿ ನಮಗೆ ನಿಮ್ಮೆಲ್ಲರ ಸಹಕಾರದ ಅಗತ್ಯವಿದೆ. ಆರ್ಟಿಫಿಷಿಯಲ್ ರೀಚಾರ್ಜ್ ಮೆಶರ್ಸ್ ಮತ್ತು ವಾಟರ್‌ಶೆಡ್ ಡೆವಲಪ್‌ಮೆಂಟ್ ವಿಷಯ ಬಹಳ ಪ್ರಾಮುಖ್ಯವಾದುದು. ಕುಡಿಯುವ ನೀರಿನ

ದೃಷ್ಟಿಯಿಂದ ಎಲ್ಲೆಲ್ಲಿ ಕುಡಿಯುವ ನೀರಿನ ತೊಂದರೆ ಇದೆ, ಅಲ್ಲಿ ನಾವು ಅಂಡರ್‌ಗ್ರೌಂಡ್ ವಾಟರ್ ಕಾಪಾಡಲಿಕ್ಕೆ ಏನೇನು ಮಾಡಬೇಕೋ ಆ ಎಲ್ಲಾ ಕ್ರಮಗಳನ್ನು ಮಾತದೇ ನಾವು ಬರೇ ಬೋರ್‌ವೆಲ್‌ಗಳನ್ನೇ ಹಾಕುತ್ತಾ ಹೋದರೆ ಅದರಿಂದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಲಿಕ್ಕೆ ಸಾಧ್ಯವಾಗುವುದಿಲ್ಲ. ನಿನ್ನೆ ಮತ್ತು ಮೊನ್ನೆ ಬೆಳಗಾಂನಿಂದ ಕೆಲವು ಸ್ನೇಹಿತರು ಬಂದಿದ್ದರು. ಅಲ್ಲಿಯ 22 ಹಳ್ಳಿಗಳ ಬೆಲ್ಟ್ ಒಂದರಲ್ಲಿ ಬಹಳ ಕುಡಿಯುವ ನೀರಿನ ಹಾಹಾಕಾರ ಇದೆ ಎಂದು ಅವರು ಹೇಳಿದರು. ನಾನು ಲೆಕ್ಕ ತೆಗೆದು ನೋಡಿದರೆ ಈ 22 ಹಳ್ಳಿಗಳಲ್ಲಿ ಸರಾಸರಿ ಹಳ್ಳಿಯೊಂದರಲ್ಲಿ 15 ಬೋರ್‌ವೆಲ್ಸ್ ಹಾಕಿರುವುದು ಕಂಡುಬಂದಿದೆ. ಆದರೂ ಕೂಡ ಅಲ್ಲಿ ನೀರಿನ ಮಟ್ಟ ಕೆಳಕ್ಕೆ ಹೋಗಿದೆ. ನಾನು ಈ ಉದಾಹರಣೆಯನ್ನು ಈಗ ಏಕೆ ಕೊಟ್ಟೆ ಎಂದರೆ, ಕೇವಲ ಬೋರ್‌ವೆಲ್ಸ್‌ಗಳನ್ನು ಜಾಸ್ತಿ ಮಾಡಿ ಸಮಸ್ಯೆಯನ್ನು ನಾವು ಪರಿಹರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ನನ್ನ ದೃಷ್ಟಿಯಲ್ಲಿ ಇದರ ಬಗ್ಗೆ ಒಂದು ಪ್ಲಾನೇ ಆಗಬೇಕು. ಅಂದರೆ ವಾಟರ್ ರೀ-ಜನರೇಷನ್ ಪ್ಲಾನ್‌ವೊಂದನ್ನು ಮಾಡಬೇಕು. ಪ್ರತಿಯೊಂದು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್‌ನಲ್ಲಿ ಅಂಡರ್‌ಗ್ರೌಂಡ್ ವಾಟರ್ ಕಾಪಾಡಲಿಕ್ಕೆ ಎಲ್ಲೆಲ್ಲಿ ನಾವು ಚೆಕ್‌ಡ್ಯಾಮ್ಸ್ ಮಾಡಬಹುದು, ಎಲ್ಲೆಲ್ಲಿ ಕೆರೆ ಮಾಡಬಹುದು ಎಲ್ಲೆಲ್ಲಿ ಹೂಳು ತೆಗೆಯುವ ಕೆಲಸ ಮಾಡಬಹುದು, ಇನ್ನಿತರ ಯಾವುದೇ ಕೆಲಸ ಹೇಗೆ ಮಾಡಬಹುದು, ಎಂಬ ಬಗ್ಗೆ ಪ್ಲಾನ್ ಮಾಡಬೇಕು. ನೀರು ನಿಲ್ಲಿಸಿದ ತಕ್ಷಣ ವಾಟರ್ ಲೆವೆಲ್ ಜಾಸ್ತಿಯಾಗುತ್ತದೆ. ಕೋಲಾರದಲ್ಲಿ ಎಷ್ಟೊಂದು ತೊಂದರೆ ಇದೆ ಅಲ್ಲವೇ? ಅಲ್ಲಿ ಇನ್ನೊಂದು ತಿಂಗಳಲ್ಲಿ ಮಳೆ ಬಂದರೆ ಅಲ್ಲಿ ಯಾವ ಸಮಸ್ಯೆಯೂ ಇರುವುದಿಲ್ಲ. ಚಿಕ್ಕಮಗಳೂರಿನಲ್ಲಿಯೂ ಕೂಡ ಅಷ್ಟೆ. ನಾನು ಅಲ್ಲಿಗೆ ಭೇಟಿ ನೀಡಿದ್ದೆ. ಅಲ್ಲಿಯೂ ಕೂಡ ಅಕ್ಯೂಟ್ ಪ್ರಾಬ್ಲಂ ಇರುವುದು ಕೇವಲ ಕೆಲವೇ ದಿನಗಳು ಮಾತ್ರ, ಒಂದು ತಿಂಗಳು ಎಂದು ಮಾತ್ರ ಇಟ್ಟುಕೊಳ್ಳಬಹುದು. ಒಮ್ಮೆ ಮಳೆ ಬಂದ ತಕ್ಷಣ ಅಲ್ಲಿ ಬೋರ್‌ವೆಲ್‌ಗಳು ಹಾಕಿದ್ದೆಷ್ಟು? ಅದರಿಂದ ಆದ ಉಪಯೋಗವೆಷ್ಟು? ಎಂಬ ವಿವರಗಳನ್ನು ಯಾರೂ ಕೂಡ ನೋಡಲಿಕ್ಕೆ ತಯಾರಿರುವುದಿಲ್ಲ. ಆದ ಕಾರಣ ಬೋರ್‌ವೆಲ್‌ಗಳಿಗಿಂತ ವಾಟರ್ ಲೆವೆಲ್ ಕಾಪಾಡುವಂತಹ ಸಮಗ್ರವಾದಂತಹ ಶಾಸ್ತ್ರೀಯವಾದಂತಹ ಪ್ರಯತ್ನ ನಾವು ಮಾಡದೇ ಹೋದರೆ ಕರ್ನಾಟಕದ ರಾಜ್ಯದ 70 ಲಕ್ಷ ಕುಟುಂಬಗಳಿಗೆ ನಾವು ಕುಡಿಯುವ ನೀರು ಕೊಡುತ್ತೇವೆ ಎಂಬ ಮಾತನ್ನು ಉಳಿಸಿಕೊಂಡು ಹೋಗುವುದಕ್ಕೆ ನಮಗೆ ಸಾಧ್ಯವಾಗುವುದಿಲ್ಲ. ಈ ಪ್ಲಾನ್ ಅನ್ನು ಯಾರು ಮಾಡಬೇಕು ಎಂದು ತಾವು ಕೇಳಬಹುದು. ನಾವು ಇದಕ್ಕಾಗಿ ಬೇರೆಯವರನ್ನು ನೇಮಿಸಿಕೊಳ್ಳಬೇಕಾಗಿಲ್ಲ. ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿಗಳನ್ನು ನಾವು ಕಾನೂನಿನ ಪ್ರಕಾರ ರಚಿಸ ಬೇಕಾಗಿತ್ತು, ಆದರೆ ಆ ಕೆಲಸವನ್ನು ನಾವು ಮಾಡಿಲ್ಲ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈ ಚುನಾವಣೆ ಆದ ತಕ್ಷಣ ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿಗಳಿಗೆ ಈ ಕೆಲಸವನ್ನು ವಹಿಸಿಕೊಡಬೇಕು. ಎಕ್ಸ್‌ಪರ್ಟ್ಸ್ ಮತ್ತು ಕನ್ಸಲ್‌ಟೆಂಟ್ಸ್‌ನ ಅವರು ಉಪಯೋಗಿಸಿಕೊಳ್ಳಲಿ. ಆದರೆ ತಕ್ಷಣ

ಅವರು ಅವರವರ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ವಾಟರ್ ಕನ್ಸರ್ವೇಷನ್ ಮಾಡಲಿಕ್ಕೆ ಅಂದರೆ ಸಂಪೂರ್ಣವಾಗಿ ಕೊಳವೆ ಬಾವಿಗಳಾಗಲೀ ಅಥವಾ ಯಾವುದೇ ಬಾವಿಗಳಾಗಲೀ ಅದರ ವಾಟರ್ ಲೆವೆಲ್ ಕಾಪಾಡುವುದಕ್ಕೆ ಏನೇನು ಮಾಡಬೇಕು ಅಂದರೆ ವಾಟರ್‌ಶೆಡ್ ಡೆವಲಪ್‌ಮೆಂಟ್ ಏನೇನು ಮಾಡಬೇಕು ಎಂಬ ಬಗ್ಗೆ ಪ್ಲಾನ್ ಮಾಡಬೇಕು. ಕುಡಿಯುವ ನೀರಿನ ದೃಷ್ಟಿಯಿಂದ ಇದನ್ನು ಯಾವ ರೀತಿ ಬಲಪಡಿಸಬೇಕು ಎಂಬ ಬಗ್ಗೆ ಸಲಹೆ ನೀಡಬೇಕು. ಬೇರೆ ಬೇರೆ ತಾಲ್ಲೂಕುಗಳಲ್ಲಿ ಮತ್ತು ಜಿಲ್ಲೆಗಳಲ್ಲಿ ಬೇರೆ ಬೇರೆ ರೀತಿಯ ಪರಿಸ್ಥಿತಿಗಳು ಇರುತ್ತವೆ. ಆದಕಾರಣ ಈ ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿಗಳು ಇದನ್ನು ತಮ್ಮ ಮೊದಲ ಕೆಲಸವನ್ನಾಗಿ ಮಾಡಬೇಕು. ಅವುಗಳು ಆ ಕೆಲಸವನ್ನು ಮಾಡಿ ನಮ್ಮ ಎಲ್ಲಾ ಕಾರ್ಯಕ್ರಮಗಳಲ್ಲಿ ಆ ಒಂದು ಕಾರ್ಯಕ್ರಮಕ್ಕೆ ನಾವು ಆದ್ಯತೆಯನ್ನು ಕೊಟ್ಟರೆ ಮಾತ್ರ ಕುಡಿಯುವ ನೀರಿನ ಸಮಸ್ಯೆಯನ್ನು ನಾವು ಸ್ವಲ್ಪಮಟ್ಟಿಗೆ ಸಾಲ್ವ್ ಮಾಡಿದಂತಾಗುತ್ತದೆ. ಹೂಳು ತೆಗೆಯುವ ಕೆಲಸ ಸಹ ಮಾಡಬಹುದು. ನಮ್ಮಲ್ಲಿ ಬೇಕಾದಷ್ಟು ಕೆರೆಗಳಿವೆ. ನೂರು ಎಕರೆಗಿಂತ ಕಡಿಮೆ ವಿಸ್ತೀರ್ಣ ಇರತಕ್ಕಂಥ ಕೆರೆ ಇದ್ದರೆ ಅದು ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ನೂರು ಎಕರೆ ವಿಸ್ತೀರ್ಣದ ಸಣ್ಣ ಕೆರೆ ಇದ್ದರೆ, 50 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಅಲ್ಲಿರುವ ಹೂಳನ್ನು ತೆಗೆಯಬಹುದಾಗಿದೆ. ಎಲ್ಲೆಲ್ಲಿ ಬಹಳ ತೊಂದರೆ ಇದೆ, ಅಂತಹ ಕಡೆಗಳಲ್ಲಿ ಹೂಳು ತೆಗೆಸುವ ಕೆಲಸವನ್ನು ಮಾಡಿಸಿದರೆ, ಜನಕ್ಕೆ ಕೆಲಸವನ್ನೂ ಕೂಡ ಕೊಟ್ಟಂತಾಗುತ್ತದೆ ಮತ್ತು ವಾಟರ್ ಲೆವೆಲ್ ಅನ್ನೂ ಕೂಡ ಕಾಪಾಡಲಿಕ್ಕೆ ಸಾಧ್ಯವಿದೆ. ಇದರ ಪರಿಣಾಮವನ್ನು ಎಲ್ಲರೂ ಕೂಡ ನೋಡಬಹುದಾಗಿದೆ. ಅದನ್ನು ಮಾಡುವುದನ್ನು ಬಿಟ್ಟು ನಾವು ಏನೇನೋ ಬೇರೆ ಚರ್ಚೆ ಮಾಡಿದರೆ ಅದರಿಂದೇನೂ ಇಲ್ಲಿ ಉಪಯೋಗವಾಗುವುದಿಲ್ಲ. ಈ ಕೆಲಸವನ್ನು ನಾವು ಸಮರೋಪಾದಿಯಲ್ಲಿ ಮಾಡಬೇಕು. ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್‌ನಿಂದ ಕುಡಿಯುವ ನೀರಿನ ಮಟ್ಟವನ್ನು ಕಾಪಾಡಲಿಕ್ಕೆ ಅನುಕೂಲವಾಗುತ್ತದೆಯೋ ಅಂತಹ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳಿಗೆ ನಾವು ಆದ್ಯತೆಯನ್ನು ಕೊಡಬೇಕು. ಅದು ನಮ್ಮ ಪಾಲಿಸಿಯಾಗಬೇಕು. ಹೂಳು ತೆಗೆಯುವ ಕೆಲಸವಷ್ಟೇ ಅಲ್ಲ. ಇಷ್ಟೆ ಮಾಡಿದ ನಂತರವೂ ಕೂಡ ಕುಡಿಯುವ ನೀರಿನ ತೊಂದರೆ ಇರುವುದಾದರೆ, ಆಗ ಮಾತ್ರ ಸರ್ಫೇಸ್ ಸೋರ್ಸ್ ಅನ್ನು ನೋಡಬೇಕಾಗುತ್ತದೆ. ಇಲ್ಲಿಯವರೆಗೂ ನಾವು ಸರ್ಫೇಸ್ ಸೋರ್ಸ್ ಕಡೆ ಬಹಳಷ್ಟು ಗಮನ ಕೊಟ್ಟಿಲ್ಲ. ಸರ್ಫೇಸ್ ಸೋರ್ಸ್ ಅಂದರೆ ಹೊಳೆಯಿಂದ ನೀರು ತರುವುದು. ಈ ರೀತಿ ಹೊಳೆಯಿಂದ ರನ್ನಿಂಗ್ ವಾಟರ್ ತಂದರೆ ಅದಕ್ಕೆ ನಾವು ಟ್ರೀಟ್‌ಮೆಂಟ್ ಮಾಡಬೇಕಾಗುತ್ತದೆ. ಆ ರೀತಿ ನೀರು ತರುವ ಖರ್ಚು ವಿಪರೀತ ಜಾಸ್ತಿಯಾಗುತ್ತದೆ. ಅಂತಹ ಪ್ರಸಂಗ ಬಂದರೆ ಅದನ್ನು ರಾಜೀವ್‌ಗಾಂಧಿ ಫೌಂಡೇಷನ್‌ಗೆ ನಾವು ವಹಿಸಿಕೊಡುತ್ತೇವೆ. ಏಕೆಂದರೆ ಅದಕ್ಕೆ ಬಹಳಷ್ಟು ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ನನ್ನ ಸಲಹೆ ಏನೆಂದರೆ, ಎರಡು ಸಮಗ್ರವಾದಂತಹ ಸ್ಟಡೀಸ್ ಅನ್ನು ನಾವು ಮಾಡಬೇಕಾಗುತ್ತದೆ. ಮೊದಲನೆಯದಾಗಿ, ಎಗ್ಸಿಸ್ಟಿಂಗ್

ಸಿಸ್ಟಮ್‌ನ ಸಸ್ಟೈನಬಿಲಿಟಿ ಯಾವ ರೀತಿ ಕಾಪಾಡಬೇಕು ಎಂಬುದನ್ನು ನೋಡಬೇಕು. ಅಂದರೆ, Existing system based on underground water resources etc., etc., ಅದರ ಸಸ್ಟೈನಬಿಲಿಟಿ ಎಷ್ಟು ಕಾಲ ಎಂಬುದನ್ನು ನೋಡಬೇಕು. 10-20 ವರ್ಷಗಳಾದರೂ ಕೂಡ ಆ ಸಿಸ್ಟಮ್ ಬದುಕಬೇಕಾದರೆ ನಾವು ಈಗಲೇ ಅದಕ್ಕೆ ಬೇಕಾದಂತಹ ವಾಟರ್ ಶೆಡ್ ಡೆವಲಪ್‌ಮೆಂಟ್ ಮಾಡಬೇಕಾಗುತ್ತದೆ. ಆದಕಾರಣವಾಗಿ We want to have the experts / consultants to study on the existing system and its sustainability. ಎರಡನೆಯದಾಗಿ, feasibility of using surplus sources. ಅನ್ನು ನಾವು ನೋಡಬೇಕಾಗುತ್ತದೆ. ಸರ್ಫೇಸ್ ಸೋರ್ಸ್ಸ್ ಉಪಯೋಗ ಮಾಡುವ ಮಟ್ಟಕ್ಕೆ ನಾವು ಇನ್ನೂ ಬಂದಿಲ್ಲ. ಆದಕ್ಕೆ ನಾವು ಬರಬೇಕಾಗುತ್ತದೆ. ಜಾಸ್ತಿ ಖರ್ಚಾದರೂ ಕೂಡ ಅದನ್ನು ನಾವು ಮಾಡಬೇಕಾಗುತ್ತದೆ. ಆದಕಾರಣ ಅದರ ಬಗ್ಗೆ ಒಂದು ಫೀಸಿಬಿಲಿಟಿ ರಿಪೋರ್ಟ್ ಅನ್ನು ಎಕ್ಸ್‌ಪರ್ಟ್ಸ್ ಕಡೆಯಿಂದ ಫರಿಸಿ, ಆಮೇಲೆ ಅದರ ಬಗ್ಗೆ ಚರ್ಚೆ ಮಾಡಿ, ನಮ್ಮ ವಾಟರ್ ಪಾಲಿಸಿಯಲ್ಲಿ ಏನೇನು ಬದಲಾವಣೆ ಮಾಡಬೇಕಾಗುತ್ತದೆಯೋ ಅದನ್ನು ನಾವು ಮಾಡೋಣ. ಶಾಸ್ತ್ರೀಯವಾಗಿ ನಾವು ಹೋಗಬೇಕಾದರೆ ಈ ಮಾರ್ಗ ಇದೆ. ಒಟ್ಟಿನಲ್ಲಿ ಹೇಳುವುದಾದರೆ, ಐದು ಕೆಲಸಗಳು ನಮ್ಮ ವಾಟರ್ ಪಾಲಿಸಿಯಲ್ಲಿ ಇರಬೇಕಾಗುತ್ತದೆ. ಮೊದಲನೆಯದಾಗಿ, measured quality and quantity ಈಗ ಎಷ್ಟು ನೀರು ಬರುತ್ತಿದೆ ಎಂಬುದನ್ನು ಯಾರಾದರೂ ಹೋಗಿ ಮೆಶರ್ ಮಾಡಬೇಕಲ್ಲವೇ? ಆ ಕೆಲಸ ಈಗ ನಡೆದಿಲ್ಲ. ಬೇಸಿಗೆ ಕಾಲಕ್ಕೇ ಆ ಕೆಲಸ ನಡೆದರೆ ಬಹಳ ಒಳ್ಳೆಯದು. ಈ ಬಗ್ಗೆ ನಾವು ಈಗಾಗಲೇ ನಮ್ಮ ಅಧಿಕಾರಸ್ಥರಿಗೆ ಹೇಳಿದ್ದೇವೆ. ಒಂದು ತಿಂಗಳಲ್ಲಿ ನೀವು ವಾಟರ್ ಸ್ಕೀಮ್ಸ್‌ಗಳೇನಿವೆ, ಅಲ್ಲಿಗೆ ವಿಸಿಟ್ ಕೊಟ್ಟು, ಅಲ್ಲಿ ನೀರು ಬರುತ್ತಿದೆಯೇ? ಇಲ್ಲವೇ? ಎಂಬುದನ್ನು ನೋಡಿಕೊಂಡು ಬರಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ. ಒಂದು ತಿಂಗಳಲ್ಲಿ ಈ ಕೆಲಸವನ್ನು ಮಾಡಬಹುದು. ಆದರೆ ಎಷ್ಟು ನೀರು ಬರುತ್ತಿದೆ? ಅದರ ಕ್ವಾಲಿಟಿ ಎಷ್ಟು? ಎಂಬುದನ್ನೂ ಕೂಡ ನಾವು ನೋಡಬೇಕಾಗುತ್ತದೆ. ವಾಟರ್ ಪಾಲಿಸಿಯಲ್ಲಿ ಇವೆರಡು ಬಹಳ ಪ್ರಮುಖವಾದ ಅಂಶಗಳಾಗಿವೆ. ಕ್ವಾಲಿಟಿ ಟೆಸ್ಟ್ ಮಾಡುವುದು ಅಷ್ಟೊಂದು ಕಷ್ಟದ ಕೆಲಸವೇನಲ್ಲ. ರಾಜ್ಯದಲ್ಲಿ ಅನೇಕ ಇಂಜಿನಿಯರಿಂಗ್ ಕಾಲೇಜುಗಳಿವೆ, ಬೇರೆ ಬೇರೆ ಇನ್ಸ್‌ಟಿಟ್ಯೂಷನ್ಸ್ ಇವೆ. ಅವುಗಳು ಟೆಸ್ಟ್ ಮಾಡಿಕೊಡುತ್ತವೆ. ಎಷ್ಟೋ ಜಿಲ್ಲೆಗಳಲ್ಲಿ ಈಗಾಗಲೇ ವಾಟರ್ ಕ್ವಾಲಿಟಿ ರಿಪೋರ್ಟ್ಸ್ ತಯಾರು ಮಾಡಿದ್ದಾರೆ. ಆದರೆ ಕರ್ನಾಟಕದ ಎಲ್ಲಾ ಭಾಗದಲ್ಲಿ ಆ ಕೆಲಸ ಇದೇ ವರ್ಷದಲ್ಲಿ ಆಗಬೇಕೆಂದು ನನಗನಿಸಿದೆ. ಅದನ್ನು ಮಾಡುವ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತದೆ. ಈ ಯೀಲ್ಡ್ ಟೆಸ್ಟ್ ಆದನಂತರ ರಾಜ್ಯದಲ್ಲಿ ಪ್ರಾಮಾಣಿಕವಾಗಿ ವಾಟರ್ ಸ್ಟೇಟಸ್ ಏನು ಎಂಬುದು ತಮಗೆ ಗೊತ್ತಾಗುತ್ತದೆ. ಇಲ್ಲದಿದ್ದರೆ ನಾವು ಇಲ್ಲಿ ಅಂಕಿ ಅಂಶಗಳನ್ನು ಏನು ಕೊಡುತ್ತೇವೆಯೋ, ಅವುಗಳ ಮೇಲೆ ನಾವು ಎಷ್ಟರಮಟ್ಟಿಗೆ

ವಿಶ್ವಾಸ ಇಡಲು ಸಾಧ್ಯ? ಸರಿಯಾದ ವಸ್ತುಸ್ಥಿತಿಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾದರೆ ವಾಟರ್ ಯೀಲ್ಡ್ ಮತ್ತು ವಾಟರ್ ಕ್ವಾಲಿಟಿ ಟೆಸ್ಟ್‌ಗಳು ಮಾಡಬೇಕಾಗುತ್ತದೆ. ಇವೆರಡು ಟೆಸ್ಟ್‌ಗಳಾದ ನಂತರ ಆ ಟೆಸ್ಟ್‌ಗಳ ಬೇಸಿಸ್ ಮೇಲೆ ನಾವು ಮುಂದಿನ ಕ್ರಮ ಕೈಗೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಎರಡನೆಯದಾಗಿ, ಕುಡಿಯುವ ನೀರು ಮತ್ತು ಕುಡಿಯದ ನೀರು ಎಂದು ನೀರಿನ ಮೂಲವನ್ನು ಎರಡು ಭಾಗ ಮಾಡಿಕೊಳ್ಳಬೇಕು. ಕುಡಿಯುವ ನೀರು ಸಿಹಿಯಾಗಿ ಇದ್ದರೆ ಕುಡಿಯದ ನೀರು ಉಪ್ಪಾಗಿರುತ್ತದೆ. ನೀರು ಸಿಕ್ಕ ತಕ್ಷಣ ಅದರಲ್ಲಿ ಯಾವುದು ಉಪ್ಪು ನೀರು ಇದೆ, ಯಾವುದು ಸಿಹಿ ನೀರು ಇದೆ ಎಂಬುದು ನಮಗೆ ಗೊತ್ತಾಗಬೇಕು. ಏಕೆಂದರೆ ಸಿಹಿ ನೀರು ಇಲ್ಲದೇ ಹೋದರೂ ಕೂಡ, ಕುಡಿಯಲಿಕ್ಕೆ ಅದು ಸರಿ ಹೋಗದೇ ಹೋದರೂ ಕೂಡ ನೀರು ನಮಗೆ ಬೇರೆ ಕೆಲಸಗಳಿಗೆ ಬೇಕು. ಆದಕಾರಣ What is the quantity of potable water and non-potable water? ಇದರ ಬಗ್ಗೆ ಒಂದು ಸ್ಪಷ್ಟ ಚಿತ್ರ ನಮ್ಮ ಮುಂದೆ ಇರಬೇಕಾಗುತ್ತದೆ.

ಮೂರನೆಯದು ಬೆಟರ್ ಎಕ್ಸಿಕ್ಯೂಷನ್ ಅಂಡ್ ಮೈನ್‌ಟೆನೆನ್ಸ್ ಇದೆಲ್ಲಾ ತಾವು ಏನು ಹೇಳುತ್ತಿದ್ದೀರಿ, ಎಕ್ಸಿಕ್ಯೂಷನ್‌ನಲ್ಲಿ ಲೋಪ ಮೈನ್‌ಟೆನೆನ್ಸ್ ಲೋಪ, ಬೆಟರ್ ಎಕ್ಸಿಕ್ಯೂಷನ್ ಅಂಡ್ ಮೈನ್‌ಟೆನೆನ್ಸ್ ಯಾವ ರೀತಿಯಿಂದ ಮಾಡಬೇಕು, ಇದರ ಬಗ್ಗೆ ನಾವು ಗಂಭೀರವಾಗಿ ಯೋಚನೆ ಮಾಡಿ ಕೆಲವು ನಿಷ್ಠುರವಾದ ಕ್ರಮಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಇಂಜಿನಿಯರ್ಸ್ ಮಾಡಿದ್ದು ಎಲ್ಲ ನಾವು ನೋಡುತ್ತಾ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ನಿಷ್ಠುರವಾದ ಕ್ರಮಗಳನ್ನು ನಾವು ಕೈಗೊಂಡಾಗ ನೀವೆಲ್ಲರೂ ಅದಕ್ಕೆ ಸಹಕಾರ ಕೊಡುತ್ತೀರೆಂದು ನನ್ನ ನಂಬಿಕೆ. ಈಗ ಕರ್ನಾಟಕದ 70 ತಾಲ್ಲೂಕುಗಳಲ್ಲಿ ಈ ವಾಟರ್ ಟೇಬಲ್ ಪೊಸಿಷನ್ ಬಹಳ ಕ್ರಿಟಿಕಲ್ಲಾಗಿ ಇದೆ. 175 ತಾಲ್ಲೂಕುಗಳಲ್ಲಿ ವಾಟರ್ ಟೇಬಲ್ ಪೊಸಿಷನ್ ಕ್ರಿಟಿಕಲ್ ಆಗುವುದಕ್ಕಿಂತ ಮುಂಚೆ ಹೈಯೆಸ್ಟ್ ಪ್ರಿಯಾರಿಟಿ ಕೊಟ್ಟು ಚುನಾವಣೆ ಆದ ತಕ್ಷಣ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳು ಈ ಕೆಲಸ ಮಾಡಲಿ ಸರ್ಕಾರ ಆ ಪ್ರಶ್ನೆಗೆ ಬಹಳ ಆದ್ಯತೆ ಕೊಡುತ್ತದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇನ್ನು surface water for drinking or domestic purpose ನಮ್ಮ ಪಾಲಿಸಿಯಲ್ಲಿ ಐದು ಮುಖ್ಯವಾದ ಅಂಶಗಳೇನೆಂದರೆ, ಒಂದು ಮೇಜರ್ ಕ್ವಾಲಿಟಿ ಅಂಡ್ ಕ್ವಾಂಟಿಟಿ, ಎರಡನೆಯದು ಪೋಟಬಲ್ ಡ್ರಿಂಕಿಂಗ್ ವಾಟರ್ ಮತ್ತು ನಾನ್ ಪೋಟಬಲ್, ನಾನ್ ಪೋಟಬಲ್ ಕೂಡ ಉಪಯೋಗ ಇದೆ. ನಾನ್ ಪೋಟಬಲ್ ಅಂದ ತಕ್ಷಣ ಬೇಡ ಎಂದು ಹೇಳಲಿಕ್ಕೆ ಬರುವುದಿಲ್ಲ. ಅಷ್ಟು ವಾಟರ್ ಸ್ಕೇರ್ಸಿಟಿ ನಮ್ಮ ದೇಶದಲ್ಲಿದೆ. ಮೂರನೆಯದು ಬೆಟರ್ ಎಕ್ಸಿಕ್ಯೂಷನ್ ಅಂಡ್ ಮೈನ್‌ಟೆನೆನ್ಸ್ ಆಫ್ ಸ್ಕೀಮ್. ನಾಲ್ಕನೆಯದು watershed plan with drinking water as focus. ಎಲ್ಲೆಲ್ಲಿ ಯಾವ ಯಾವ ಪರಿಸ್ಥಿತಿ ಇದೆ ಎಂಬುದನ್ನು ನೋಡಿಕೊಂಡು ನೀರು ಲೀಕೇಜ್

ನಿಲ್ಲಿಸಲಿಕ್ಕೆ, ನಾಲಾ ಬಂಡಿಂಗ್ ಮಾಡಿದ್ದರೆ ನೀರು ಭೂಮಿ ಒಳಗೆ ಹೋಗುತ್ತದೆ. ನಾವು ನೀರು ಎತ್ತುವುದಕ್ಕೆ ಸಾಧ್ಯವಾಗುತ್ತದೆ. ನೀರು ಭೂಮಿ ಒಳಗೆ ಹೋಗದೆ ಇದ್ದರೆ ನಮಗೆ ಎಲ್ಲಿಂದ ನೀರು ಸಿಗುತ್ತದೆ.? ಕುಡಿಯುವ ನೀರಿನ ಪೊಸಿಷನ್ ಇಷ್ಟು ಕ್ರಿಟಿಕಲ್ಲಾದಾಗ ವಾಟರ್ ಶೆಡ್ ಡೆವಲಪ್‌ಮೆಂಟಿಗೆ ಹೈಯಸ್ಟ್ ಪ್ರಿಯಾರಿಟಿಯನ್ನು ಯಾವುದೇ ಸರ್ಕಾರ ಇರಲಿ ಕೊಡಬೇಕಾಗುತ್ತದೆ. 10-20 ವರ್ಷ ನಡೆಯಬಹುದು, 10-20 ವರ್ಷ ನಡೆದರೆ ನಮ್ಮ ಸುಯೋಗ. ಅದಕ್ಕೆ ಮುಂಚೆ ನಮ್ಮ ಸರ್ಫೇಸ್ ವಾಟರ್ ಏನಿದೆ ಅದನ್ನು ಯಾವ ರೀತಿ ಉಪಯೋಗಿಸಬೇಕು, ಅದರ ಬಗ್ಗೆ ಫೀಸಿಬಿಲಿಟಿ ನಾವು ಸ್ಟಡಿಯನ್ನು ಮಾಡಿಸಬೇಕು. ಎಕ್ಸಿಸ್ಟಿಂಗ್ ಸಿಸ್ಟಮ್ ಏನಿದೆ ಅದರ ಸೆನ್ಸಿಬಿಲಿಟಿ ಯಾವರೀತಿಯಾಗಿ ಹೆಚ್ಚಿಸಬೇಕು, ಅಥವಾ ಕಾಪಾಡಬೇಕು ಇವೆರಡೂ ನಮ್ಮಲ್ಲಿರತಕ್ಕಂತಹ ಮುಖ್ಯವಾದ ಪ್ರಶ್ನೆಯಾಗಿದೆ. ಇದರ ಬಗ್ಗೆ ನಮಗೆ ಸಾಕಷ್ಟು ಅವೇರ್‌ನೆಸ್ ಇದೆ. ಮನಸ್ಸೂ ಇದೆ. ಇಚ್ಛಾಶಕ್ತಿ ಇದೆ, ಹಣವೂ ಇದೆ. ಇಷ್ಟು ಹೇಳಿ ಸಣ್ಣ ಪುಟ್ಟ ವಿಷಯಗಳ ಬಗ್ಗೆ ನಾನು ಹೇಳುವುದಕ್ಕೆ ಹೋಗಲಿಲ್ಲ. ಏಕೆಂದರೆ ಫೋಕಸ್ ತಪ್ಪಿ ಹೋಗುತ್ತದೆ. ಮೇನ್ ಇಶ್ಯೂ ಏನಿದೆ ಅದನ್ನು ಹೇಳಿದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಜನರಲ್ಲಾಗಿ ಸರ್ಕಾರದ ನೀತಿ, ಡ್ರಿಂಕಿಂಗ್ ವಾಟರ್ ಅಭಿವೃದ್ಧಿ ಕ್ವಾಲಿಟಿ ಏನಿರಬೇಕು, ಯಾವ ಸ್ಕೀಮ್ ಇರಬೇಕು, ಪ್ರಾಜೆಕ್ಟ್ ಏನಿರಬೇಕು ಎಂದು ಒಂದು ಚಿತ್ರಣ ಕೊಟ್ಟರು. ನಮ್ಮಲ್ಲಿ ಇವತ್ತು ಇಡೀ ನಾಡಿನಾದ್ಯಂತ ನೀರಿನ ಹಾಹಾಕಾರ ಎದ್ದಿದೆ. ಕೆಲವೊಂದು ಪ್ರದೇಶದ ಸುದ್ದಿ ಈಗಾಗಲೇ ಪತ್ರಿಕೆಯಲ್ಲಿ ಬಂದಿದ್ದು, ಇವಲ್ಲಾ ಹೇಳಿದ್ದೇವೆ. ಅಲ್ಲಿ ಏನು ಆ್ಯಕ್ಷನ್ ತೆಗೆದುಕೊಂಡಿದ್ದೀರಿ, ಅಂತರ್ಜಲ ಮಟ್ಟ ಏರಿಸಬೇಕು, ಅಂತರ್ಜಲ ಕಾಯ್ದುಕೊಂಡು ಹೋಗಬೇಕು, ಅದರ ಬಗ್ಗೆ ಪ್ರಶ್ನೆ ಇಲ್ಲ. ಅದು ಯಾರಾದರೂ ಮಾಡುವಂಥದ್ದು. ಅದಕ್ಕೆ ಅವರು ಪಾಲಿಸಿ ಮಾಡಲಿ. ಆದರೆ ಇವತ್ತು ಎಲೆಲ್ಲಿ ಏನು ಪ್ರಾಬ್ಲಮ್ಯಾಟಿಕ್ ವಿಲೇಜಸ್ ಇವೆ, ಪ್ರಾಬ್ಲಮ್ಯಾಟಿಕ್ ಸಿಟೀಸ್ ಇವೆ ಅಲ್ಲಿ ಏನು ಆ್ಯಕ್ಷನ್ ತೆಗೆದುಕೊಂಡಿದ್ದಾರೆ, ಅಲ್ಲಿ ಏನಾದರೂ ವಿಶೇಷ ಅನುದಾನ ಕೊಟ್ಟಿದ್ದಾರಾ? ಹೇಗೆ ಅಲ್ಲಿ ಏನಾದರೂ ಆ್ಯಕ್ಷನ್ ಪ್ಲ್ಯಾನ್ ತೆಗೆದುಕೊಂಡಿದ್ದಾರೋ? ಹೇಗೆ, ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ? ಪ್ರತಿಯೊಂದು ಜಿಲ್ಲೆ ಡಿಸ್ಟ್ರಿಕ್ಟ್ ಆಫೀಸರ್, ಜಿಲ್ಲಾಧಿಕಾರಿಗಳು, ಪ್ರಾಬ್ಲಮ್ಯಾಟಿಕ್ ವಿಲೇಜಸ್ ಸಿಟೀಸ್ ಇದ್ದರೆ ಇದರ ಬಗ್ಗೆ ಏನಾದರೂ ವರದಿ ಕೊಟ್ಟಿದ್ದಾರಾ? ಅಥವಾ ಇದರ ಬಗ್ಗೆ ಎಷ್ಟು ಹಣ ಬೇಕೆಂದು ಹೇಳಿದ್ದಾರೆ? ಎಷ್ಟು ಹಣ ಕಳುಹಿಸಿದ್ದೀರಿ? ಎಷ್ಟು ರಿಲೀಸ್ ಮಾಡಿದ್ದೀರಿ? ಇವೆಲ್ಲಾ ಮಾಹಿತಿ ಬೇಕೆಂದು ಹೇಳಿದ್ದೆವು. ಅವರು ಹೇಳಿದ ವಿಚಾರಗಳು ಬಹಳ ಒಳ್ಳೆಯದಾಗಿವೆ. ಅದನ್ನು ನಾವು ಇಂಪ್ಲಿಮೆಂಟ್ ಮಾಡಬೇಕು. ಇಂಪ್ಲಿಮೆಂಟ್ ಮಾಡಿ ಅದರಂತೆ ಕುಡಿಯುವ ನೀರಿನ ಯೋಜನೆಗಳನ್ನು ಎಲ್ಲ ಕಡೆ ಮಾಡಬಹುದು. ಆದರೆ ಅನುಷ್ಠಾನ ಆಗುತ್ತಿಲ್ಲ. ಎಲ್ಲ ವಿಚಾರ ವಿಚಾರವಾಗಿಯೇ ಉಳಿಯುತ್ತಿವೆ. ಅವು ಬೆಂಗಳೂರು ಮಟ್ಟದಲ್ಲಿಯೇ

ಉಳಿಯುತ್ತಿದೆ. ಆದರೆ ಗ್ರಾಮೀಣ ಮಟ್ಟದಲ್ಲಿ ಅನುಷ್ಠಾನ ಆಗುತ್ತಿಲ್ಲ. ಸ್ಪೆಷಲ್ಲಾಗಿ 2-3 ತಿಂಗಳಲ್ಲಿ ಎಲ್ಲೆಲ್ಲಿ ಸಮಸ್ಯಾತ್ಮಕ ಗ್ರಾಮಗಳಿವೆ ಎಂದು ನೋಡಬೇಕು. ಕುಡಿಯುವ ನೀರಿನ ಸಮಸ್ಯೆ ಇರುವ ಬಗ್ಗೆ ಎಲ್ಲ ಡಿಸ್ಟ್ರಿಕ್‌ಗಳಿಂದ ರಿಪೋರ್ಟ್ ಬಂದಿದೆ, ಯಾವ ಡಿಸ್ಟ್ರಿಕ್ಟ್‌ನಲ್ಲಿ ಎಷ್ಟು ಪ್ರಾಬ್ಲಮ್ಯಾಟಿಕ್ ಇದೆ, ಎಷ್ಟು ಹಣ ರಿಲೀಸ್ ಮಾಡಿದ್ದೀರಿ ಎಷ್ಟು ಕೇಳಿದ್ದಾರೆ ಎಂದು ಮಾಹಿತಿ ತಾವು ಕೊಡಲಿಲ್ಲ. ಮೂಲಭೂತವಾಗಿ ನಾವು ಕೇಳಿರುವುದೇ ಅದು. ನೀವು ಇದರ ಬಗ್ಗೆ ತಕ್ಷಣ ಏನು ಕ್ರಮಗಳನ್ನು ಕೈಗೊಂಡಿದ್ದೀರಿ ಅದರ ಬಗ್ಗೆ ಉತ್ತರ ಬೇಕಾಗಿತ್ತು.

ಶ್ರೀ ಎಂ.ವೈ. ಘೋರ್ಪಡೆ: ಒಂದು ತಿಂಗಳ ಒಳಗೆ ಪ್ರತಿಯೊಂದು ವಾಟರ್ ಸೋರ್ಸಸ್. ಬೋರ್‌ವೆಲ್ ಇರಲಿ, ಮಿನಿ ವಾಟರ್ ಸೋರ್ಸ್ ಇರಲಿ, ಪೈಪ್ ವಾಟರ್ ಸೋರ್ಸ್ ಇರಲಿ, ನಮ್ಮ ಅಧಿಕಾರಸ್ಥರು ಹೋಗಿ ಇನ್‌ಸ್ಪೆಕ್ಟ್ ಮಾಡಿ ಇಂತಹ ದಿನ ಇನ್‌ಸ್ಪೆಕ್ಟ್ ಮಾಡಿದ್ದೇವೆಂದು ಬರೆದು ಬೋರ್ಡ್ ಹಾಕಬೇಕು. ಇದು ಎಲ್ಲರಿಗೂ ಗೊತ್ತಾಗಬೇಕು. ಈ ಕೆಲಸ ಬರೀ ನಾನು ಹೇಳಿದ ತಕ್ಷಣ ಆಗುವುದಿಲ್ಲ. ನಾವೆಲ್ಲರೂ ಸೇರಿ ಈ ಕೆಲಸ ಮಾಡಬೇಕು. ಸಾವಿರಾರು ಜನರಿಗೆ ಹೇಳಬೇಕಾಗುತ್ತದೆ. ಇಂತಹ ಆದೇಶ ಕೊಟ್ಟಿದ್ದಾರೆ, ಅಧಿಕಾರಸ್ಥರು ಮಾಡದೆ ಇದ್ದರೆ ಅವರಿಗೆ ಭಯ ಉಂಟಾಗಬೇಕಾಗುತ್ತದೆ. ನಾವು ನಿರ್ಲಕ್ಷ್ಯ ಮಾಡಿ ಮನೆಯಲ್ಲಿ ಕುಳಿತುಕೊಳ್ಳುವ ಹಾಗಿಲ್ಲ. ಆ ತರಹದ ವಾತಾವರಣ ಕಲ್ಪಿಸಿ ಎಂದು ನಾನು ಕೇಳುತ್ತಿದ್ದೇನೆ. ಇನ್ನೊಂದು ಮಾತು ಇದು ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಮುಖಾಂತರ ಆಗುತ್ತಿರುವುದು. ನಮ್ಮ ಎಂ.ಎಲ್.ಎ.ಗಳು ಯಾವುದೇ ಪಕ್ಷಕ್ಕೆ ಸೇರಿರಲಿ ದಯವಿಟ್ಟು ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಮೀಟಿಂಗ್ ತಪ್ಪಿಸಬೇಡಿ. ನಾನು 8-10 ಜಿಲ್ಲೆಗಳಿಗೆ ಹೋಗಿದ್ದೆ ನಮ್ಮ ಶಾಸಕರು ಅಟೆಂಡ್ ಆಗುವುದಿಲ್ಲ. ಅಟೆಂಡ್ ಆಗಬೇಕು. ಅದು ನಿಮಗೆ ಇರತಕ್ಕಂತಹ ಅಧಿಕಾರ. ಮತ್ತು ಅಪಾರವಾದ ಅನುಭವ ಏನಿದೆ ಇದನ್ನು ಕೊಡಲು ಸಾಧ್ಯವಾಗುತ್ತದೆ. ನನಗೆ ಸಂಬಂಧಪಟ್ಟಿಲ್ಲ ಎನ್ನುವ ವಿಚಾರ ಏನಿದೆ, ಅದು ತಪ್ಪು. ವಿಕೇಂದ್ರೀಕರಣ ಮಾಡುತ್ತಿದ್ದೇವೆ. ನಿಮಗೆ ಅದರಲ್ಲಿ ಭಾಗವಹಿಸುವ ಹಕ್ಕು ಇದೆ. ಅವಶ್ಯಕತೆ ಇದೆ. ದಯವಿಟ್ಟು ನಾನು ಹೋದಲ್ಲೆಲ್ಲಾ ಕೇಳಿದರೆ ಎಂ.ಎಲ್.ಎ.ಗಳು ಬರುವುದಿಲ್ಲವೆಂದು ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್: ಸರಿಯಾಗಿ ಕಮ್ಯುನಿಕೇಟ್ ಆಗುವುದಿಲ್ಲ. ಶಾಸಕರಿಗೆ ನೋಟಿಸ್ ಹೋಗಿರುವುದಿಲ್ಲ. ಸ್ಪೆಸಿಫಿಕ್ ಉತ್ತರ ಸಿಗಲಿಲ್ಲ. ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಕೆಲವೊಂದು ಜಿಲ್ಲೆಗಳ ರಿಪೋರ್ಟ್ ತರಿಸಿಕೊಂಡಿದ್ದಾರೆ. ಇಷ್ಟೊಂದು ವಿಲೇಜಸ್ ಪ್ರಾಬ್ಲಮ್ಯಾಟಿಕ್ ಇವೆ ಎಂದು ರಿಪೋರ್ಟ್ ಕೊಟ್ಟಿದ್ದಾರೆ. ಕೆಲವು ಅಮೌಂಟ್ ಕೇಳಿದ್ದಾರೆ. ಇದರ ಬಗ್ಗ ಪ್ರಪೋಸಲ್ ಬಂದಿದೆಯೇ ಇಲ್ಲವೇ, ಬಂದಿಲ್ಲವೆಂದರೆ ಬಂದಿಲ್ಲವೆಂದು ಹೇಳಿ. ನಮಗೆ ಬಂದಂತಹ ಮಾಹಿತಿ ಪ್ರಕಾರ ಕೆಲವು ಜಿಲ್ಲೆಗಳಿಂದ ಬಂದಿವೆ. ಎಷ್ಟು ಗ್ರಾಮಗಳಲ್ಲಿ ಸಮಸ್ಯೆ ಇವೆ, ರಾಜ್ಯ ಸರ್ಕಾರದಿಂದ ಎಷ್ಟು

ಹಣ ಕೇಳಿದ್ದಾರೆ ಹೇಳಿ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಅವರಿಗೂ ಗೊತ್ತಿದೆ, ಇದು ಹಣದ ಪ್ರಶ್ನೆ ಇಲ್ಲ. ನನಗೆ ಇರುವ ಮಾಹಿತಿ ಪ್ರಕಾರ ಹೇಳಿದೆ. ಇದು ಮಾಹಿತಿ ಸಂಪೂರ್ಣ ಸರಿ ಇದೆ, 100ಕ್ಕೆ 100 ಸರಿ ಇದೆ ಎಂದು ನಾನು ಹೇಳುವುದಿಲ್ಲ. ಏಪ್ರಿಲ್ ಮೇನಲ್ಲಿ ತಮಗೆ ಹಳ್ಳಿಗಳಲ್ಲಿ ಏನಾದರೂ ಪ್ರಾಬ್ಲಮ್ ಇದೆ ಎಂದು ಗೊತ್ತಾದರೆ ದಯವಿಟ್ಟು ತಕ್ಷಣ ತಿಳಿಸಿದರೆ ನಾವು ವಿಶೇಷವಾಗಿ ಅದರ ಕಡೆ ಗಮನ ಕೊಟ್ಟು ಏನು ಮಾಡಲಿಕ್ಕೆ ಸಾಧ್ಯ, ಯಾರು ನೀರಿನ ಟ್ರಾನ್ಸ್‌ಪೋರ್ಟ್ ಮೂಖಾಂತರ ಒದಗಿಸಿಕೊಡುವ ಬಗ್ಗೆ ಪ್ರಶ್ನೆ ಕೇಳುತ್ತಾರೆ ಅಂತಹ ಅವಶ್ಯಕತೆ ಇದ್ದರೆ ಅದನ್ನು ಕೂಡ ನಾವು ಮಾಡುತ್ತೇವೆ. I request every M.LA's to kindly point out as to what are the villages where there is acute drinking water problem.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ನಾನು ಎರಡು- ಮೂರು ವಿಚಾರಗಳನ್ನು ಮಾತ್ರ ಮಾನ್ಯ ಮಂತ್ರಿಗಳ ಗಮನಕ್ಕೆ ತರತಕ್ಕಂಥದ್ದು, ತಾವು ಆರ್‌ಡಿಪಿಆರ್ ಮುಖಾಂತರ ಕಳುಹಿಸಿರತಕ್ಕಂತಹ ಗೈಡ್‌ಲೈನ್ಸ್ ಅಥವಾ ನಮ್ಮ ಸಿಇಓಗಳು ಹೇಳಿದ್ದು ಏನೆಂದರೆ, ಒಂದು ಸಾವಿರ ಪಾಪ್ಯುಲೇಷನ್ ಇರತಕ್ಕಂತಹ ವಿಲೇಜಸ್ ಏನು ಇದೆ, ಅಲ್ಲಿ ನೀರಿನ ಕೊರತೆ ಇದೆ, ಸುಮಾರು 800 ಜನಸಂಖ್ಯೆ ಇರತಕ್ಕಂತಹ ಮಿನಿ ವಾಟರ್ ಸಪ್ಲೈ ಇರಬಹುದು, ಅಲ್ಲಿ ಅಡಿಷನಲ್ಲಾಗಿ ಮಾಡುವುದಕ್ಕೆ ಪ್ರಾವಿಷನ್ ಇಲ್ಲವೆಂದು ಹೇಳುತ್ತಿದ್ದೀರಿ. ದಯವಿಟ್ಟು ತಾವು ಅದಕ್ಕೆ ಒಂದು ಅಶೂರೆನ್ಸ್ ಕೊಡಿ. ಎಲ್ಲಿ ಶಾರ್ಟೇಜ್ ಇದೆ, ಅಲ್ಲಿ ಕೆಲಸ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ.

1-40 ಪಿ.ಎಂ

ಎಲ್ಲಿ ನೀರಿನ ಕೊರತೆ ಇದೆ ಅಲ್ಲಿ ನೀರನ್ನೊದಗಿಸಲು ಸಿ.ಇ.ಓ.ರವರಿಗೆ ಹಣವನ್ನು ಬಿಡುಗಡೆ ಮಾಡಿಸಬೇಕಾಗಿದೆ. ಅದರಲ್ಲೂ ಉತ್ತರ ಕರ್ನಾಟಕದ ಭಾಗ, ಕೋಲಾರ, ಚಿತ್ರದುರ್ಗ, ಬೀದರ್, ಗುಲ್ಬರ್ಗಾ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ವಿಪರೀತ ತೊಂದರೆಯಾಗಿದೆ. ತಾವೂ ಕೂಡ ಅಲ್ಲಿಗೆ ಎರಡು ಬಾರಿ ಹೋಗಿ ಬಂದಿದ್ದೀರಿ. ರಾಯಚೂರು ಜಿಲ್ಲೆಯ 600 ಹಳ್ಳಿಗಳಲ್ಲಿ ಹಾಗೂ ಬೀದರ್‌ನಲ್ಲಿರುವ ಔರಾದ್ ಮತ್ತು ಬಾಲ್ಕಿಗಳಲ್ಲಿ ವಿಪರೀತ ತೊಂದರೆಯುಂಟಾಗಿದೆ. ಆ ಕಡೆಗಳಿಗೆ ನೀರನ್ನೊದಗಿಸಲು ವಿಶೇಷವಾದ ಗಮನವನ್ನು ಹರಿಸಬೇಕೆಂಬದೇ ನಮ್ಮ ಒತ್ತಾಯವಾಗಿದೆ. ತಾವು ಈಗಾಗಲೇ ಹೇಳಿರತಕ್ಕಂಥ ವಿಚಾರಗಳು ತಮ್ಮ ಅನುಭವದಿಂದಲೇ ಬಂದಂಥವುಗಳಾಗಿವೆ. ನಾವು ಮತ್ತು ನೀವೆಲ್ಲರೂ ಸೇರಿಯೇ ಕ್ರಮ ತೆಗೆದುಕೊಳ್ಳಬೇಕು. ಕೇವಲ ಸರ್ಕಾರವೇ ಮಾಡತಕ್ಕಂಥ ಕ್ರಮ ಇದಾಗಿಲ್ಲ ಯಾವುದೇ ಸರ್ಕಾರವಿದ್ದರೂ ಕೂಡ ಇನ್ನು ಹತ್ತು ವರ್ಷವಾದ ಮೇಲೆ ನೀರೇ ಎಲ್ಲೂ ಸಿಗುತ್ತಿಲ್ಲವೆಂದರೆ ಆಗ ನೀರನ್ನು ಎಲ್ಲಿಂದ ಕೊಡುವುದಕ್ಕಾಗುತ್ತದೆ. ಸಮುದ್ರದಿಂದ

ನೀರನ್ನು ತರುವುದು ಆಗದೇ ಇರತಕ್ಕಂಥ ಮಾತೇ ಆಗುತ್ತದೆ. ಸಾಯಿಲ್ ಅಂಡ್ ವಾಟರ್ ಕನ್ಸರ್ವೇಶನ್‌ಗೆ ನಾವೆಲ್ಲರೂ ಸಹಕಾರವನ್ನು ಕೊಡೋಣ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಇಂದು there should be co-ordination between the R.D.P.R. and K.P.T.C.L. ಇಂದು ಹಳ್ಳಿಗಳಲ್ಲಿ ರಾತ್ರಿ ಎರಡು ಗಂಟೆಯಲ್ಲಿ ನೀರಿಗೋಸ್ಕರ ಹೆಣ್ಣುಮಕ್ಕಳು ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ತಾವು ಹಿರಿಯ ಸಚಿವರಾಗಿರುವುದರಿಂದ ಮುಖ್ಯಮಂತ್ರಿಗಳೂ ಸಹ ನೀವು ಹೇಳಿದ ಮಾತುಗಳನ್ನು ಕೇಳುತ್ತಾರೆ. ನೀವು ಕೆ.ಇ.ಬಿ. ಸೆಕ್ರೆಟರಿಯವರನ್ನು ಕರೆಸಿ ಆರ್.ಡಿ.ಪಿ.ಆರ್. ಸೆಕ್ರೆಟರಿಯವರೊಂದಿಗೆ ಸಭೆಯನ್ನು ನಡೆಸಿ ಎಲ್ಲಾ ಜಿಲ್ಲೆಗಳಲ್ಲೂ ಮತ್ತು ತಾಲ್ಲೂಕುಗಳಲ್ಲೂ ಶಿಫ್ಟ್ ಪ್ರಕಾರ ಬೆಳಿಗ್ಗೆ 6 ರಿಂದ 8 ಗಂಟೆಯವರೆಗೆ ಮತ್ತು 8 ರಿಂದ 10 ಗಂಟೆಯವರೆಗೆ ಯಾವುದೇ ಡಿಸ್ಟರ್ಬ್ ಇಲ್ಲದೇ ವಿದ್ಯುತ್ ಪೂರೈಕೆಯನ್ನು ಮಾಡಿಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಎಂ.ವೈ.ಘೋರ್ಪಡೆ: 1,000 ಕ್ಕಿಂತ ಜನಸಂಖ್ಯೆ ಕಡಿಮೆ ಇರುವ ಚಿಕ್ಕ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಬೇರೆ ಸಿಸ್ಟಂ ಅವಶ್ಯಕತೆ ಇದ್ದರೆ ಅದನ್ನು ಮಾಡಿಕೊಡಲು ಒಪ್ಪುತ್ತೇನೆ. ಇನ್ನು ವಿದ್ಯುತ್ ಬಗ್ಗೆ ಹೇಳಬೇಕೆಂದರೆ ಇದರ ಪೂರೈಕೆ ಅಷ್ಟು ತೃಪ್ತಿಕರವಾಗಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಲೇ ಮುಖ್ಯಮಂತ್ರಿಗಳು ಏನು ಹೇಳಿದರೆಂದರೆ ಎಲ್ಲೆಲ್ಲಿ ಕುಡಿಯುವ ನೀರಿನ ಯೋಜನೆ ಪೂರ್ಣಗೊಂಡಿದ್ದು ವಿದ್ಯುತ್ ಪೂರೈಕೆಗೋಸ್ಕರ ನಿಂತಿದೆಯೋ ಅಲ್ಲೆಲ್ಲಾ ಡಿಸೆಂಬರ್ ಒಳಗೆ ವಿದ್ಯುತ್ ಪೂರೈಕೆಯಾಗಬೇಕೆಂದಿದ್ದಾರೆ. ಆದರೆ. ಆ ಕೆಲಸ ನಡೆದಿಲ್ಲ. ಕೆಲಸ ಬಹಳ ನಿಧಾನವಾಗಿ ನಡೆಯುತ್ತಿದೆ. ಈ ರೀತಿಯಾಗಿ ಎಲ್ಲೆಲ್ಲಿ ಕುಡಿಯುವ ನೀರಿನ ಯೋಜನೆ ಪೂರ್ಣಗೊಂಡು ಕೇವಲ ವಿದ್ಯುತ್ ಪೂರೈಕೆಗಾಗಿ ನಿಂತಿದೆಯೋ ಆ ಸ್ಥಳಗಳ ವಿವರದ ಪಟ್ಟಿಯನ್ನು ನಾವು ಸಿ.ಇ.ಒ.ರವರಿಂದ ತರಿಸಿ ಅದನ್ನು ಇಂಧನ ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿಗಳಿಗೆ ತೋರಿಸಿ ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಎಂಬ ಬಗ್ಗೆ ನಾನು ಹೇಳಿ ವಿದ್ಯುತ್ ಪೂರೈಕೆಯನ್ನು ಕಟ್ಟುನಿಟ್ಟಾಗಿ ಮಾಡಬೇಕೆಂದು ಕೆ.ಇ.ಬಿ.ಯವರಿಗೆ ಕಟ್ಟುನಿಟ್ಟಿನ ನಿರ್ದೇಶನ ಕೊಡಬೇಕೆಂದು ಹೇಳುತ್ತೇನೆ. ಈ ರೀತಿಯ ನಿರ್ದೇಶನ ಕೊಡದಿದ್ದರೆ ಕುಡಿಯುವ ನೀರಿನ ಯೋಜನೆ ಮಾಡಿದರೂ ಉಪಯೋಗವಾಗುವುದಿಲ್ಲವೆನ್ನುವ ಸಂಗತಿಯನ್ನು ಮುಖ್ಯಮಂತ್ರಿಗಳಿಗೆ ನಾನು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಮಂತ್ರಿಯವರೆ, ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿಯಲ್ಲಿ ಕಳೆದ ಎರಡು ವರ್ಷಗಳಿಂದಲೂ ಏಪ್ರಿಲ್, ಮೇ, ಜೂನ್ ತಿಂಗಳುಗಳಲ್ಲಿ ಉಷ್ಣತೆ ಪ್ರಮಾಣ 40 ರಿಂದ 42 ಡಿಗ್ರಿಯವರೆಗೆ ಇರುತ್ತದೆಯಾದ್ದರಿಂದ ವಿದ್ಯುತ್ ಪೂರೈಕೆ ಕಂಟಿನ್ಯೂಯಸ್‌ಲೀ

ಇರಬೇಕೆಂದು ಒಂದು ದಿವಸದಲ್ಲಿ ಆರ್ಡರನ್ನು ಮಾಡಿದ್ದಾರೆ. ಮೊನ್ನೆ ಈ ಆರ್ಡರ್ ಆದಮೇಲೆ ನಿನ್ನೆಯಿಂದ ಇದು ಜಾರಿಗೆ ಬಂದಿದೆ. ಅದೇ ರೀತಿಯಲ್ಲಿ ಸಾಮಾನ್ಯವಾಗಿ ಪ್ರತಿ ಹಳ್ಳಿಯಲ್ಲೂ ಕೂಡ ಸತತ ಮೂರುಗಂಟೆಗಳ ಕಾಲ ವಾಟರ್ ಸಪ್ಲೈ ಸ್ಕೀಮ್‌ನಲ್ಲಿ ಕೆಲಸ ಮಾಡುವುದಕ್ಕೆ ಎಷ್ಟು ಪ್ರಮಾಣದ ವಿದ್ಯುತ್ ಪೂರೈಕೆಯಾಗಬೇಕೋ ಅಷ್ಟು ವಿದ್ಯುತ್ ಪೂರೈಕೆಯನ್ನು ಮಾಡಲೇಬೇಕೆಂದು ತಾವು ಮಾಡಬೇಕು.

ಶ್ರೀ ಎಂ.ವೈ.ಘೋರ್ಪಡೆ: ಇದು ಒಂದು ಒಳ್ಳೆಯ ಸಲಹೆಯೇ ಆಗಿರುವುದರಿಂದ ಪರಿಗಣನೆ ಮಾಡಲಾಗುವುದು.

ಶ್ರೀ ಬಿ.ಸೋಮಶೇಖರ್: ಮಾನ್ಯ ಮಂತ್ರಿಗಳು ಎರಡ್ಮೂರು ವಿಚಾರಗಳಲ್ಲಿ ಸ್ಪಷ್ಟ ಉತ್ತರಗಳನ್ನು ಕೊಟ್ಟಿದ್ದಾರೆ. ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ನಡೆಯತಕ್ಕಂಥ ಕೆಲಸಗಳು ಸಮರ್ಪಕವಾಗಿ ಆಗಿಲ್ಲ. ಆದುದರಿಂದ ಇದರ ಬಗ್ಗೆ ವರದಿಯನ್ನು ತರಿಸಿ ಆ ಕೆಲಸವನ್ನು ಕೆಲವು ಇನ್ಸ್‌ಟಿಟ್ಯೂಶನ್‌ಗಳಿಗೆ ವಹಿಸುತ್ತೇನೆಂದು ಹೇಳಿದ್ದಾರೆ. ಇದು ಸ್ವಾಗತಾರ್ಹವಾದ ವಿಚಾರವೇ ಆಗಿದೆ. ಇನ್ನು ಸರ್ಫೇಸ್ ವಾಟರ್‌ನ್ನು ಉಪಯೋಗಿಸಿಕೊಂಡು ನೀರನ್ನೊದಗಿಸಲು ರಾಜೀವ್‌ಗಾಂಧಿ ಟೆಕ್ನಾಲಜಿ ಮೆಶಿನ್‌ಗೆ ಕೊಡಲಾಗುವುದು ಎಂದಿದ್ದಾರೆ. ಇನ್ನು ಲಿಫ್ಟ್ ಇರಿಗೇಶನ್‌ನಲ್ಲಿ ಜಾಕ್‌ವೆಲ್‌ಗಳು ಇರುತ್ತವೆ. ನೀವು ಅಲ್ಲಿ ಲಿಫ್ಟ್ ಮಾಡಬೇಕಾದರೆ ಮತ್ತೊಂದು ಜಾಕ್‌ವೆಲ್ ಅವಶ್ಯಕತೆ ಇರುವುದಿಲ್ಲ. ಅದೇ ಜಾಕ್‌ವೆಲ್‌ನ್ನು ಉಪಯೋಗಿಸಬಹುದು. ಕುಡಿಯುವ ನೀರಿನ ಯೋಜನೆಗಳನ್ನು ಅಲ್ಲಿ ಮಾಡಬಹುದು. ಇದನ್ನು ನಾಲ್ಕೈದು ಹಳ್ಳಿಗಳಲ್ಲಿ ಮಾಡಬಹುದು. ಅದಕ್ಕೆ ಎಷ್ಟು ಯೋಜನೆಗಳನ್ನು ತಯಾರು ಮಾಡಿದ್ದೀರಿ ಮತ್ತು ಇದಕ್ಕಾಗಿ ಎಷ್ಟು ಹಣವನ್ನು ಇಟ್ಟಿದ್ದೀರಿ ಎಂಬ ಬಗ್ಗೆ ಹೇಳಬೇಕು. ಇಂದು ಗುಣಾತ್ಮಕವಾಗಿ ವಿದ್ಯುತ್ ಪೂರೈಕೆ ಇಲ್ಲದಿರುವ ಜೊತೆಗೆ ಮೋಟಾರ್‌ಗಳು ಕೂಡ ಕೆಟ್ಟುಹೋಗುತ್ತಿರುತ್ತವೆ. ಆ ಮೋಟಾರ್ ರಿಪೇರಿಯಾಗಿ ಬರುವವರೆಗೆ ನೀರೇ ಸಿಗುವುದಿಲ್ಲ. ಆದುದರಿಂದ ನನ್ನ ಸಲಹೆಯೆಂದರೆ ಅಡಿಶನಲ್ ಮೋಟಾರ್ ಇಟ್ಟು ಅದರಿಂದ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ಮಾಡಬೇಕು ಎಂಬುದೇ ಆಗಿದೆ. ಈ ರೀತಿ ಮಹಾರಾಷ್ಟ್ರದಲ್ಲೂ ಇದೆ. ಯೋಜನೆಯನ್ನು ತಯಾರಿಸುವಾಗಲೇ ಅಡಿಶನಲ್ ಮೋಟಾರ್ ಇರಬೇಕೆಂದು ಯೋಜನೆಯಲ್ಲಿ ಹೇಳಿರಬೇಕು. ಇವುಗಳ ಬಗ್ಗೆ ಮಂತ್ರಿಗಳು ಉತ್ತರ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ: ಇದು ಕೂಡ ಒಳ್ಳೆಯ ಸಲಹೆಯೇ ಆಗಿದೆ. ಈಗಾಗಲೇ ತಾಲ್ಲೂಕು ಮಟ್ಟದಲ್ಲಿ ಬೋರ್‌ವೆಲ್ ಪಂಪ್ ಬ್ಯಾಂಕ್ ಎಂದು ಇದೆ. ತಾಲ್ಲೂಕು ಮಟ್ಟದಲ್ಲಿ ಎಷ್ಟು ಪಂಪ್‌ಗಳು ಬೇಕಾಗುತ್ತದೋ ಅದಕ್ಕೆ ಬೇಕಾಗುವ ಹಣವನ್ನು ಬಿಡುಗಡೆ ಮಾಡುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಗುಂಡಪ್ಪ ವಕೀಲ್: ಮಾನ್ಯ ಅಧ್ಯಕ್ಷರೆ, ಇಡೀ ಕರ್ನಾಟಕದಲ್ಲಿ ಕುಡಿಯುವ

ನೀರಿನ ಸಮಸ್ಯೆ ಹೆಚ್ಚಾಗಿ ಬೀದರ್‌ನಲ್ಲಿದೆ. ಅದರಲ್ಲೂ ಬೀದರ್‌ನ ಔರಾದ್ ತಾಲ್ಲೂಕಿನ 22 ಹಳ್ಳಿಗಳಿಗೆ ಪ್ರತಿ ವರ್ಷ ನೀರನ್ನು ಟ್ಯಾಂಕರ್ ಮೂಲಕ ಪೂರೈಸುತ್ತಾರೆ. 50 ವರ್ಷಗಳಾಗಿದ್ದರೂ ಕೂಡ ಇಂದಿಗೂ ಕೂಡ ನಮ್ಮಲ್ಲಿಯ ಜನರು ನೀರಿನ ಭಿಕ್ಷೆಯನ್ನು ಕೇಳುತ್ತಿದ್ದಾರೆ. ಈ ರೀತಿಯ ಪರಿಸ್ಥಿತಿ ಇಡೀ ಜಗತ್ತಿನಲ್ಲಿಯೇ ಇಲ್ಲ. ಈ ಟ್ಯಾಂಕರ್ ಮೂಲಕ ನೀರನ್ನು ಪೂರೈಸುವ ಗುತ್ತಿಗೆದಾರರು ನಿಜವಾಗಿಯೂ ಎಷ್ಟು ಟ್ಯಾಂಕರ್ ನೀರನ್ನೊದಗಿಸುತ್ತಾರೋ ಬೋಗಸ್ ಲೆಕ್ಕದಲ್ಲಿ ಎಷ್ಟು ಟ್ಯಾಂಕರ್ ನೀರು ಒದಗಿಸಿವೆ ಎಂದು ಬರೆಯುತ್ತಾರೋ ನನಗಂತೂ ಗೊತ್ತಿಲ್ಲ. ಆದರೆ ಕಳೆದ 50 ವರ್ಷಗಳಿಂದಲೂ ಕೂಡ 22 ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರನ್ನು ಒದಗಿಸುತ್ತಾ ಬಂದಿದ್ದಾರೆ. ಪರ್ಮನೆಂಟ್ ವ್ಯವಸ್ಥೆಯನ್ನು ಇಂದಿಗೂ ಮಾಡಿಲ್ಲ. ಈ ವರ್ಷ ಆ 22 ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರನ್ನು ಒದಗಿಸುವ ವ್ಯವಸ್ಥೆಯೂ ಆಗಿಲ್ಲ. ಇದರ ಬಗ್ಗೆ ತಹಸೀಲ್ದಾರ್ ಮತ್ತು ಜಿಲ್ಲಾ ಪಂಚಾಯತ್‌ನವರನ್ನು ಕೇಳಿದರೆ ನಮಗೆ ಸರ್ಕಾರದಿಂದ ಇನ್ನೂ ಹಣ ಬಂದಿಲ್ಲವೆಂದು ಹೇಳುತ್ತಾರೆ. ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರು. ಆದರೆ ಆ ಹಣ ಕೂಡ ಬಂದಿಲ್ಲವೆನ್ನುತ್ತಾರೆ. ಕಳೆದ ಎರಡು ತಿಂಗಳುಗಳಿಂದ ಈ ಸಮಸ್ಯೆ ಉದ್ಭವವಾಗಿದೆ. ಇದರ ಬಗ್ಗೆ ಇಲ್ಲೇ ಕುಳಿತಿರುವ ಉಸ್ತುವಾರಿ ಮಂತ್ರಿಗಳು ಎದ್ದುನಿಂತು ಹೇಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ತಾವುಗಳು ಎಲ್ಲಿ ಸಮಸ್ಯೆಯಿರುತ್ತದೆ ಅಂತಹ ಕಡೆ ಪ್ರಿಯಾರಿಟಿ ಕೊಟ್ಟು ಮಾಡಬೇಕು.

ಶ್ರೀ ಎಂ.ವೈ.ಘೋರ್ಪಡೆ: ಲಿಸ್ಟ್ ಕೊಟ್ಟರೆ ನಾನು ತಕ್ಷಣ ನಮ್ಮ ಅಧಿಕಾರಿಗಳನ್ನು ಖಂಡಿತ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು: ಲಿಸ್ಟ್ ಕಳುಹಿಸಿಕೊಡಿ ಮಾಡುತ್ತೇವೆಂದು ಹೇಳಿದಮೇಲೆ ಇನ್ನು ಏನು ಕೇಳುವುದಿದೆ?

ಶ್ರೀ ಗುಂಡಪ್ಪ ವಕೀಲ: ಮಾನ್ಯ ಅಧ್ಯಕ್ಷರೆ, ಉಸ್ತುವಾರಿ ಮಂತ್ರಿಗಳಾದ ಮಾಲಕರೆಡ್ಡಿಯವರು ಮಾತನಾಡಬೇಕು.

ಅಧ್ಯಕ್ಷರು: ಉಸ್ತುವಾರಿ ಮಂತ್ರಿಗಳು ಉತ್ತರ ಕೊಡಿ.

+ ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಮೊನ್ನೆ ಔರಾದ್‌ನ ಒಂದು ತಾಲ್ಲೂಕಿನಲ್ಲಿ ಸುಮಾರು 20 ಹಳ್ಳಿಗಳಲ್ಲಿ ಟ್ಯಾಂಕರ್‌ನಿಂದ ನೀರನ್ನು ಸಪ್ಲೈ ಮಾಡುತ್ತಾರೆ ಎಂದು ಪ್ರಸ್ತಾಪ ಬಂತು. ಅಲ್ಲಿನ ಸಿ.ಇ.ಓ.ರವರು ಪ್ರಾಮಿಸ್ ಮಾಡಿ ಟ್ಯಾಂಕರ್‌ನ ಮುಖಾಂತರ ಅಲ್ಲಿ ಏನು ನೀರಿನ ತೊಂದರೆ ಇದೆ, ಅದು ಇಲ್ಲದ ಹಾಗೆ ಮಾಡುತ್ತೇವೆಂದು ಹೇಳಿದ್ದರು. ನಾನು ಒಂದು

ಗಹನವಾದಂತಹ ವಿಚಾರವನ್ನು ಇದರಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಇದು ಬಹಳ ಉನ್ನತ ಮಟ್ಟದಲ್ಲಿ ವಿಚಾರ ಮಾಡಿ ನಿರ್ಣಯ ತರತಕ್ಕಂಥ ವಿಚಾರ. ಇಲ್ಲಿ ಸನ್ಮಾನ್ಯ ಸಂಬಂಧಪಟ್ಟ ಸಚಿವರು ಇದ್ದಾರೆ. ಬೀದರ್‌ನಲ್ಲಿ ಒಂದು ಕಾರ್ಯಕ್ರಮ ಇತ್ತು. ನಾನು ಉಸ್ತುವಾರಿ ಸಚಿವನಾಗಿದ್ದರಿಂದ ನನ್ನನ್ನು ಕೂಡ ಭಾಗವಹಿಸಲು ಕರೆದಿದ್ದರು. ನಾನೂ ಭಾಗವಹಿಸಿದ್ದೆ. ನೀರಿನ ಸಂಬಂಧವಾಗಿ ಅವರು ನನಗೆ ಹೇಳುತ್ತಿದ್ದರು. ಮಾನ್ಯ ಬೈರೇಗೌಡರು ಕೇಳಬೇಕು, ನಿಮ್ಮಲ್ಲೂ ಕೂಡ ನೀರಿನ ತೊಂದರೆ ಬಹಳ ಇದೆ. ಪ್ರತಿಯೊಬ್ಬರೂ ಕೂಡ ಇಡೀ ಸದನದಲ್ಲಿ ಕೇಳಬೇಕು. ನಾನು ಇದನ್ನು ಅವರಿಂದ ತಿಳಿದುಕೊಂಡಿದ್ದೇನೆ. ಅದನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಎಲ್ಲಾ ಕಡೆ ಅಂತರ್ಜಲ ಮಟ್ಟ ಬಹಳ ಕೆಳಗಡೆ ಹೋಗಿದೆ, ಇದರಿಂದ ಪ್ರತಿಯೊಬ್ಬರಿಗೂ ಕೂಡ ಭಯ, ಕಳವಳವಾಗಿದೆ. ಮಳೆ ನೀರು ಮೇಲೆ ಸಂಗ್ರಹವಾಗಿದೆ. ಕೆಳಮಟ್ಟದಲ್ಲೂ ನೀರಿಲ್ಲ. ನಾನು ಅವರಿಗೆ ಪ್ರಶ್ನೆ ಮಾಡಿದರೆ, ಅವರು ತಮ್ಮ ಭಾಷಣದಲ್ಲಿ ಹೇಳಿದರು. ನನ್ನ ಜಿಲ್ಲೆಯಲ್ಲಿ ಏನು ಹಸಿರು ಕ್ರಾಂತಿಯನ್ನು ಮಾಡಿದ್ದೇನೆ. ಅಲ್ಲಿ 12 ಇಂಚು ಮಳೆ ಬರುತ್ತದೆ.

The average rainfall is 12" ಜೊತೆಗೆ ಅವರು 12 ತಿಂಗಳುಗಳ ಕಾಲ ಸಮಗ್ರ 340 ಹಳ್ಳಿಗಳಲ್ಲಿ ತರಕಾರಿಯನ್ನು ಬೆಳೆಯುತ್ತಿದ್ದು 12 ತಿಂಗಳು ಹಸಿರು ಇದ್ದು, ನಾವು ಬೆಳೆದಂತಹ ತರಕಾರಿಗಳನ್ನು ಎಕ್ಸ್‌ಪೋರ್ಟ್ ಮಾಡುತ್ತೇವೆಂದು ತಿಳಿಸಿದರು. ಅವರು ಮೊದಲು ಐದು ಗ್ರಾಮಗಳನ್ನು ತೆಗೆದುಕೊಂಡು ಏನು ಮಾಡಿದರೆಂದರೆ ಮೊದಲು ಬೋರ್‌ವೆಲ್‌ನಿಂದ ಇರಿಗೇಷನ್ ಸ್ಟಾಪ್ ಮಾಡಿಸಿದರು. ಎರಡನೆಯದಾಗಿ ಇರಿಗೇಷನ್ ಟ್ಯಾಂಕ್ಸ್ ಏನಿದೆ ಅದರಿಂದ ನೀರಾವರಿ ಮಾಡಿಸುವುದನ್ನು ಬಂದ್ ಮಾಡಿ, ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಎಲ್ಲೆಲ್ಲಿ ಸಾಧ್ಯವಿದೆ ಅಲ್ಲಿ ಓಪನ್ ವೆಲ್ ತೆಗೆಸಿ ಅದರಿಂದ ಮೊದಲು ಐದು ಗ್ರಾಮಗಳಲ್ಲಿ ನೀರಾವರಿ ಮಾಡಿಸಿದ ಮೇಲೆ ಇವತ್ತು ಕಡು ಬೇಸಿಗೆಯಾದ ಮೇ ತಿಂಗಳಲ್ಲೂ ಕೂಡ ನೀರಿನ ಮಟ್ಟ ಓಪನ್ ವೆಲ್‌ನಲ್ಲಿ ಹಾಗೆ ಇರುತ್ತದೆ. ಈ 340 ಗ್ರಾಮಗಳಲ್ಲಿ ಏನು ಅವರು ಕ್ರಾಂತಿ ಮಾಡಿದರು, ಅದಕ್ಕೆ ಸರ್ಕಾರಿ ಬ್ಯಾಂಕ್‌ಗಳಿಂದ, ಬೇರೆ ಯಾವುದೇ ಕೋ-ಆಪರೇಟೀವ್ ಬ್ಯಾಂಕ್‌ಗಳಿಂದ ನಾವೇನು ಸಾಲವನ್ನು ತೆಗೆದುಕೊಂಡಿಲ್ಲ, ಅದರ ಬದಲು ನಾವೇ ಸೊಸೈಟಿ ಒಂದನ್ನು ಊರಿನವರೆಲ್ಲಾ ಸೇರಿ ಮಾಡಿಕೊಂಡು, ಅದಕ್ಕೆ ಹಣ ಹಾಕಿ, ಅಥವಾ ಹೆಚ್ಚು ಶೇರ್ ತೆಗೆದುಕೊಂಡು ಹಣ ಸಂಗ್ರಹಣೆ ಮಾಡಿ, ನಮ್ಮ ಹಣ ನಮ್ಮಲ್ಲಿ ರೋಟೇಟ್ ಮಾಡಿಕೊಂಡು ಇಷ್ಟೊಂದು ಕೆಲಸವನ್ನು ನಾವು ಮಾಡಿಕೊಂಡಿದ್ದೇವೆಂದು ತಿಳಿಸಿದರು. ಈ ರೀತಿ ದೊಡ್ಡ ಮಟ್ಟದಲ್ಲಿ ನೀವು ಏಕೆ ಮಾಡಬಾರದೆಂದು ಕೇಳಿದರು. ಅದರ ಜೊತೆಗೆ ಅವರು ಒಂದು ಮಾತು ಹೇಳಿದರು. ದಿಗ್ವಿಜಯಸಿಂಗ್ ಅವರು ನಮಗೆ ಆಮಂತ್ರಣ ಕೊಟ್ಟಿದ್ದಾರೆ, ಯಾವರೀತಿಯಲ್ಲಿ ನೀವು ಹಸಿರು ಕ್ರಾಂತಿಯನ್ನು ಮಾಡಿದಿರಿ ಎಂದು ಕೇಳಿದರು. ಅದಕ್ಕಾಗಿ ಅವರನ್ನು 19ನೇ ತಾರೀಖಿನ ದಿವಸ ಭೇಟಿ

ಮಾಡುತ್ತಿದ್ದೇನೆ. ಇದಾದಮೇಲೆ ಆಂಧ್ರದ ಮುಖ್ಯಮಂತ್ರಿಗಳಾದ ಚಂದ್ರಬಾಬು ನಾಯ್ಡುರವರು ಆಮಂತ್ರಣ ಕೊಟ್ಟಿದ್ದು, ಅವರು ಬೇರೆ ವಿಷಯವಾಗಿ ಮಾತನಾಡುವವರಿದ್ದಾರೆ. ಅಲ್ಲೂ ಕೂಡ ಹೋಗಿ ನಾವು ಮಾಡುತ್ತಿದ್ದೇವೆ ಎಂದು ಹೇಳಿದರು. ಈ ವಿಚಾರವನ್ನು ನಾನು ಇಲ್ಲಿ ತಮ್ಮ ಮುಂದೆ ಇಟ್ಟಿದ್ದೇನೆ. ಏನು ವಿಚಾರ ಮಾಡುತ್ತೀರಿ ನೋಡಿ. ಏಕೆಂದರೆ ನೀರಿನ ವಿಚಾರದಲ್ಲಿ ಪ್ರತಿಯೊಬ್ಬರಿಗೂ ಕಳವಳ ಉಂಟಾಗಿದೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮಾನ್ಯ ಸಚಿವರು ಹೇಳಿದಂತಹ ಯೋಜನೆ ಈಗಾಗಲೇ ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ಅಳವಡಿಸಲಾಗಿದೆ. ಆದರೆ ನಾವು ಪೂರ್ತಿಯಾಗಿ ಅಧಿಕಾರಿಗಳ ಮೇಲೆ ಅವಲಂಬಿತವಾಗಿದ್ದೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ತಾವು ಜಿಲ್ಲಾ ಉಸ್ತುವಾರಿ ಮಂತ್ರಿಗಳು ಆಗಿದ್ದೀರಿ, ಆದುದರಿಂದ ಅಲ್ಲಿನ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತನ್ನಿ ಎಂದು ಅವರು ಹೇಳಿದ್ದುದು.

ಡಾ: ಎ.ಬಿ. ಮಾಲಕರೆಡ್ಡಿ: ಅವತ್ತೇ ರಿವ್ಯೂ ಮಾಡಿದ್ದೆವು, 20 ಹಳ್ಳಿಗಳಿಗೆ ಟ್ಯಾಂಕರ್‌ನಿಂದ ನೀರನ್ನು ಒದಗಿಸಿ ಕೊಡುತ್ತಿದ್ದೇವೆ.

. ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಸದಸ್ಯರಾದ ಗುಂಡಪ್ಪನವರು ಅಲ್ಲಿ ನೀರಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ದುಡ್ಡು ಬಿಡುಗಡೆಯಾಗಿದೆ ಎಂದು ಹೇಳುತ್ತಿದ್ದಾರೆ. ಪರ್ಫೆಕ್ಟ್ ಆಗಿ ಮಾನ್ಯ ಘೋರ್ಪಡೆಯವರು ಸಮಗ್ರವಾಗಿ ಇಡೀ ನಾಡಿಗೆ ಏನು ಮಾಡಬೇಕೆನ್ನುವುದನ್ನು ತಿಳಿದುಕೊಂಡಿದ್ದಾರೆ. ಅದನ್ನು ನಾವು ಒಪ್ಪೋಣ, ಅದನ್ನು ಮಾಡೋಣ. ಆದರೆ ಮಾನ್ಯ ಗುಂಡಪ್ಪನವರು ಏನು ಕೇಳಿದರೆಂದರೆ ನೀವು ಜಿಲ್ಲಾ ಉಸ್ತುವಾರಿ ಮಂತ್ರಿಗಳು, ನಮ್ಮಲ್ಲಿ ಕುಡಿಯುವ ನೀರಿನ ಟ್ರಾನ್ಸ್‌ಪೋರ್ಟ್ ತೊಂದರೆ ಇದೆ. ತಹಸೀಲ್ದಾರ್ ಹತ್ತಿರ ಹೋದರೆ ದುಡ್ಡು ರಿಲೀಸು ಆಗಿಲ್ಲವೆಂದು ಹೇಳುತ್ತಾರೆ. ನೀವು ಕೆ.ಡಿ.ಬಿ. ರಿವ್ಯೂ ಮಾಡಿದ್ದೀರಾ ಏನು ಪರಿಸ್ಥಿತಿ ಎನ್ನುವುದನ್ನು ಕೇಳುತ್ತಿದ್ದಾರೆ.

ಡಾ: ಎ.ಬಿ. ಮಾಲಕರೆಡ್ಡಿ: ನಾನು ಆಗಲೇ ಹೇಳಿದೆ, ಸಿ.ಇ.ಓ.ರವರು ಪ್ರಾಮಿಸ್ ಮಾಡಿ ಈ 20 ಹಳ್ಳಿಗಳಿಗೆ ಯಾವುದೇ ನೀರಿನ ತೊಂದರೆ ಆಗದ ಹಾಗೆ ಮಾಡುತ್ತೇವೆ ಎಂದು ತಿಳಿಸಿದ್ದರು. ಮಾನ್ಯ ಸದಸ್ಯರು ನನ್ನನ್ನು 2-3 ಸಲ ಭೇಟಿ ಆಗಿದ್ದರೂ ಸಹ ಈ ವಿಚಾರವಾಗಿ ಒಂದು ಸಲ ಪ್ರಸ್ತಾಪ ಮಾಡಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಈಗ ಅಲ್ಲಿ ಏನು ವ್ಯವಸ್ಥೆ ಮಾಡಿದ್ದೀರಿ ಎನ್ನುವುದು ಪ್ರಶ್ನೆ. ಅಲ್ಲಿ ಸಿ.ಇ.ಓ. ಪ್ರಾಮಿಸ್ ಮಾಡಿದ್ದಾರೆ ಎನ್ನುವುದಲ್ಲ. ಆ 22 ಹಳ್ಳಿಗೆ ಹಣ ಬಂದಿಲ್ಲ

ಎಂದು ಹೇಳುತ್ತಿದ್ದಾರೆ. ದುಡ್ಡು ಬರಬೇಕಲ್ಲ. ಅದನ್ನು ಕೊಟ್ಟಿದ್ದಾರೋ ಇಲ್ಲವೋ ವೆರಿಫೈ ಮಾಡಬೇಕಲ್ಲ ಅವರು. ಸಿ.ಇ.ಓ. ಪ್ರಾಮಿಸ್ ಮಾಡಿದರೆ ನಡೆಯುವುದಿಲ್ಲ.

ಅಧ್ಯಕ್ಷರು: ಮಾನ್ಯ ಮಾಲಕರೆಡ್ಡಿಯವರೆ ಮಾನ್ಯ ಸದಸ್ಯರು ಹೇಳಲಿ, ಬಿಡಲಿ ನೀವು ಇನ್‌ಚಾರ್ಜ್ ಮಿನಿಸ್ಟರ್ it is your duty to do it. ನೀವು ಮಾಡಬೇಕು.

ಶ್ರೀ ಎಂ.ಡಿ.ಲಕ್ಷ್ಮಿನಾರಯಣ್: ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆ ಔರಾದ್ ಶಾಸಕರು ಏನು ಹೇಳುತ್ತಿದ್ದಾರೆ, ಅದರ ಬಗ್ಗೆ ಹೇಳುವುದಾದರೆ ಅಂಗಾರಕ ಎನ್ನುವ ಒಂದು ಹಳ್ಳಿಯನ್ನು ನಾವೇ ಕಣ್ಣಿಂದ ನೋಡಿಕೊಂಡು ಬಂದಿದ್ದೇವೆ. ಅದು ಅಲ್ಲಿಂದ 60 ಕಿಲೋಮೀಟರ್ ದೂರ ಇರತಕ್ಕಂಥ ಹಳ್ಳಿ. ಅಲ್ಲಿ ಜನರು ಸ್ನಾನ ಮಾಡತಕ್ಕಂಥ ನೀರನ್ನು ಪುನಃ ಬಿಂದಿಗೆಯಲ್ಲಿ ಹಿಡಿದುಕೊಂಡು, ಅದೇ ನೀರಿನಲ್ಲಿ ಕೈಕಾಲು ತೊಳೆಯುವುದಕ್ಕೆ ಉಪಯೋಗಿಸುತ್ತಿದ್ದಾರೆ. ಅದನ್ನು ನಾವು ನೋಡಿಕೊಂಡು ಬಂದಿದ್ದೇವೆ. ಮಾನ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆ, ದಯಮಾಡಿ ಆ ಯೋಜನೆ ಇಂಪ್ಲಿಮೆಂಟ್ ಆಗಬೇಕು. ಆ ಕೆಲಸ ಮಾಡಬೇಕು, ಹಣ ಈ ರೀತಿ ಪೋಲು ಆಗುವುದಕ್ಕೆ ಬಿಡಬಾರದು ಎಂದು ಹೇಳುತ್ತಿದ್ದೇನೆ.

ಶ್ರೀ ರೇವುನಾಯಕ್ ಬೆಳಮಗಿ: ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ, ನನ್ನ ಕೂಗು ಕೇಳಿಸುತ್ತಿಲ್ಲವೆಂದು ಕಾಣಿಸುತ್ತದೆ. ಮಾನ್ಯ ಹಿರಿಯ ಸಚಿವರು ಇದ್ದಾರೆ. ಇಡೀ ನನ್ನ ಗುಲ್ಬರ್ಗ ಜಿಲ್ಲೆಯಲ್ಲಿ ನೀರಿನದು ಬಹಳ ಸಮಸ್ಯೆಯಾಗಿದೆ. ರೈತರು ಬೀದಿಪಾಲಾಗಿ ಕಂಗಾಲಾಗಿದ್ದಾರೆ. ಬಿಸಿಲು ಕೂಡ ಹೆಚ್ಚಿಗೆ ಇದೆ. ನಾನು ಪದೇ ಪದೇ ಹೇಳುತ್ತಿದ್ದೇನೆ. ಕಮಲಾಪುರ ಕ್ಷೇತ್ರದಲ್ಲಿ ನೀರಿನ ಸಮಸ್ಯೆ ಇದ್ದು ಅದನ್ನು ಯಾವಾಗ ಪರಿಹಾರ ಮಾಡುತ್ತಿರೆಂದು ನಿರ್ಧಿಷ್ಟವಾಗಿ ಹೇಳಬೇಕು. ನಿನ್ನೆ ಕೂಡ ಹೇಳಿದ್ದೇನೆ. ಯಾವ ಕ್ಷೇತ್ರಕ್ಕೆ ಹೋಗಬೇಕಾದರೂ ಕೂಡ ನನಗೆ ಭಯವಾಗುತ್ತದೆ. ಏಕೆಂದರೆ ನನಗೆ ಘೇರಾವ್ ಮಾಡಿದ್ದಾರೆ. ಕಮಲಾಪುರ ಕ್ಷೇತ್ರದಲ್ಲಿ ನೀರಿನ ಸಮಸ್ಯೆ ಇಡೀ ರಾಜ್ಯದಲ್ಲಿ ಇರುವುದಕ್ಕಿಂತಲೂ ಹೆಚ್ಚಿನ ಸಮಸ್ಯೆ ಇದೆ. ಆದ್ದರಿಂದ ತಾವು ನಿರ್ದಿಷ್ಟವಾಗಿ ಹೇಳಬೇಕು.

ಅಧ್ಯಕ್ಷರು: ದಿವಾಕರ ಬಾಬು ಅವರೆ ನೀವು ಎಲ್ಲಾ ಗುರುತು ಹಾಕಿಕೊಳ್ಳಿ. ನೀವು ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು.

ಶ್ರೀ ಜಗದೀಶ್ ಶೆಟ್ಟರ್: ನಿನ್ನೆ ಡಿಸ್‌ಕಸ್ ಮಾಡುವಾಗ ಸ್ಪೆಸಿಫಿಕ್ ಆಗಿ ಕೆಲವು ಸಮಸ್ಯೆಗಳ ಬಗ್ಗೆ ಹೇಳಿದ್ದೆ. ಅದರ ಬಗ್ಗೆ ಮಂತ್ರಿಗಳಿಂದ ರಿಪ್ಲೈ ಬರಲೇ ಇಲ್ಲ.

(ಗೊಂದಲ)

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ಮಾನ್ಯ ಅಧ್ಯಕ್ಷರೆ, ಇವತ್ತು ಗ್ರಾಮೀಣಾಭಿವೃದ್ಧಿ

ಸಚಿವರು ಉತ್ತರವೇನೋ ಸರಿಯಾಗಿ ಕೊಟ್ಟಿದ್ದಾರೆ. ಉತ್ತರ ಯಾವರೀತಿ ಇತ್ತು ಎಂದರೆ ನಮ್ಮ ಮನೆಯಲ್ಲಿ ಬೆಂಕಿ ಬಿದ್ದಿದೆ ಎಂದರೆ ಬಾವಿ ತೋಡಿಸೋಣ ಎಂದ ಹಾಗೆ ಇತ್ತು.

ಅಧ್ಯಕ್ಷರು: ನಿಮಗೆ ಏನು ಆಗಬೇಕಾಗಿದೆ ಅಷ್ಟು ಮಾತ್ರ ಹೇಳಿ. ಉಪಮಾನ ಉಪಮೇಯ ಅದೆಲ್ಲಾ ಬೇಡ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ನಿನ್ನೆ ಚರ್ಚೆಯಲ್ಲಿ ಏನಾಗಿತ್ತೆಂದರೆ ಈಗ ಇರತಕ್ಕಂಥ ಎಲ್‌ಆರ್‌ಡಬ್ಲ್ಯೂ ಸಿಆರ್‌ಡಬ್ಲ್ಯೂ ಸ್ಕೀಮ್ ಇದ್ದರೂ ನಮಗೆ ಕರೆಂಟ್ ಅಭಾವ ಇದೆ. ಅಲ್ಲಿ ಎಲ್‌ಆರ್‌ಡಬ್ಲ್ಯೂ ಸಿಆರ್‌ಡಬ್ಲ್ಯೂಗಳಿಗೆ ತುಂಬುತ್ತಾ ಇಲ್ಲ. ಇದರ ಬಗ್ಗೆ ಒಂದು ನಿರ್ದಿಷ್ಟ ಆದೇಶ ಕೊಡಿ ಎಂದು ಕೇಳಿದ್ದೆವು. ಇವತ್ತು ಕೊಳವೆ ಬಾವಿ ಇಲ್ಲ, ಅದನ್ನು ತೋಡಿಸುವುದಕ್ಕೆ ಅವಕಾಶ ಮಾಡಿಕೊಡಿ.

ನಾವು ಸಿಇಒಗಳ ಹತ್ತಿರವೂ ಕೇಳಿದ್ದೇವೆ, ಅವರು ಕೊಳವೆ ಬಾವಿಗಳನ್ನು ತೆಗೆಯುವುದಕ್ಕೆ ಹಣವಿಲ್ಲವೆಂದು ಹೇಳುತ್ತಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ಕೀಮ್‌ನಲ್ಲಿದ್ದಂತಹ ಕೊಳವೆ ಬಾವಿಗಳನ್ನು ಸಹ ಕೊರೆಸಿಲ್ಲ. ಅವರು ಬೋರ್‌ವೆಲ್ ಡಿವಿಜನ್‌ನಿಂದ ಕೊರೆಸಬೇಕೆಂದು ಹೇಳುತ್ತಾರೆ, ಪ್ರೈವೇಟ್ ಏಜೆನ್ಸಿ ಇದೆ. ಇಲ್ಲಿ ಇಂತಹ ಸಮಸ್ಯೆಗಳು ಇದೆ, ಕುಡಿಯುವ ನೀರಿನ ಅಗತ್ಯವಿರುವಂತಹ ಸ್ಕೀಮ್ ಮಾಡುವಂಥಾದ್ದು, ಅಂತಹ ಯೋಜನೆಗಳನ್ನು ಮಾಡುವಂಥಾದ್ದಕ್ಕೆ ನಮ್ಮದು ಯಾರದು ತಕರಾರು ಇಲ್ಲ. ಆದರೆ ತಕ್ಷಣ ಏನಾಗಬೇಕು, ಅದರ ಬಗ್ಗೆ ಶಾಸಕರ ಜೊತೆಗೆ ಸಮಾಲೋಚನೆ ಮಾಡಿ.ಎಲ್ಲೆಲ್ಲಿ ಎಕ್ವಿಪ್‌ಮೆಂಟ್ ಪ್ರಾಬ್ಲಂ ಇದೆಯೋ ಅದನ್ನು ಬಗೆಹರಿಸುವುದಕ್ಕೆ ಸ್ವಲ್ಪ ಹಣವನ್ನು ಬಿಡುಗಡೆ ಮಾಡಬೇಕೆಂದು ನನ್ನ ಮನವಿಯಾಗಿದೆ.

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು 160 ಹಳ್ಳಿಗಳಲ್ಲಿ ನೀರಿನ ಅಭಾವವಿದೆ. ಅದರಲ್ಲಿ 30 ಮಿನಿ ವಾಟರ್ ಸಪ್ಲೈಗೆ ಇಲ್ಲಿಯವರೆಗೆ ವಿದ್ಯುತ್ ಸರಬರಾಜು ಕೊಟ್ಟಿಲ್ಲ. ಕಳೆದ ಮೂರು ವರ್ಷಗಳಿಂದ ಪ್ರಯತ್ನ ಮಾಡಿದರೂ ಕೊಟ್ಟಿಲ್ಲ. ಅದು ಎನ್.ಆರ್.ಡಬ್ಲ್ಯೂ.ಎಸ್‌ಗಳಿರುವಂತಹ ಕಡೆಗಳಲ್ಲಿ ಏನಾಗಿದೆ ಎಂದರೆ ಎಲ್ಲಾ ಕಡೆ ನೀರಿನ ಅಭಾವ ಕಡಿಮೆಯಾಗುತ್ತಿದೆ. ಅಂತಹ ನೂರು ಹಳ್ಳಿಗಳಿಗೆ ಎಲ್‌ಆರ್‌ಡಬ್ಲ್ಯೂಎಸ್ ಇದೆ. ಅಲ್ಲಿ ನೀರು ಇಲ್ಲದಿರುವುದರಿಂದ ಕೊಳವೆ ಬಾವಿಗಳನ್ನು ತೆಗೆಸಬೇಕೆಂದು ಸಿ.ಇ.ಓ. ಅವರು ವರದಿಯನ್ನು ಕೊಟ್ಟಿದ್ದಾರೆ. ನಾವು ಮಾನ್ಯ ಮಂತ್ರಿಯವರನ್ನು ಖುದ್ದಾಗಿ ಭೇಟಿ ಮಾಡಿ ವರದಿಯನ್ನು ಕೊಟ್ಟಿದ್ದೇವೆ. ಯಾವ್ಯಾವ ದೊಡ್ಡ ಹಳ್ಳಿಗಳು, ಗ್ರಾಮಗಳು ಇವೆ, ಅಲ್ಲಿ ನೂರು ಕೊಳವೆ ಬಾವಿಗಳು ಬೇಕೆಂದು ಈಗಾಗಲೇ ವರದಿಯನ್ನು ಕೊಟ್ಟಿದ್ದೇವೆ. ಆ ದೃಷ್ಟಿಯಿಂದ ನಾವೆಲ್ಲ ಸತತವಾಗಿ ಭೇಟಿ ಮಾಡಿ ಖುದ್ದಾಗಿ ಮಾನ್ಯ ಮಂತ್ರಿಯವರಿಗೆ ವರದಿಯನ್ನು ಕೊಟ್ಟಿದ್ದೇವೆ. ಇದರಿಂದ ಎಲ್‌ಆರ್‌ಡಬ್ಲ್ಯೂಎಸ್ ಇದ್ದರೂ ಸಹ ನೀರು

ಇಲ್ಲದ ಹಾಗೆ ಆಗಿದೆ. ವಿದ್ಯುತ್ ಇಲ್ಲ, ನೀರು ಇಲ್ಲ, ಆ ದೃಷ್ಟಿಯಿಂದ ಮೂವತ್ತು ಮಿನಿ ವಾಟರ್ ಸಪ್ಲೈಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ನಾವು ನೀರನ್ನು ಪಡೆಯುವಂಥಾದ್ದಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು. ಮತ್ತೆ ಎಆರ್‌ಡಬ್ಲ್ಯೂಎಸ್‌ನಲ್ಲಿರುವಂತಹ ಗ್ರಾಮಗಳಿಗೆ ನೂರು ಕೊಳವೆ ಬಾವಿಗಳನ್ನು ತೆಗೆಸುವಂಥಾದ್ದಕ್ಕೆ ತಾವು ಆದೇಶವನ್ನು ಕೊಡಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳುತ್ತೇನೆ. ನಾವು ಇದರ ಬಗ್ಗೆ ಪದೇ ಪದೇ ಮನವಿಗಳನ್ನು ಕೊಟ್ಟಿದ್ದೇವೆ, ಮಾನ್ಯ ಮಂತ್ರಿಯವರು ಒಂದು ಕೋಟಿ ಐವತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದರು. ಆದರೆ ಸಿ.ಇ.ಓ ಕೇಳಿದರೆ ಹಣ ಬಿಡುಗಡೆ ಮಾಡಿಲ್ಲವೆಂದು ನಮಗೆ ವರದಿಯನ್ನು ಕೊಡುತ್ತಿದ್ದಾರೆ. ದಯಮಾಡಿ ಇದರ ಬಗ್ಗೆ ತಾವು ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಎಂ.ವೈ.ಘೋರ್ಪಡೆಯವರೆ, ತಾವು ಇಬ್ಬರೂ ಮಂತ್ರಿಗಳು ಇದ್ದೀರಿ, ಈಗ ಮಾನ್ಯ ಸದಸ್ಯರುಗಳು ಹೇಳಿದಂತೆ ನೀರಿನ ಹಾಹಾಕಾರವಿರುವಂಥಾದ್ದು, ಈ ಅಭಾವ ಏನಿದೆ ಅದು ತಮಗೂ ಅರ್ಥವಾಗಿದೆ. ಆದುದರಿಂದ, ಇದರ ಬಗ್ಗೆ ನನ್ನ ಸಜೆಷನ್ ಏನೆಂದರೆ ಸಾಧ್ಯವಾದರೆ ತಾವು ಸಿಇಓಗಳನ್ನು ಕರೆಸಿ ಇಲ್ಲೇ ದಿವಸಕ್ಕೆ ನಾಲ್ಕು ಜಿಲ್ಲೆಗಳಂತೆ ಕರೆದು ಏಕೆ ಪರಿಹಾರವನ್ನು ಕಂಡುಕೊಳ್ಳಬಾರದು? ಅವರ ಹತ್ತಿರ ಪೂರ್ಣ ಮಾಹಿತಿಗಳು ಇರುತ್ತವೆ. ನೀವು ಇದಕ್ಕೆ ಸಂಬಂಧಪಟ್ಟ ಹಾಗೆ ಇಬ್ಬರೂ ಮಂತ್ರಿಗಳು ಇದ್ದೀರಿ. ನೀವು ಮೂರು ಜಿಲ್ಲೆಗಳು, ಅವರು ಮೂರು ಜಿಲ್ಲೆಗಳೆಂದು ತೆಗೆದುಕೊಂಡು ಇಲ್ಲಿ ಏನೇನು ವ್ಯತ್ಯಾಸಗಳು ಇದೆ, ಅದನ್ನು ತಾವು ಏಕೆ? ಏನು? ಎಂದು ತಿಳಿದುಕೊಂಡು ಪರಿಹಾರ ಕಂಡುಕೊಳ್ಳುವಂತಹ ಕೆಲಸವನ್ನು ಏಕೆ ಮಾಡಬಾರದು?

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ತಾವು ನನ್ನನ್ನು ಕೇಳಿದರೆ ಹೇಗೆ? ಅವರು ತಮ್ಮ ತಮ್ಮ ಜಿಲ್ಲೆಗಳಲ್ಲಿ ಜಿಲ್ಲಾ ಪರಿಷತ್ತು, ಪಂಚಾಯತ್ ಮೀಟಿಂಗ್ ಆದಾಗ ಅದರಲ್ಲಿ ಭಾಗವಹಿಸಿದರೆ ಬಹಳ ಉಪಯೋಗವಾಗುತ್ತದೆ.

(ಗೊಂದಲ)

ಅಧ್ಯಕ್ಷರು: ತಾವು ಒಂದು ವಾರದೊಳಗೆ ಜಿಲ್ಲಾ ಮಟ್ಟದಲ್ಲಿ ಆಯಾ ಕ್ಷೇತ್ರ ಶಾಸಕರನ್ನು ಕರೆದು ಮೀಟಿಂಗ್ ಮಾಡಿ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ನಾನು ಡಿವಿಜನ್ ವೈಸ್ ಮೀಟಿಂಗ್‌ಗೆ ಹೋಗುತ್ತೇನೆ, ಆಗ ಮಾನ್ಯ ಸದಸ್ಯರು ಭಾಗವಹಿಸಿ ಮಾತನಾಡಬಹುದು. ಅಧಿಕಾರಿಗಳು ಇಲ್ಲಿಗೆ ಬಂದರೆ ಅಲ್ಲಿ ಕೆಲಸ ನಿಂತು ಹೋಗುತ್ತದೆ. ಆದುದರಿಂದ ನಾವೇ ಅಲ್ಲಿಗೆ ಹೋಗಬೇಕು.

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ:ಮಾನ್ಯ ಅಧ್ಯಕ್ಷರೆ, ನೀರಿನ ಸಮಸ್ಯೆ ಬಹಳ ಇದೆ. ಇಲ್ಲೇ ಮೀಟಿಂಗ್ ಆಗಬೇಕು.

ಶ್ರೀ ಹೆಚ್.ಎಸ್.ಮಹದೇವ್ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲೇ ಸಿ.ಇ.ಓಗಳನ್ನು ಕರೆಸಿ, ನಮ್ಮ ಜಿಲ್ಲಾ ಶಾಸಕರುಗಳನ್ನು ಕರೆಯಿಸಿ ಚರ್ಚೆ ಮಾಡಲಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಪ್ರತಿನಿತ್ಯ ಒಂದೆರಡು ಜಿಲ್ಲೆಗಳ ಸಿಇಓ ಇಲ್ಲೇ ಕರೆಸಿ ಮಾತನಾಡಿದರೆ ಚೆನ್ನಾಗಿರುತ್ತದೆ.

ಅಧ್ಯಕ್ಷರು: ಜಿಲ್ಲಾ ಮಟ್ಟದಲ್ಲಿ ಎಲ್ಲಾದರೂ ಒಂದು ಕಡೆ ಮಾಡಬಹುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದ ಸೇಡಂನಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವಂತಹ ಗ್ರಾಮಗಳು ಇವೆ. ಈ ವರ್ಷ ಅನಾವೃಷ್ಟಿಯಿಂದ ನೀರಿನ ಮಟ್ಟ ಕೆಳಗೆ ಹೋಗಿ ಬಹಳಷ್ಟು ತೊಂದರೆಯಾಗಿದೆ. ಇದರ ಬಗ್ಗೆ ಒಂದು ವರದಿಯನ್ನು ಸನ್ಮಾನ್ಯ ಮಂತ್ರಿಯವರಿಗೂ ಮತ್ತು ಸನ್ಮಾನ್ಯ ಮುಖ್ಯಮಂತ್ರಿಯವರಿಗೂ 2-3 ತಿಂಗಳುಗಳ ಹಿಂದೆ ಮನವಿಯನ್ನು ಕೊಟ್ಟಿದ್ದೇವೆ. ಅವರು ಅದರ ಮೇಲೆ ಖಾಲಿ ಆದೇಶವನ್ನು ಮಾತ್ರ ಕೊಟ್ಟಿದ್ದಾರೆ. ಆದರೆ ಇಲ್ಲಿಯವರೆಗೂ ಯಾವುದೇ ವ್ಯವಸ್ಥೆಯಾಗಿಲ್ಲ.

ಅಧ್ಯಕ್ಷರು: ಇದರ ಬಗ್ಗೆ ಮಾನ್ಯ ಮಂತ್ರಿಯವರು ಯೋಚನೆ ಮಾಡಿ ಹೇಳುತ್ತಾರೆ. ಈಗ ಅವರು ಸಮಗ್ರವಾಗಿ ಪ್ರತಿಯೊಂದು ತಾಲ್ಲೂಕಿನ ಬಗ್ಗೆ ವಿಚಾರ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅದ್ಯಕ್ಷರೆ, ನಾವು ಇನ್ನೊಂದು ಕೆಲಸವನ್ನು ಮಾಡಬಹುದು ರಾಜೀವ್‌ಗಾಂಧಿ ಟೆಕ್ನಾಲಜಿ ಮಿಷನ್ ಎಂದು ಮಾಡಿದ್ದೇವೆ. ಆಯಾ ಜಿಲ್ಲಾ ಉಸ್ತುವಾರಿ ಮಂತ್ರಿಗಳು ರಾಜೀವ್‌ಗಾಂಧಿ ಟೆಕ್ನಾಲಜಿ ಮಿಷನ್ ಮೀಟಿಂಗ್ ಕರೆದರೆ ಈ ಕೆಲಸ ಸುಸೂತ್ರವಾಗಿ ನಡೆಯುತ್ತದೆ. ಅದರಲ್ಲಿ ಮಂತ್ರಿಗಳೇ ಚೇರ್ಮನ್ ಆಗಿರುತ್ತಾರೆ. ಆದುದರಿಂದ ಅವರೇ ಮೀಟಿಂಗ್ ಕರೆಯಬಹುದು.

ಅಧ್ಯಕ್ಷರು: ಮಾನ್ಯ ಘೋರ್ಪಡೆಯವರೆ, ಈಗ ಶನಿವಾರ, ಭಾನುವಾರ, ಸೋಮವಾರ ಮೂರು ದಿವಸಗಳು ರಜೆ ಇದೆ. ಈ ಮೂರು ದಿವಸಗಳಲ್ಲಿ ಆಯಾ ಜಿಲ್ಲೆಗಳ ಮೀಟಿಂಗ್‌ಗೆ ಏರ್ಪಾಡು ಮಾಡಿ, ಆಗ ಆಯಾ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಹೋಗಿ ವಿಚಾರಿಸಿಕೊಂಡು ಬರಲಿ,

(ಗೊಂದಲ)

ಶ್ರೀ ಸಿ. ಭೈರೇಗೌಡ: ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಒಂದು ಸರ್ಕುಲರ್ ಹೊರಡಿಸಿದ್ದಾರೆ, ಅದೇನೆಂದರೆ ಹಿಂದೆ ಕುಡಿಯುವ ನೀರಿನ ಕೊಳವೆ ಬಾವಿಗಳು ಇರುವಂತಹ ಕಡೆಗಳಲ್ಲಿ 820 ಅಡಿ ವ್ಯಾಸದಲ್ಲಿ ಬೇರೆ ಖಾಸಗಿಯವರ ವ್ಯವಸಾಯ ಭೂಮಿಯಾಗಲಿ, ಬೇರೆ ಯಾವ ಉದ್ದೇಶಕ್ಕಾಗಲಿ ತೋಡಿದಂತಹ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಡಬಾರದೆನ್ನುವಂತಹ ಸರ್ಕ್ಯುಲರ್ ಇತ್ತು. ಅದನ್ನು ಈಗ ಇವರು ವಾಪಸ್ಸು ಪಡೆದಿದ್ದಾರೆ. ಈಗ ಏನೆಂದರೆ ಕುಡಿಯುವ ನೀರಿನ ಬಾವಿಗಳಿರುವ ಪಕ್ಕದಲ್ಲಿ 5-10 ಅಡಿಯಲ್ಲಿ ಯಾವುದಾದರೂ ಕೊಳವೆ ಬಾವಿಗಳನ್ನು ಹಾಕಿದರೆ ವಿದ್ಯುತ್ ನಿರ್ಬಂಧವಿಲ್ಲದೆ ಅವರಿಗೆ ವಿದ್ಯುತ್ ಕೊಡಬಹುದೆಂದು ಆಗಿದೆ. ಆದುದರಿಂದ ಇವತ್ತು ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳು ಬತ್ತಿ ಹೋಗಿ ನೀರು ಇಲ್ಲದಿರುವಂಥಾದ್ದು ಆಗಿದೆ. ಆ ಕಾರಣದಿಂದ ಈಗ ಏನು ಸರ್ಕ್ಯುಲರ್ ಮಾಡಿಫೈ ಆಗಿದೆ, ಅದನ್ನು ಕ್ಯಾನ್ಸಲ್ ಮಾಡಿ ಮೊದಲು ಏನು ಸರ್ಕ್ಯುಲರ್ ಇತ್ತು ಕುಡಿಯುವ ಕೊಳವೆ ಬಾವಿಗಳ ಸುತ್ತಲೂ 820 ವ್ಯಾಸಕ್ಕೆ ಯಾವ ಕೊಳವೆ ಬಾವಿಗಳಿಗೂ ವಿದ್ಯುತ್ ಸಂಪರ್ಕ ಕೊಡಬಾರದೆಂದು ಏನಿತ್ತು, ಅದನ್ನು ಇಂಪ್ಲಿಮೆಂಟ್ ಮಾಡಬೇಕೆನ್ನುವಂಥಾದ್ದು ನನ್ನ ಮನವಿಯಾಗಿದೆ. ಇನ್ನು ಡೀ-ಸಿಲ್ಟಿಂಗ್ ಬಗ್ಗೆ ನಾವು ಹೇಳಿದ್ದೇವೆ, ನಾನು ಇದನ್ನು ಪದೇ ಪದೇ ಕೇಳಿದ್ದೇನೆ. ಇಲ್ಲಿಯವರೆಗೂ ಒಂದು ಪೈಸೆಯೂ ಕೂಡ ಬಿಡುಗಡೆಯಾಗಿಲ್ಲ. ಇನ್ನು ಕುಡಿಯುವ ನೀರು ನಮ್ಮ ಜಿಲ್ಲೆಯ ಮೂರು ಪಟ್ಟಣಗಳಿಗೆ ಕೆರೆಗಳಿಂದ ಸರಬರಾಜು ಆಗುತ್ತಿದೆ. ಅವು ಚಿಂತಾಮಣಿ, ಕೋಲಾರ, ಕೆ.ಜಿ.ಎಫ್, ಇಲ್ಲಿ ಇವತ್ತಿನ ದಿವಸ ಎರಡು ಕೆರೆಗಳು ಬತ್ತಿ ಹೋಗಿವೆ. ಅದರಲ್ಲಿ ಹೂಳು ತೆಗೆಯುವಂಥಾದ್ದಕ್ಕೆ ಒಂದು ಕೋಟಿ ರೂಪಾಯಿಗಳು ಬೇಕೆಂದು ಮುನಿಸಿಪಾಲಿಟಿಯವರು ಕೇಳಿದ್ದಾರೆ. ಆದುದರಿಂದ ದಯಮಾಡಿ ಈ ಹಣವನ್ನು ಬಿಡುಗಡೆ ಮಾಡಿ ಎಂದು ಮೂರ್‍ನಾಲ್ಕು ಸಾರಿ ಇಲ್ಲಿ ನಾವು ಪ್ರಸ್ತಾಪ ಮಾಡಿದ್ದೇವೆ. ಇದನ್ನು ಮಾನ್ಯ ಮುಖ್ಯಮಂತ್ರಿಯವರಿಗೂ ಹೇಳಿದ್ದೇನೆ. ಈ ಹಣವನ್ನು ತಾವು ಬಿಡುಗಡೆ ಮಾಡಬೇಕಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಪೆಂಡಿಂಗ್ ಬಿಲ್‌ಗಳು ಮತ್ತು ಆನ್-ಗೋಯಿಂಗ್ ವರ್ಕ್ಸ್ ಇದೆ ಇದರ ಬಗ್ಗೆ ನಾನು ನಿನ್ನೆ ಕೂಡ ಹೇಳಿದ್ದೇನೆ ಇದರ ವಿವರಗಳ ಪತ್ರ ಇಲ್ಲಿದೆ, ಇದಕ್ಕೆ ತಾವು ಹನ್ನೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗುತ್ತದೆ. ದಯಮಾಡಿ ಇವತ್ತು ಇದನ್ನು ಬಿಡುಗಡೆ ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ. ನಾನು ನಿನ್ನೆ ಮಾತನಾಡುವಂತಹ ಸಂದರ್ಭದಲ್ಲಿ ಚಿಕ್ಕಬಳ್ಳಾಪುರ ಸಬ್ ಡಿವಿಜನ್‌ಗೆ ಸಂಬಂಧಪಟ್ಟ ಹಾಗೆ ಉತ್ತರ ಪಿನಾಕಾನಿ ನದಿ ಎಂದು ಇದೆ.

ಅಲ್ಲಿ ನಮ್ಮ ಸರ್ಕಾರ ಇದ್ದಾಗ ಸುಮಾರು ಏಳು ಕಡೆ ಸಬ್ ಸರ್ಫೇಸ್ ಡೈಕ್ಸ್ ಅನ್ನು ಹಾಕಿಸಿದೆವು. ಮಳೆಗಾಲದಲ್ಲಿ ನದಿ ಹರಿಯುತ್ತದೆ. ಆರು ತಿಂಗಳ ಕಾಲ ನೀರು ಭೂಮಿಯ ಒಳಗಡೆ ಇರುತ್ತದೆ. ಅದಕ್ಕೆ ಸಬ್ ಸರ್ಫೇಸ್ ಡೈಕ್ಸ್ ಹಾಕಿಸಿದರೆ ನೀರು

ರೀಚಾರ್ಜ್ ಆಗತಕ್ಕಂಥಾದ್ದು ಆಗುತ್ತದೆ. ಅದನ್ನು ನಬಾರ್ಡ್‌ಗೆ ಕಳುಹಿಸಬೇಕು ಎನ್ನುವ ಪ್ರಯತ್ನ ಕೂಡ ನಡೆದಿತ್ತು. ಇವತ್ತು ತಾವು ಆ ಒಂದು ಪ್ರಸ್ತಾಪಕ್ಕೆ ಚಾಲನೆಯನ್ನು ನೀಡಿ ಸಬ್ ಸರ್ಫೇಸ್ ಡೈಕ್ಸ್ ಅನ್ನು ಹಾಕಲು ದಯವಿಟ್ಟು ಪ್ರಯತ್ನ ಪಡಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು, ತಾವು ಸರ್ಫೇಸ್ ವಾಟರ್ ಬಗ್ಗೆ ಹೇಳಿದಿರಿ. 800 ಅಡಿ ಆಳ ಹೋಗಿರತಕ್ಕಂಥ ಕೊಳವಿ ಬಾವಿಗಳಲ್ಲೂ ಇವತ್ತಿನ ದಿವಸ ನೀರು ಇಲ್ಲ ಎಂದು ಹೇಳಿದ್ದೀರಿ. ಅಂಥ ಕಡೆ ಸರ್ಫೇಸ್ ವಾಟರ್ ಅನ್ನು ತೆಗೆಯಬೇಕು ಎನ್ನುವ ಸಲಹೆಯನ್ನು ತಾವು ಕೊಟ್ಟಿದ್ದೀರಿ. ಆ ದೃಷ್ಟಿಯಿಂದ 135 ಹಳ್ಳಿಗಳು ಮತ್ತು 6-7 ಪಟ್ಟಣಗಳಿಗೆ ಅನ್ವಯವಾಗುವಂಥ ಸುಮಾರು 600 ಕೋಟಿ ರೂಪಾಯಿಗಳ ಒಂದು ಎಸ್ಟಿಮೇಟನ್ನು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನವರು ತಯಾರು ನಡೆಸಿದ್ದಾರೆ. ಅದಕ್ಕೆ ಇವತ್ತಿನ ದಿವಸ ತಾವು ಮಂಜೂರಾತಿಯನ್ನು ಕೊಡಬೇಕು. ಹುಡ್ಕೋದವರೂ ಕೂಡ ಹಣ ಕೊಡುವುದಕ್ಕೆ ತಾತ್ವಿಕವಾಗಿ ಒಪ್ಪಿದ್ದಾರೆ. ಹುಡ್ಕೋಗೆ ಈ ಯೋಜನೆಯನ್ನು ಕಳುಹಿಸಿ, ಮಂಜೂರಾತಿ ಮಾಡುವಂಥಾದ್ದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಅಧ್ಯಕ್ಷರ ಮೂಲಕ ಒತ್ತಾಯ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಇಲ್ಲಿ ಬೇಡ. ಶನಿವಾರ, ಭಾನುವಾರ ಮತ್ತು ಸೋಮವಾರ ಮೂರೂ ದಿವಸ ರಜೆ ಇದೆ. ಆಯಾಯಾ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಮೀಟಿಂಗ್ ಕರೆಯುತ್ತಾರೆ. ಅಲ್ಲಿ ಹೇಳಿ, ನಿಮಗೆ ಏನೇನು ಸಲ್ಯೂಷನ್ ಬೇಕೋ ಪಡೆದುಕೊಳ್ಳಿ ಅಲ್ಲೇ ಸಾಲ್ವ್ ಮಾಡಿಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್: ಅಧ್ಯಕ್ಷರೇ, ನಗರಾಭಿವೃದ್ಧಿ ಸಚಿವರು ಉತ್ತರ ಕೊಡಲಿಲ್ಲ.

ಅಧ್ಯಕ್ಷರು: ಆಯಿತು, ತಾವು ಕುಳಿತುಕೊಳ್ಳಿ. ಭೈರೇಗೌಡರ ಪ್ರಶ್ನೆಗೆ ತಾವು ಏನಾದರೂ ಉತ್ತರ ಹೇಳುತ್ತೀರಾ? ಒಂದೊಂದು ತಾಲ್ಲೂಕು, ಒಂದೊಂದು ಜಿಲ್ಲೆಯದನ್ನು ಇಲ್ಲಿ ಡಿಸ್ಕಸ್ ಮಾಡಲು ಆಗುವುದಿಲ್ಲ. ಆಯಾ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಮೀಟಿಂಗ್ ಕರೆಯುತ್ತಾರೆ. ಅಲ್ಲಿ ಹೇಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಭೈರೇಗೌಡರು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಕೊಡಬೇಕು. ಎನ್ನುವುದು ಒಂದು. ಉತ್ತರ ಕರ್ನಾಟಕದ ಶಾಸಕರು ಕೇಳುತ್ತಿರತಕ್ಕಂಥಾದ್ದು ಒಂದೇ. ಅದೇನೆಂದರೆ, ರಾಜೀವ್ ಗಾಂಧಿ ಟೆಕ್ನಾಲಾಜಿಕಲ್ ಮಿಷನ್‌ನಲ್ಲಿ ಯಾವಯಾವ ಸ್ಕೀಂಗಳನ್ನು ಸರ್ಕಾರ ತೆಗೆದುಕೊಂಡು ಹಣ ಬಿಡುಗಡೆ ಮಾಡಿದೆ, ಜಿಲ್ಲಾ ಪರಿಷತ್ತು ಆ ಕೆಲಸಗಳನ್ನು ಪ್ರಾರಂಭ ಮಾಡಿಲ್ಲ. ಕೆಲಸ ಪ್ರಾರಂಭ

ಮಾಡಲು ಇರುವ ತೊಂದರೆ ಏನು ಎಂದು ಕೇಳುತ್ತಿದ್ದಾರೆ.

ಅಧ್ಯಕ್ಷರು: ಪ್ರತಿ ತಾಲ್ಲೂಕಿನ ಬಗ್ಗೆ ಇಲ್ಲಿ ಬೇಡ. ನಿಮ್ಮ ನಿಮ್ಮ ಜಿಲ್ಲೆಯಲ್ಲಿ ಮೀಟಿಂಗ್ ಕರೆಯುತ್ತಾರೆ, ಅಲ್ಲಿ ಹೇಳಿ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ಜಿಲ್ಲಾವಾರು ಮೀಟಿಂಗ್ ಕರೆಯಲಿ, ಅಲ್ಲಿ ಅವರು ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆ. ಆದರೆ, ಈ ಸದನದ ದೃಷ್ಟಿಗೆ ಕೆಲವೊಂದು ವಿಷಯಗಳನ್ನು ತರಬೇಕಾಗುತ್ತದೆ. 22 ಗ್ರಾಮಗಳ ಬಗ್ಗೆ ಹೇಳಿದರು. ಆದರೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳಲಿಲ್ಲ. ಜನರಲ್ ಆಗಿ ಉತ್ತರ ಕೊಡುತ್ತಿದ್ದಾರೆ. ಸಾಕಷ್ಟು ಪಟ್ಟಣಗಳ ಬಗ್ಗೆ ಕೇಳಿದ್ದೇವೆ. ಅದಕ್ಕೆ ನಗರಾಭಿವೃದ್ಧಿ ಸಚಿವರು ಉತ್ತರ ಕೊಡಬೇಕು. ಅದಕ್ಕೆ ಅವರು ಇನ್ನೂ ಉತ್ತರ ಕೊಡಲಿಲ್ಲ.

ಅಧ್ಯಕ್ಷರು: ಕೊಡುತ್ತಾರೆ. ನಾನು ಅವರನ್ನು ಕೇಳುತ್ತೇನೆ, ಚಿಮ್ಮನಕಟ್ಟಿಯವರೇ ತಾವು ಉತ್ತರ ಕೊಡುವುದಕ್ಕೆ ತಮಗೆ ಎಷ್ಟು ಸಮಯ ಬೇಕು. ಉತ್ತರ ಕೊಡಲು ಅವರು ತಯಾರಾಗುತ್ತಿದ್ದಾರೆ.

ಶ್ರೀ ಎಂ.ವೈ.ಘೋರ್ಪಡೆ: ತಾವು ಸೂಚನೆ ಮಾಡಿದ ಹಾಗೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಮೀಟಿಂಗ್ ಕರೆದು ಆಯಾ ಜಿಲ್ಲೆಗಳಲ್ಲಿ ಏನು ತೊಂದರೆ ಇದೆ, ಅದನ್ನು ನಿವಾರಣೆ ಮಾಡುತ್ತಾರೆ. ನಾವು ಪ್ರತಿಯೊಂದಕ್ಕೂ ಇಲ್ಲಿ ಉತ್ತರ ಕೊಡುವುದು ಬಹಳ ಕಷ್ಟವಾಗುತ್ತದೆ.

(ಗೊಂದಲ)

ಅಧ್ಯಕ್ಷರು: ನಾನು ಹೇಳುವುದನ್ನು ಕೇಳಿ. ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಆಯಾ ಜಿಲ್ಲೆಯ ಶಾಸಕರನ್ನು ಕರೆದು ನಾವು ಸಾಲ್ವ್ ಮಾಡುತ್ತೇವೆ ಎಂದು ಹೇಳಿರುವಾಗ ಪುನಃ ಅದನ್ನು ಏಕೆ ಇಲ್ಲಿ ಎತ್ತುತ್ತೀರಿ? It is unfair on the part of the Members. I am very sorry, when the minister agreed. ಮಂತ್ರಿಗಳು ಒಪ್ಪಿಕೊಂಡಿರುವಾಗ ಕೂಡ ನೀವು ಅದನ್ನು ಎತ್ತಬೇಕು ಎಂದರೆ ಅದರಲ್ಲಿ ಅರ್ಥವೇನಿದೆ. ಇವತ್ತು ಅಲ್ಲದಿದ್ದರೆ ನಾಳೆ ಕರೆಯುತ್ತಾರೆ. ಯಾವಾಗ ಎನ್ನುವುದನ್ನೂ ಉತ್ತರ ಕೊಡುವಾಗ ಹೇಳುತ್ತಾರೆ. ಚಿಮ್ಮನಕಟ್ಟಿಯವರೇ ನಿಮಗೆ ಉತ್ತರ ಕೊಡುವುದಕ್ಕೆ ಎಷ್ಟು ಸಮಯ ಬೇಕು ಹೇಳಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಅರ್ಧ ಗಂಟೆ.

ಅಧ್ಯಕ್ಷರು: ಅರ್ಧ ಗಂಟೆಯೇ, ಹಾಗಿದ್ದರೆ ಈಗ ಸದನವನ್ನು ಮುಂದೂಡೋಣ.

ಪುನಃ ಮೂರೂಕಾಲು ಗಂಟೆಗೆ ಸೇರುತ್ತದೆ.

(ಸದನವು 2.15ಕ್ಕೆ ಮುಕ್ತಾಯವಾಯಿತು, ಪುನಃ 3.15ಕ್ಕೆ ಸೇರಲು ತೀರ್ಮಾನಿಸಿತು)

(ಸದನವು 3 ಗಂಟೆ 30 ನಿಮಿಷಕ್ಕೆ ಪ್ರಾರಂಭವಾದಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು: ಮಾನ್ಯ ಭೈರೇಗೌಡರೆ, ನೀವು ಯಾವಾಗಲೂ ಮುಂದಿನ ಸಾಲಿನಲ್ಲಿ ಮಂತ್ರಿಗಳು ಇರುವುದಿಲ್ಲವೆಂದು ಪ್ರಸ್ತಾಪ ಮಾಡುತ್ತೀರಿ. ಈಗ ನಿಮ್ಮ ವಿರೋಧಪಕ್ಷದ ನಾಯಕರೆ ಇಲ್ಲವಲ್ಲ ಇದಕ್ಕೆ ಏನು ಹೇಳುತ್ತೀರಿ? ಏಕೆಂದರೆ ಮುಖ್ಯವಾದ ವಿಚಾರದ ಬಗ್ಗೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಅವರು ಮೊದಲು ಇರಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಾದ ಚಿಮ್ಮನಕಟ್ಟಿಯವರು ನೀರಿನ ಸಮಸ್ಯೆ ಬಗ್ಗೆ ಉತ್ತರ ಕೊಟ್ಟಮೇಲೆ ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ಉತ್ತರ ಕೊಡಬೇಕು. ಏಕೆಂದರೆ ಸ್ಕೇರ್‌ಸಿಟಿಗೆ ಸಂಬಂಧಪಟ್ಟ ಹಾಗೆ ಕುಡಿಯುವ ನೀರಿಗೋಸ್ಕರ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂಬುದನ್ನು ಮತ್ತು ಯಾವ್ಯಾವ ಜಿಲ್ಲೆಗೆ ಕೊಟ್ಟಿದ್ದಾರೆಂದು ಮತ್ತು ಯಾವರೀತಿಯಲ್ಲಿ ಖರ್ಚು ಆಗಿದೆ ಎಂಬುದನ್ನು ಮತ್ತು ಡಿ.ಸಿ.ಯವರು ಖರ್ಚು ಮಾಡಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಮಾನ್ಯ ಕಂದಾಯ ಮಂತ್ರಿಗಳು ತಿಳಿಸಬೇಕು. ಮಾನ್ಯ ಕಂದಾಯ ಮಂತ್ರಿಗಳು ನಿದ್ದೆ ಮಾಡುತ್ತಿರಬಹುದು, ಆದ್ದರಿಂದ ಅವರನ್ನು ಆದಷ್ಟು ಬೇಗ ಈ ಸಭೆಗೆ ಕರೆಸಬೇಕು.

ಅಧ್ಯಕ್ಷರು: ಮಾನ್ಯ ಚಿಮ್ಮನಕಟ್ಟಿಯವರೆ ಈಗಾಗಲೇ ಮಾನ್ಯ ಘೋರ್ಪಡೆಯವರು ಆಯಾಯ ಜಿಲ್ಲಾಮಂತ್ರಿಗಳ ಸಭೆಯಲ್ಲಿ ಆಯಾಯ ಶಾಸಕರನ್ನು ಕರೆಸಿ ಈ ವಿಷಯದ ಬಗ್ಗೆ ಮಾತನಾಡುತ್ತೇನೆಂದು ಹೇಳಿದ್ದಾರೆ. ಆದ್ದರಿಂದ ತಾವು ಜನರಲ್ ಪ್ರಿನ್ಸಿಪಾಲ್ ಪಾಲಿಸಿ ಬಗ್ಗೆ ಅಂದರೆ ಪಟ್ಟಣಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಬಗ್ಗೆ ಮಾತ್ರ ಉತ್ತರ ಕೊಡಿ. ಅದೇರೀತಿ ಸದಸ್ಯರೂ ಕೂಡ ಪ್ರಶ್ನೆ ಕೇಳುವಾಗ ಜನರಲ್ ಆಗಿ ಅಂದರೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಕುಡಿಯುವ ನೀರಿಗೋಸ್ಕರ ಹಣವನ್ನು ಬಿಡುಗಡೆ ಮಾಡಿರುವ ಬಗ್ಗೆ ಸಮಸ್ಯೆಯ ಬಗ್ಗೆ ತಾವು ಪ್ರಶ್ನೆಯನ್ನು ಕೇಳಬೇಕೇ ಹೊರತು ಅವರವರ ಕ್ಷೇತ್ರದ ಬಗ್ಗೆ ದಯವಿಟ್ಟು ಕೇಳಬೇಡಿ. ನಿಮ್ಮ ಜಿಲ್ಲಾಮಟ್ಟದ ಸಭೆಯಲ್ಲಿ ನಿಮ್ಮ ಸಮಸ್ಯೆಗಳನ್ನು ಮಾತನಾಡಬಹುದು. ಆದ್ದರಿಂದ ಇಲ್ಲಿ ಜನರಲ್ ಪ್ರಿನ್ಸಿಪಲ್ ಮೇಲೆ ಮಾತ್ರ ಕ್ಲಾರಿಫಿಕೇಶನ್ ಕೇಳಿ. ಮಾನ್ಯ ಮಂತ್ರಿಗಳು ಸಹ ಇಂಡಿವಿಜ್ಯುಯಲ್ ವಿಷಯಗಳ ಬಗ್ಗೆ ಉತ್ತರ ಹೇಳಬೇಡಿ.

ಶ್ರೀ ಎಸ್.ಎ.ರವೀಂದ್ರನಾಥ್: ನಮ್ಮ ಜಿಲ್ಲೆಯಲ್ಲಿ ನಮ್ಮನ್ನು ಯಾರು ಜಿಲ್ಲಾಮಟ್ಟದ

ಸಭೆಗೆ ಕರೆಯುವುದಿಲ್ಲ. ಅವರ ಸ್ವಂತ ಮನೆಗಳಲ್ಲಿಯೇ ಸಭೆಗಳನ್ನು ಮಾಡುತ್ತಿದ್ದಾರೆ. ಅಲ್ಲಿಗೆ ನಾವು ಹೋಗುವುದಕ್ಕೆ ಆಗುತ್ತದೆಯೆ?

ಅಧ್ಯಕ್ಷರು: ಜಿಲ್ಲಾಪರಿಷತ್ ಕಛೇರಿಯಲ್ಲಿ ಸಭೆಗಳನ್ನು ಮಾಡುತ್ತಾರೆ. ಆದ್ದರಿಂದ ಮನೆಗಳಲ್ಲಿ ಯಾರು ಮಾಡುವುದಿಲ್ಲ.

ಶ್ರೀ ಕಾಗೋಡುತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ , ಟೆಕ್ನಾಲಜಿ ಮೆಷಿನ್ ಸಭೆಗೆ ಜಿಲ್ಲಾ ಮಂತ್ರಿಗಳು ಅಧ್ಯಕ್ಷರಾಗಿದ್ದು, ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಉಪಾಧ್ಯಕ್ಷರಾಗಿರುತ್ತಾರೆ. ಇದಕ್ಕೆ ತಾವು ಮತ್ತು ಎಂ.ಪಿ.ಗಳು ಸಹ ಸದಸ್ಯರಾಗಿರುತ್ತಾರೆ. ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ ನಿಮ್ಮೆಲ್ಲರನ್ನು ಆ ಸಭೆಗೆ ಕರೆಸಿ ಚರ್ಚೆ ಮಾಡಿ ಅನುಕೂಲ ಮಾಡಿಕೊಡುತ್ತಾರೆ.

ಶ್ರೀ ಎಸ್.ಎ.ರವೀಂದ್ರನಾಥ್: ಅಧಿಕಾರಿಗಳನ್ನು ಕರೆದುಕೊಂಡು ಅವರವರ ಮನೆಗಳಲ್ಲಿ ಜಿಲ್ಲಾ ಮಂತ್ರಿಗಳು ಸಭೆಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ಅಧ್ಯಕ್ಷರು: ಇದರ ಬಗ್ಗೆ ನನಗೆ ಒಂದು ನೋಟೀಸ್ ಕೊಡಿ, ನಾನು ಅಡ್ಮಿಟ್ ಮಾಡಿಕೊಳ್ಳುತ್ತೇನೆ.

ಶ್ರೀ ಎ.ರಾಮದಾಸ್: ಇಡೀ ಜಿಲ್ಲೆಗೆ ಸಂಬಂಧಪಟ್ಟಂಥ ವಿಚಾರವನ್ನು ನಮ್ಮ ನಾಯಕರು ಕೇಳುತ್ತಾರೆ. ಆದ್ದರಿಂದ ಶಾಸಕರು ಕೆಲವು ಸಮಸ್ಯೆಗಳನ್ನು ಹೇಳುವುದಕ್ಕೆ ತಾವು ದಯವಿಟ್ಟು ಒಂದು ನಿಮಿಷಗಳ ಕಾಲ ಅವಕಾಶ ಮಾಡಿಕೊಡಬೇಕು. ಇದರಿಂದ ನಮಗೆ ಉಪಯೋಗವಾಗುತ್ತದೆ.

ಅಧ್ಯಕ್ಷರು: ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನೆನ್ನೆ ದಿವಸ ಮತ್ತು ಇವತ್ತು ಚರ್ಚೆಯಾಗಿದೆ. ಮತ್ತೆ ಇದನ್ನೇ ಮುಂದುವರಿಸಿಕೊಂಡು ಹೋದರೆ ಸರ್ಕಾರಿ ವ್ಯವಹಾರವನ್ನು ಯಾವಾಗ ಮಾಡುವುದು? ಮತ್ತು ಬೇಡಿಕೆಗಳ ಮೇಲೆ ಯಾವಾಗ ಚರ್ಚೆ ಮಾಡುತ್ತೀರಿ? ಆದ್ದರಿಂದ ದಯವಿಟ್ಟು ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಶಿವಾನಂದ ಎಸ್ ಪಾಟೀಲ್: ಮಾನ್ಯ ಅಧ್ಯಕ್ಷರೆ, ನೆನ್ನೆ ದಿವಸ ತಾವು ಇರಲಿಲ್ಲ.

ಅಧ್ಯಕ್ಷರು: ನಾನು ಒಳಗಿನ ರೂಮ್‌ನಲ್ಲಿ ಟಿ.ವಿ. ಹಾಕಿಕೊಂಡು ಇಲ್ಲಿ ಕಾರ್ಯಕಲಾಪಗಳನ್ನು ವೀಕ್ಷಣೆ ಮಾಡುತ್ತಿದ್ದೆ. ನಾನೇನು ಹೊರಗಡೆ ಹೋಗಿರಲಿಲ್ಲ.

ಶ್ರೀ ಶಿವಾನಂದ ಎಸ್ ಪಾಟೀಲ್: ನಾನು ಆ ರೀತಿ ಹೇಳಲಿಲ್ಲ. ನೆನ್ನೆದಿವಸ ತಾವು ಇಲ್ಲದೇ ಇರುವಂಥ ಸಮಯದಲ್ಲಿ ಮಾನ್ಯ ಮಂತ್ರಿಗಳು ಏನು ಹೇಳಿದರು ಎಂದರೆ, ಪ್ರತಿಯೊಬ್ಬರು ತಮ್ಮ ಸಮಸ್ಯೆಗಳನ್ನು ಹೇಳಿ, ನಾನು ಕೇಳಿದ ನಂತರ ಉತ್ತರ ಕೊಡುತ್ತೇನೆಂದು ಹೇಳಿದರು. ಈ ಸಂದರ್ಭದಲ್ಲಿ ವಿರೋಧಪಕ್ಷದ ಕಡೆ ಸುಮಾರು 16

ಜನ ಶಾಸಕರು ಮಾತನಾಡಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಜಿಲ್ಲಾ ಮಟ್ಟಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡಲಿ, ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡುವುದು ಬೇಡ.

ಅಧ್ಯಕ್ಷರು: ಜಿಲಾಲ ಮಟ್ಟದಲ್ಲಿ ಏನಾದರು ವಿಷಯಗಳಿದ್ದರೆ ಹೇಳಿ. ಆದರೆ ಇಂಡಿವಿಜ್ಯುಯಲ್ ಕ್ಷೇತ್ರದ ಬಗ್ಗೆ ಬೇಡ.

ಶ್ರೀ ಶಿವಾನಂದ ಎಸ್ ಪಾಟೀಲ್: ಇಂಡಿವಿಜ್ಯುಯಲ್ ಕ್ಷೇತ್ರದ ಬಗ್ಗೆ ಯಾರು ಕೇಳುತ್ತಿಲ್ಲ. ಆರ್.ಡಿ.ಪಿ. ಮಂತ್ರಿಗಳು ಜಿಲ್ಲಾ ಮಟ್ಟದ ಸಮಸ್ಯೆ ಬಗ್ಗೆ ಉತ್ತರ ಕೊಟ್ಟರೆ ಸಾಕು.

ಅಧ್ಯಕ್ಷರು: ಮಾನ್ಯ ಗೃಹಮಂತ್ರಿಗಳಲ್ಲಿ ಒಂದು ವಿನಂತಿ. ಏನೆಂದರೆ, ಕುಡಿಯುವ ನೀರಿನ ಸ್ಕೇರ್‌ಸಿಟಿಗೆ ಸಂಬಂಧಪಟ್ಟಂತೆ ಕಂದಾಯ ಇಲಾಖೆಯವರು ಕೂಡ ಖರ್ಚು ಮಾಡಿರುತ್ತಾರೆ. ಆದ್ದರಿಂದ ಎಷ್ಟು ಹಣ ಖರ್ಚು ಮಾಡಿದ್ದಾರೆ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳಿಂದ ಅಂಕಿ-ಅಂಶಗಳನ್ನು ತರಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಫಿಗರ್ಸ್ ರೆಡಿ ಇದೆ, ಬೇಗ ತರಿಸುತ್ತೇನೆ.

ಶ್ರೀ ಸಿ.ಭೈರೇಗೌಡ: ತಾವು ಜಿಲ್ಲಾ ಮಟ್ಟದಲ್ಲಿ ಚರ್ಚೆಯಾಗುತ್ತದೆಂದು ಸಲಹೆ ಕೊಟ್ಟಿದ್ದೀರಿ, ಹಾಗೆಯೆ ಮಾನ್ಯ ಕಾಗೋಡುತಿಮ್ಮಪ್ಪನವರು ಟೆಕ್ನಾಲಜಿ ಮೆಷಿನ್‌ನಲ್ಲಿ ಚರ್ಚೆಯಾಗಲಿ ಎನ್ನತಕ್ಕಂಥ ಮಾತನ್ನು ಸಹ ಹೇಳಿದ್ದಾರೆ. ಇಲ್ಲಿ ಮುಖ್ಯವಾಗಿರತಕ್ಕಂಥ ಪ್ರಶ್ನೆ ಏನೆಂದರೆ ಹಣ ಬಿಡುಗಡೆಯಾಗುವ ಬಗ್ಗೆ. ಟೆಕ್ನಾಲಜಿ ಮೆಷಿನ್‌ನಲ್ಲಾಗಲಿ ಅಥವಾ ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಲಿ ಹಣ ಬಿಡುಗಡೆ ಮಾಡತಕ್ಕಂಥ ಅಧಿಕಾರ ಇದೆಯೆ? ಇವತ್ತಿನ ದಿವಸ ನಮ್ಮ ಜಿಲ್ಲೆಗೆ ಸುಮಾರು 11 ಕೋಟಿ ರೂಪಾಯಿಗಳಷ್ಟು ಬಿಲ್ ಪೇಮೆಂಟ್ ಆಗಬೇಕಾಗಿದೆ ಮತ್ತು ಕೆಲಸ ಆಗಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ: ಈಗ ತತ್‌ಕ್ಷಣದ ಕೆಲಸಕ್ಕೆ ಹಣ ಬಿಡುಗಡೆ ಮಾಡದೇ ಇದ್ದರೆ ನೀವು ಪ್ರಸ್ತಾಪ ಮಾಡಿ. ಉಳಿದ ವಿಷಯಗಳನ್ನು ಟೆಕ್ನಾಲಜಿ ಮೆಷಿನ್ ಸಭೆಯಲ್ಲಿ ಚರ್ಚೆ ಮಾಡಬಹುದು.

ಅಧ್ಯಕ್ಷರು: ಮಾನ್ಯ ಭೈರೇಗೌಡರೆ, ಈ ವಿಷಯವನ್ನು ಇವತ್ತು ಬೆಳಿಗ್ಗೆ ಪ್ರಸ್ತಾಪ ಮಾಡಿದ್ದೀರಿ. ಈಗ ಪುನಃ ಏಕೆ ರಿಪೀಟ್ ಮಾಡುತ್ತಿದ್ದೀರಿ?

ಶ್ರೀ ಸಿ.ಭೈರೇಗೌಡ: ಇವತ್ತಿನ ಪರಿಸ್ಥಿತಿ ಎಲ್ಲಿಗೆ ಹೋಗಿದೆ ಎಂದರೆ, ನಮ್ಮ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಿಗೆ ಬೆಂಗಳೂರಿನಿಂದ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಅಧ್ಯಕ್ಷರು: ಮಾನ್ಯ ಭೈರೇಗೌಡರು ಯಾವುದೋ ಒಂದು ವಿಷಯವನ್ನು ಹೇಳಬೇಕಾದಾಗ ಯಾವುದೋ ಒಂದು ಉಪಾಯದಲ್ಲಿ ಹೇಳಿಬಿಡುತ್ತಾರೆ.

(ಗೊಂದಲ)

ಶ್ರೀ ವಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, ಈಗಾಗಲೇ 4 ಕೋಟಿ ರೂಪಾಯಿಗಳನ್ನು ಅಭಾವ ಪರಿಹಾರ ನಿಧಿಯಿಂದ ಸರ್ಕಾರ ಬಿಡುಗಡೆ ಮಾಡಿದೆ. ಮಾನ್ಯ ಭೈರೇಗೌಡರನ್ನು ಸಭೆಗೆ ಕರೆದಿದ್ದೆ. ಆದರೆ ಕಾರಣಾಂತರಗಳಿಂದ ಅವರು ಹಾಜರಾಗಿರಲಿಲ್ಲ. ಈ ಸಭೆಗೆ ಜಿಲ್ಲೆಯ ಶಾಸಕರು ಮತ್ತು ಮಾನ್ಯ ಶ್ರೀನಿವಾಸಗೌಡರು ಬಂದಿದ್ದರು. ಸಭೆಯನ್ನು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆಸಿ, ಇಲ್ಲಿ ಚರ್ಚೆ ಮಾಡಿ ಎಲ್ಲೆಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿ ಇದೆ, ಅಂತಹ ಕಡೆ ಆವಶ್ಯಕತೆಯ ಆಧಾರದ ಮೇಲೆ ಹಣ ಬಿಡುಗಡೆ ಮಾಡಬೇಕೆಂದು ನಾವು ಚರ್ಚೆ ಮಾಡಿದ್ದೇವೆ. ಪ್ರತಿಯೊಂದು ತಾಲ್ಲೂಕಿಗೂ ಸುಮಾರು 25 ರಿಂದ 30 ಲಕ್ಷ ರೂಪಾಯಿಗಳಷ್ಟು ಹಣ ಈಗಾಗಲೇ ಬಿಡುಗಡೆಯಾಗಿದೆ. ಇದರ ಬಗ್ಗೆ ಟಾಸ್ಕ್ ಫೋರ್ಸ್ ಕಮಿಟಿಗೂ ಸೂಚನೆ ಸಹ ಕೊಟ್ಟಿದ್ದೇವೆ. ಈಗಾಗಲೇ ಟಾಸ್ಕ್‌ಫೋರ್ಸ್ ಕಮಿಟಿಯವರು ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದಾರೆ. ಅದರ ಪ್ರಕಾರ ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಎಲ್ಲಿ ತೀವ್ರವಾಗಿ ನೀರಿನ ಅಭಾವ ಇದೆ ಅಂಥ ಕಡೆ ತತ್‌ಕ್ಷಣ ನೀರು ಪೂರೈಸತಕ್ಕಂಥ ಕೆಲಸವನ್ನು ಮಾಡಲಾಗಿದೆ. ಒಂದು ವೇಳೆ ಟಾಸ್ಕ್ ಫೋರ್ಸ್‌ನವರು ಪ್ರಸ್ತಾವನೆಯನ್ನು ಕೊಡದೇ ಇದ್ದರೂ ಕೂಡ ಜಿಲ್ಲಾ ಪಂಚಾಯತಿಯಲ್ಲಿ ಇದಕ್ಕೆ ಸಂಬಂಧಪಟ್ಟ ಎ.ಇ. ಅಥವಾ ಎ.ಇ.ಇ.ರವರ ಗಮನಕ್ಕೆ ತಂದಾಗ ತತ್‌ಕ್ಷಣ ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸಿ ನಂತರ ಬಿಲ್‌ನ್ನು ಕ್ಲೈಮ್ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಸಿ.ಭೈರೇಗೌಡ(ವೇಮಗಲ್): ಮಾನ್ಯ ಅಧ್ಯಕ್ಷರೆ, ತಾವು ವಿವರಕ್ಕೆ ಹೋಗಬೇಡಿ ಎಂದು ಹೇಳಿದ್ದೀರಿ, ಅದಕ್ಕಾಗಿ ನಾನು ವಿವರಕ್ಕೆ ಹೋಗುತ್ತಿಲ್ಲ. ನನ್ನ ಹತ್ತಿರ ಇವತ್ತಿನ ದಿವಸ ವಿವರ ಇದೆ. ಇಡೀ ಜಿಲ್ಲೆಯಲ್ಲಿ ಎಷ್ಟು ಯೋಜನೆಗಳು ಇವೆ, ಯಾವುದಕ್ಕೆ ಎಷ್ಟೆಷ್ಟು ಹಣ ಬೇಕು ಎನ್ನುವುದಕ್ಕೆ ನನ್ನ ಹತ್ತಿರ ವಿವರ ಇದ್ದರೂ ಅದನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುತ್ತಿಲ್ಲ. ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರವನ್ನು ಕೂಡ ಬರೆದಿದ್ದೇನೆ, ಈಗಾಗಲೇ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೂ ಕೂಡ ಪತ್ರವನ್ನು ಕೊಟ್ಟಿದ್ದೇನೆ. ಸುಮಾರು 11 ಕೋಟಿ ರೂಪಾಯಿಗಳಷ್ಟು ಹಣ ಬಿಡುಗಡೆಯಾಗಬೇಕಾಗಿದೆ. ಸ್ವಾಮಿ ಅವರು ಹೇಳುತ್ತಿರುವುದು, ಈಗ ತುರ್ತಾಗಿ ಎಲ್ಲಿ ಕೊಳವೆ ಬಾವಿಯನ್ನು ಹಾಕಬೇಕು ಎಲ್ಲಿ ಮಾಡಬೇಕು ಎನ್ನುವುದರ ಬಗ್ಗೆ ಹೇಳುತ್ತಿದ್ದಾರೆ. ಅದರ ಜೊತೆಯಲ್ಲಿಯೇ ನಾವು ಕಾರ್ಯಗತ ಮಾಡತಕ್ಕಂಥ ಯೋಜನೆಗಳಿರುತ್ತವೆ. ಆ ಯೋಜನೆಗಳಿಗೂ ಕೂಡ ಹಣವನ್ನು ಕೊಟ್ಟರೆ ಒಳ್ಳೆಯದಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಈಗ ಕುಡಿಯುವ ನೀರಿನ ಪರಿಸ್ಥಿತಿಯ ಬಗ್ಗೆ ನಾವು ಚರ್ಚೆಯನ್ನು ಮಾಡುತ್ತಿದ್ದೇವೆ.

ಶ್ರೀ ಸಿ.ಭೈರೇಗೌಡ: ಆದ್ದರಿಂದ ಈ ಹಣ ಬಿಡುಗಡೆಯಾಗಬೇಕಾದ ಅವಶ್ಯಕತೆ ಇದೆ. ಯಾರಾದರೂ ಹಣವನ್ನು ಬಿಡುಗಡೆ ಮಾಡಿದರೂ ನಮಗೆ ಏನು?

ಅಧ್ಯಕ್ಷರು: ಅವರು ಎಲ್ಲೆಲ್ಲಿ ಕರೆದು ಏರ್ಪಾಡು ಮಾಡಿದ್ದಾರೆ, ಅಲ್ಲಿ ಕರೆಯಬೇಕಾಗಿಲ್ಲ. ಎಲ್ಲಿ ಸಭೆಯನ್ನು ಕರೆದಿರುವುದಿಲ್ಲ, ಅಲ್ಲಿ ಸಭೆಯನ್ನು ಕರೆಯುತ್ತಾರೆ. ಆಗ ಡಿಸ್‌ಕಸ್ ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಬೈರೇಗೌಡರ ಕೋಲಾರ ಜಿಲ್ಲೆಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಲಾಗಿದೆ. ಸುಮಾರು 3ಕೋಟಿ·50ಲಕ್ಷ ರೂಪಾಯಿಗಳು, ನಿನ್ನೆ ಕೂಡ 50 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿರಬಹುದು, 13ನೇ ತಾರೀಖಿಗೆ ಹಣವನ್ನು ಬಿಡುಗಡೆ ಮಾಡಿರುತ್ತಾರೆ. ಕುಡಿಯುವ ನೀರಿಗಾಗಿ ಇಡೀ ಕರ್ನಾಟಕ ರಾಜ್ಯದಲ್ಲಿ ಹೆಚ್ಚಿನ ಹಣವನ್ನು ಬೇರೆ ಯಾವುದಕ್ಕೂ ಅಲ್ಲ, ಮತ್ತು ಶಾಶ್ವತವಾದ ಕಾರ್ಯಕ್ರಮಕ್ಕೂ ಕೂಡ ಅಲ್ಲ, ತಾತ್ಕಾಲಿಕವಾಗಿ ಇಷ್ಟೊಂದು ಹಣವನ್ನು ಕೊಟ್ಟರೂ ಸಹ ಹಣವನ್ನು ಕೊಟ್ಟಿಲ್ಲವೆಂದರೆ ಹೇಗೆ? ಇದಕ್ಕಿಂತ ಹೆಚ್ಚಿಗೆ ಹಣವನ್ನು ಹಿಂದೆ ಕೊಟ್ಟಿದ್ದಾರೆಂದು ಅವರು ಬೇಕಾದರೆ ಹೇಳಲಿ.

+ಶ್ರೀ ಬಿ.ಬಿ.ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ವಿರೋಧ ಪಕ್ಷದ ಸದಸ್ಯರು ಹಾಗೂ ಎಲ್ಲ ಹಿರಿಯ ಸದಸ್ಯರುಗಳು ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಸದನದಲ್ಲಿ ಗಂಭೀರವಾಗಿ ಹಾಗೂ ಬಹಳ ಪರಿಣಾಮಕಾರಿಯಾಗಿ ಪ್ರಸ್ತಾಪವನ್ನು ಮಾಡಿದ್ದಾರೆ. ಅದಕ್ಕೆ ಸರ್ಕಾರದ ಪರವಾಗಿ ಈಗಾಗಲೇ ನಮ್ಮ ಗ್ರಾಮೀಣಾಭಿವೃದ್ಧಿ ಮಂತ್ರಿಗಳಾಗಿರತಕ್ಕಂಥ ಮಾನ್ಯ ಘೋರ್ಪಡೆಯವರು ಬಹಳ ಸವಿಸ್ತಾರವಾಗಿ ಸಮಾಧಾನಕರವಾದ ಉತ್ತರವನ್ನು ಕೊಟ್ಟಿದ್ದಾರೆ. ಬಹುತೇಕವಾಗಿ ಎಲ್ಲರಿಗೂ ತೃಪ್ತಿಯನ್ನು ತಂದಿದೆ ಎಂದು ನಾನು ಕೂಡ ತಿಳಿದುಕೊಂಡಿರುತ್ತೇನೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಜಿಲ್ಲೆಯಲ್ಲಿ ಸಭೆಯನ್ನು ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿರುತ್ತೇವೆ. ಅದನ್ನು ಸರ್ಕಾರ ಬಹಳ ತೀವ್ರಗತಿಯಿಂದ ಆ ಸಮಸ್ಯೆಯನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ಕ್ರಮವನ್ನು ಕೈಗೊಂಡಿರುತ್ತದೆ. ಆದ್ದರಿಂದ ಇಂದು ಗ್ರಾಮೀಣ ಪ್ರದೇಶಗಳಿಗೆ ಸಂಬಂಧಪಟ್ಟಂಥ ವಿಚಾರಗಳನ್ನು ಸದಸ್ಯರು ಹೇಳಿದ ಮೇಲೆ ಪಟ್ಟಣ ಪ್ರದೇಶಗಳಲ್ಲಿರುವ ಜನರ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಾನು ಕೂಡ ಇಲಾಖೆಯ ವತಿಯಿಂದ ಉತ್ತರ ಕೊಡಬೇಕಾದದ್ದು ನನ್ನ ಜವಾಬ್ದಾರಿಯಾಗಿದೆ. ಇದರಲ್ಲಿ ಬಹುಮುಖ್ಯವಾದ ಎರಡು

ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಒಂದನೆಯದು ಬಹಳ ತುರ್ತಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಎಲ್ಲ ಸದಸ್ಯರಿಗೂ ಗೊತ್ತಿರುವಂತೆ, ತುರ್ತಾಗಿ ಕ್ರಮ ಕೈಗೊಳ್ಳುವುದಕ್ಕೆ ನಮ್ಮ ಇಲಾಖೆಯಿಂದ ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ನಮ್ಮ ಕಂದಾಯ ಇಲಾಖೆಯ ಮಂತ್ರಿಗಳಿರುತ್ತಾರೆ. ಕಂದಾಯ ಇಲಾಖೆಯ ಮಂತ್ರಿಗಳಾದ ನಮ್ಮ ಶ್ರೀಕಂಠಯ್ಯನವರು ಜಿಲ್ಲಾಧಿಕಾರಿಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ವಿಶೇಷವಾಗಿ ಪಟ್ಟಣಗಳಿಗೂ ಹಾಗೂ ಗ್ರಾಮೀಣ ಪ್ರದೇಶಗಳಿಗೆ ತ್ವರಿತವಾಗಿ ಕುಡಿಯುವ ನೀರಿನ ಸಲುವಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಆದಷ್ಟು ಶೀಘ್ರವಾಗಿ ಕುಡಿಯುವ ನೀರಿನ ಸಮಸ್ಯೆಯ ಪರಿಹಾರಕ್ಕೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ಅದು ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಅದನ್ನು ಅರ್ಜೆಂಟಾಗಿ ನಮ್ಮ ಇಲಾಖೆಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಂದಾಯ ಇಲಾಖೆಯ ಮಂತ್ರಿಗಳು ಉತ್ತರವನ್ನು ಕೊಡುವಾಗ ಬಹಳ ಸ್ಪಷ್ಟವಾಗಿ ಉತ್ತರವನ್ನು ಕೊಡುತ್ತಾರೆ. ಆದರೆ ಈಗ ಮಾನ್ಯ ಎಲ್ಲಾ ಸದಸ್ಯರು ಹೇಳಿದ ರೀತಿಯಲ್ಲಿ ಕರ್ನಾಟಕ ವಾಟರ್ ಸಪ್ಲೈ ಬೋರ್ಡಿನಿಂದ ಎಲ್ಲಾ ಪಟ್ಟಣಗಳಿಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ, ಅದು ನಮ್ಮ ಬೋರ್ಡ್ ಹಾಗೂ ಇಲಾಖೆಯ ಜವಾಬ್ದಾರಿಯಾಗಿರುತ್ತದೆ. ಆ ಜವಾಬ್ದಾರಿಗೆ ಅನುಗುಣವಾಗಿ ಸುಮಾರು 18- 19 ಮಾನ್ಯ ಸದಸ್ಯರುಗಳು ಮಾತಾನಾಡಿದ್ದಾರೆ. ಶ್ರೀ ಜಗದೀಶ್ ಶೆಟ್ಟರ್‌ರವರು, ಸದಾನಂದಗೌಡರು, ಜ್ಞಾನೇಂದ್ರರವರು, ಯೋಗೀಶ್‌ಭಟ್ಟರವರು, ಸೋಮಶೇಖರರವರು, ಬೈರೇಗೌಡರು, ಬಚ್ಚೇಗೌಡರು, ಎ.ರಾಮದಾಸ್‌ರವರು, ಶಿವಾನಂದ ಪಾಟೀಲರು, ಶಿವಾನಂದ ಕೌಜಲಗಿಯವರು, ಪಾಪಣ್ಣ ಕೋಳಿವಾಡ, ಸಂಗಣ್ಣ ಕರಡಿಯವರು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಬರತಕ್ಕಂಥ ಪಟ್ಟಣಗಳ ಕುಡಿಯುವ ನೀರಿನ ಯೋಜನೆಯ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ. ಆ ಯೋಜನೆಯನ್ನು ಕಾರ್ಯಗತಗೊಳಿಸಬೇಕು ಎನ್ನುವುದರ ಜೊತೆಗೆ, ಕುಡಿಯುವ ನೀರಿನ ಯೋಜನೆಗಳು ಯಾವರೀತಿಯಾಗಿ ಆಗಬೇಕು ಎನ್ನುವುದರ ಬಗ್ಗೆ ಬಹಳ ಉತ್ತಮವಾದ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ತಮಗೆ ಗೊತ್ತಿರುವ ರೀತಿಯಲ್ಲಿ ಆದಷ್ಟು ಶೀಘ್ರವಾಗಿ ಎಲ್ಲ ಯೋಜನೆಗಳನ್ನು ಕಾರ್ಯಗತಗೊಳಿಸಬೇಕು ಎನ್ನುವುದು ನಾವು ಸರ್ವೆಸಾಮಾನ್ಯವಾಗಿ ಒಪ್ಪಿಕೊಳ್ಳಬೇಕಾದಂಥ ಕೆಲಸವಾಗಿದೆ. ಅದು ನಿಗದಿತ ಅವಧಿಯೊಳಗಾಗಿ ಮುಗಿಯದಿದ್ದರೆ ಮಾನ್ಯ ಕೋಳಿವಾಡರವರು ಹೇಳಿದ ರೀತಿಯಲ್ಲಿ, ರಾಣಿಬೆನ್ನೂರ ಕುಡಿಯುವ ನೀರಿನ ಯೋಜನೆ 10 ಕೋಟಿ ರೂಪಾಯಿಗಳು. ಆ ಯೋಜನೆ ಇವತ್ತು 20 ಕೋಟಿ ರೂಪಾಯಿಗಳಿಗೆ ಹೋದದ್ದನ್ನು ನೋಡಿದರೆ ಅಂತಹ ಯೋಜನೆಗಳು ನಿಗದಿತ ಅವಧಿಯೊಳಗೆ ಮುಗಿಯದಿದ್ದರೆ, ಅದು ಆರ್ಥಿಕ ಇಲಾಖೆಗೂ ಹಾಗೂ ನಮ್ಮ ಇಲಾಖೆಗೂ ಕೂಡ ಹೊರೆಯಾಗುತ್ತದೆ. ಜನರೂ ಕೂಡ ಇದರಿಂದ ತೊಂದರೆಯನ್ನು ಅನುಭವಿಸತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಆ ದೃಷ್ಟಿಯಿಂದ ಮಾನ್ಯ ಸೋಮಶೇಖರ್‌ರವರು ಕೆಲವು ವಿಚಾರಗಳನ್ನು ಹೇಳಿದರು. ಅದನ್ನು ಗುತ್ತಿಗೆದಾರರಿಗೆ

ಕೊಟ್ಟು ನಿಗದಿತ ಅವಧಿಯೊಳಗೆ ಎಲ್ಲಿ ಕೆಲಸದ ಕಾಮಗಾರಿಗಳು ಮುಗಿಯುವ ವ್ಯವಸ್ಥೆಯಾಗಬೇಕೆಂದು ಸಲಹೆಯನ್ನು ಕೂಡ ಕೊಟ್ಟಿರುತ್ತಾರೆ. ಆದರೆ ಮೊದಲು ಪೀಸ್ ವರ್ಕ್ಸ್ ಕೊಟ್ಟು ಕೆಲಸವನ್ನು ಮಾಡಿಸುತ್ತಿದ್ದೆವು. ಅದರ ಪೈಪ್‌ಲೈನ್ ಮಾಡುವವರು ಒಬ್ಬರು ಬೇರೆ, ಜಾಕ್‌ವೆಲ್ ಕಟ್ಟುವವರು ಒಬ್ಬರು ಬೇರೆ, ಟ್ಯಾಂಕ್ ಕಟ್ಟುವವರು ಬೇರೆ, ಅದನ್ನೆಲ್ಲ ಮಾಡುತ್ತಿದ್ದರು. ಸುಮಾರು ಎರಡು ವರ್ಷಗಳ ಹಿಂದೆ ಮಾಡುತ್ತಿದ್ದರು. ಆ ಎರಡು ವರ್ಷಗಳ ಈಚೆಗೆ ನಮ್ಮ ಸರ್ಕಾರ ಒಂದು ಒಳ್ಳೆಯ ನಿರ್ಣಯವನ್ನು ತೆಗೆದುಕೊಂಡು ಪ್ರೀ ಕ್ವಾಲಿಫೈಡ್ ಕಂಟ್ರಾಕ್ಟರ್ಸ್ ಎಂದು ನಾವು ನಿಗಧಿ ಮಾಡಿರುತ್ತೇವೆ. ಆಲ್-ಇಂಡಿಯಾ ಲೆವಲ್‌ನ ಸುಮಾರು 20-25 ಒಳ್ಳೆಯ ಕಂಟ್ರಾಕ್ಟರ್ಸ್ ಬರುತ್ತಾರೆ. ಅವರು ಒಳ್ಳೆಯ ಅನುಭವ ಇರತಕ್ಕಂಥವರಾಗಿದ್ದಾರೆ. ಆ 20 ಜನ ಕಂಟ್ರಾಕ್ಟರುಗಳಿಗೆ ಪ್ಯಾಕೇಜ್ ಟೆಂಡರ್ ಕರೆದು ಅವರಿಗೆ ಕೆಲಸವನ್ನು ಕೊಡುತ್ತಿದ್ದೇವೆ. ಆ ಆಮೂಲಾಗ್ರವಾದ ಯೋಜನೆಯ ಕೆಲಸವನ್ನು ಮುಗಿಸತಕ್ಕಂಥದ್ದನ್ನು ಅವರಿಗೆ ನಿರ್ವಹಿಸುತ್ತಿರುವುದರಿಂದ ಎರಡು-ಮೂರು ವರ್ಷಗಳಲ್ಲಿ ಕೆಲಸ ಪ್ರಗತಿಯಲ್ಲಿರುತ್ತವೆ. ಸುಮೂರು 3-4 ವರ್ಷಗಳ ಹಿಂದೆ ಆಗಿರತಕ್ಕಂಥ ಯೋಜನೆಗಳು ಸ್ವಲ್ಪ ಮಂದಗತಿಯಲ್ಲಿ ನಡೆಯುವುದಕ್ಕೆ ಗುತ್ತಿಗೆದಾರರು ಕಾರಣವಾಗಿರಬಹುದು. ಮತ್ತು ಇಲಾಖೆಯಿಂದ ಹಲವಾರು ಕಾರಣಗಳಾಗಿರಬಹುದು. ಆದರೂ ಕೂಡ ನಿಗದಿತ ಅವಧಿಯೊಳಗೆ ಎಲ್ಲಾ ಕಾಮಗಾರಿಗಳು ಮುಗಿದರೆ ಇನ್ನೂ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಬೇಕೆಂದು ತಾವು ಸಲಹೆಗಳನ್ನು ಕೊಟ್ಟಿರುತ್ತೀರಿ, ಅದು ನಿಜವಾಗಲೂ ಒಳ್ಳೆಯ ಸಲಹೆ, ಅದನ್ನು ನಾನು ಕೂಡ ಸ್ವಾಗತವನ್ನು ಮಾಡುತ್ತೇನೆ. ಕುಡಿಯುವ ನೀರಿನ ಸಮಸ್ಯೆಯನ್ನು ನಾವು ಬಹಳವಾಗಿ ಎದುರಿಸುತ್ತಿದ್ದೇವೆ. ನಮ್ಮ ಇಲಾಖೆಯಿಂದ ನಾವು ಕುಡಿಯುವ ನೀರಿನ ಯೋಜನೆಯನ್ನು ಅಳವಡಿಸಿದರೂ ಕೂಡ ಬಹಳ ಪಟ್ಟಣಗಳಲ್ಲಿ ಡಿಸ್ಟ್ರಿಬ್ಯೂಷನ್ ಸಿಸ್ಟಮ್ಮನ್ನು ನಾವು ಹಾಕಿಕೊಂಡಿರುವುದಿಲ್ಲ. ಕುಡಿಯುವ ನೀರಿನ್ನು ಕೊಟ್ಟರೂ ಸಹ ಡಿಸ್ಟ್ರಿಬ್ಯೂಷನ್ ಸರಿಯಾಗಿಲ್ಲವೆಂದರೆ, ಮಾನ್ಯ ಕರಡಿ ಸಂಗಣ್ಣನವರು ಹೇಳಿದ ಹಾಗೆ, 20-30 ಕೋಟಿ ರೂಪಾಯಿಗಳ ಕುಡಿಯುವ ನೀರಿನ ಯೋಜನೆಯನ್ನು ಮಾಡಿದರೂ ಕೂಡ ಪ್ರತಿವಾರ್ಡಿಗೆ ಕುಡಿಯುವ ನೀರನ್ನು ಕೊಡುವುದಕ್ಕಾಗುವುದಿಲ್ಲವೆನ್ನುವ ಮಾತನ್ನು ಅವರು ಹೇಳಿದರು. ಆ ಯೋಜನೆಯೊಳಗೆ ಸೇರಿಸಿದ್ದರೆ ಆ ಒಂದು ತೊಂದರೆ ಆಗುತ್ತಿರಲಿಲ್ಲ. ಅದನ್ನು ಕೂಡ ಸರ್ಕಾರ ಬಹಳ ತೀವ್ರಗತಿಯಿಂದ ಪರಿಗಣಿಸಬೇಕಾಗಿದೆ. ಬಿಜಾಪುರ ನಗರಕ್ಕೆ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಸುಮಾರು 35 ಕೋಟಿ ರೂಪಾಯಿಯಲ್ಲಿ ಇದನ್ನು ಕೋಲಾರದಿಂದ ಒದಗಿಸಬೇಕಾಗಿದ್ದು, ಇದು ಬಹಳ ವರ್ಷಗಳಿಂದ ಪ್ರತಿ ಸಾರ್ವಜನಿಕರಿಗೆ ವಾರ್ಡ್‌ಗಳಿಗೆ ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆ ಇವತ್ತಿನವರೆಗೂ ಆಗುತ್ತಿಲ್ಲ. ಇದು ಒಂದು ದುರ್ದೈವದ ಸಂಗತಿಯಾಗಿದೆ. ಅದನ್ನು ಕೂಡ ರೀ-ಮಾಡಲಿಂಗ್ ಮಾಡುವಂಥದ್ದಾಗಲಿ, ಅಲ್ಲಿ ಡಿಸ್ಟ್ರಿಬ್ಯೂಷನ್ ಕೆಲಸವಾಗಬೇಕು, ಡಿಸ್ಟ್ರಿಬ್ಯೂಷನ್ ಹಾಕಿಕೊಳ್ಳುವಂಥ ಕೆಲಸವಾದರೆ ಒಂದು

ಸಮಗ್ರವಾದಂಥ ಯೋಜನೆಯನ್ನು ಕಾರ್ಯಗತಗೊಳಿಸಿದಂತಾಗುತ್ತದೆ ಎನ್ನುವ ಮಾತನ್ನು ಕೆಲವು ಸಂದರ್ಭದಲ್ಲಿ ನಾನೂ ಕೂಡ ಒಪ್ಪುತ್ತೇನೆ.

ಅದೇರೀತಿಯಾಗಿ ಈಗ ಕುಡಿಯುವ ನೀರಿನ ಯೋಜನೆಗಳು ಬಹಳ ನಿಷ್ಪಲವಾಗಬೇಕಾದರೆ ಕೆಲವು ತೊಂದರೆಗಳನ್ನು ಎದುರಿಸಬೇಕಾದರೆ ನಮ್ಮ ಅನೇಕ ಜನ ಶಾಸಕರುಗಳು ಬಹಳ ಉತ್ತಮವಾದಂತಹ ವಿಚಾರಗಳನ್ನು ಹೇಳಿದ್ದಾರೆ. ಅದರಲ್ಲಿ ಬಹಳ ಮುಖ್ಯವಾಗಿ ಕುಡಿಯುವ ನೀರಿಗೆ ವಿದ್ಯುತ್ ಸಂಪರ್ಕದಿಂದ ಅದರ ಕಡಿತದಿಂದ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದೇವೆ. ಅದನ್ನು ಡೈರೆಕ್ಟ್ ಲೈನನ್ನು ಎಳೆಯಬೇಕು, ಎಕ್ಸ್‌ಪ್ರೆಸ್ ಫೀಡರ್ ಚಾನಲ್ಸ್ ಆಗಬೇಕು. ಸೆಪರೇಟ್ ವಿದ್ಯುತ್‌ನ ಪೂರೈಕೆಯನ್ನು ಮಾಡಬೇಕೆನ್ನುವ ಹಲವಾರು ವಿಚಾರಗಳನ್ನು ಹೇಳಿದ್ದಾರೆ. ನಾನು ಕೂಡ ಹೊಸದಾಗಿ ತೆಗೆದುಕೊಳ್ಳತಕ್ಕಂತಹ ಯೋಜನೆಗಳಿಗೆ ಆ ವಿಚಾರಗಳನ್ನು ಪ್ರಸ್ತಾಪ ಮಾಡಿ ಯೋಜನೆಯಲ್ಲೇ ಅದನ್ನು ಕಾರ್ಯಗತಗೊಳಿಸುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ. ಅದೇ ರೀತಿಯಾಗಿ ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 311 ವಾಟರ್‌ಸಪ್ಲೈ ಸ್ಕೀಂಗಳನ್ನು ನಾವು ಇಂಪ್ಲಿಮೆಂಟ್ ಮಾಡಿದ್ದೇವೆ. ಅದರಲ್ಲಿ 553 ಕೋಟಿ ರೂಪಾಯಿಗಳನ್ನು ನಾವು ಈಗಾಗಲೇ ಖರ್ಚು ಮಾಡಿದ್ದೇವೆ. ಅದರಲ್ಲಿ ಆನ್‌ಗೋಯಿಂಗ್ ಸ್ಕೀಂಗಳು 64, ಅದರಲ್ಲಿ 20 ಯೋಜನೆಗಳನ್ನು ಈ ವರ್ಷದಲ್ಲೇ ಮುಗಿಸುತ್ತೇವೆ. ಇದರ ಬಗ್ಗೆ ಪಟ್ಟಿಯನ್ನು ಬೇಕಾದರೆ ಒದಗಿಸಿಕೊಡುತ್ತೇನೆ. ಅದರದು ಎಸ್ಟಿಮೇಟೆಡ್ ಕಾಸ್ಟ್ ಸುಮಾರು 445 ಕೋಟಿ ರೂಪಾಯಿಗಳು, ಇದರಲ್ಲಿ ಸುಮಾರು 106 ಕೋಟಿ ರೂಪಾಯಿಗಳನ್ನು ಈಗಾಗಲೇ ವಿನಿಯೋಗಿಸಿ ಖರ್ಚು ಮಾಡಿದ್ದೇವೆ. ಇನ್ನು ಉಳಿದಿರತಕ್ಕಂತಹ ಯೋಜನೆಗಳಿಗೆ ಈಗ ಸುಮಾರು 208 ಪಟ್ಟಣಗಳು ನಮಗೆ ಬರುತ್ತದೆ. ಈಗಾಗಲೇ 186 ಪಟ್ಟಣಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದೇವೆ. ನಾವು ಈ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದರೆ ಆಮೂಲಾಗ್ರವಾಗಿ ಅವರಿಗೆ ಎಷ್ಟು ನೀರು ಬೇಕು, ಎಷ್ಟು ನೀರು ಕೊಡಬೇಕಾಗಿತ್ತೋ ಅಷ್ಟು ನೀರನ್ನು ಕೊಟ್ಟಿದ್ದೇವೆಂದು ಹೇಳುತ್ತಿಲ್ಲ. ಅದರಲ್ಲಿ ಕಡಿಮೆ ಪರ್ಸೆಂಟೇಜ್ ಇರಬಹುದು ಇಲ್ಲವೆಂದು ಹೇಳುತ್ತಿಲ್ಲ, ಆದರೆ ಅದನ್ನು ಇಂಪ್ರೂವ್‌ಮೆಂಟ್‌ನೊಳಗಡೆ ನಾವು ಹಾಕಿಕೊಳ್ಳಬೇಕಾಗುತ್ತದೆ. ಇನ್ನು ಉಳಿದಿರತಕ್ಕಂತಹ ಪಟ್ಟಣಗಳಿಗೂ ಕೂಡ ನಾವು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕೆಂದು ಹೇಳಿ ಈಗಾಗಲೇ ಹುಡ್ಕೋದಿಂದ ಕೂಡ ನಾವು ಸಾಲದ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಹುಡ್ಕೋದಿಂದ ಸುಮಾರು 319 ಕೋಟಿ ರೂಪಾಯಿಗಳನ್ನು ಬಹುತೇಕ 15 ದಿವಸ ಅಥವಾ ಒಂದು ತಿಂಗಳೊಳಗಾಗಿ ಮಂಜೂರಾತಿಯನ್ನು ಕೊಡತಕ್ಕಂತಹ ಕೆಲಸವನ್ನು ನಾವು ಹಮ್ಮಿಕೊಂಡಿದ್ದೇವೆ. ಆ 319 ಕೋಟಿ ರೂಪಾಯಿಯೊಳಗಡೆ ಸುಮಾರು 42 ಪಟ್ಟಣಗಳಿಗೆ ಕುಡಿಯುವ ನೀರಿನ ಅನುಕೂಲತೆಯನ್ನು ಮಾಡಬೇಕೆಂದು ಸರ್ಕಾರವು ನಿರ್ಧಾರವನ್ನು ಕೈಗೊಂಡಿದೆ. ಆ ಸಾಲದ ವ್ಯವಸ್ಥೆಯನ್ನು ಮಾಡಿಕೊಳ್ಳುವುದಕ್ಕೆ ಈಗಾಗಲೇ ಎಂಒಯು ಎಲ್ಲಾ

ಅಗ್ರಿಮೆಂಟ್ ಕೂಡ ಆಗಿದೆ, ಅದನ್ನು ಮಾಡುತ್ತಿದ್ದೇವೆ. ಇದಲ್ಲದೆ ಈಗ ರಾಜ್ಯದೊಳಗಡೆ ನಮ್ಮ ಬೋರ್ಡಿನಿಂದ ತೆಗೆದುಕೊಂಡಂತಹ ಕಾಮಗಾರಿಗಳನ್ನು ಹೊರತುಪಡಿಸಿ ಸುಮಾರು 17 ಯೋಜನೆಗಳನ್ನು ನಾವು ಎಕ್ಸಿಲರೇಟೆಡ್ ವಾಟರ್‌ಸಪ್ಲೈ ಸ್ಕೀಂನ ಒಳಗಡೆ ತೆಗೆದುಕೊಂಡಿದ್ದೇವೆ. ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ 50-50 ಪರ್ಸೆಂಟ್ ಗ್ರಾಂಟ್‌ನ ಒಳಗಡೆ ಸುಮಾರು 33 ಕೋಟಿ ರೂಪಾಯಿಗಳಿಗೆ ಈಗಾಗಲೇ ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ. ಸುಮಾರು 132 ಕೋಟಿ ರೂಪಾಯಿಗಳನ್ನು ಎಡಿಬಿ ಪ್ರಾಜೆಕ್ಟ್‌ನೊಳಗಡೆ ಈಗಾಗಲೇ ತೆಗೆದುಕೊಂಡಿದ್ದೇವೆ. ಮಾನ್ಯ ರಾಮದಾಸ್‌ರವರು ಕೇಳಬಹುದು, ಮೈಸೂರು, ತುಮಕೂರು, ರಾಮನಗರ, ಚನ್ನಪಟ್ಟಣ ಈ ರೀತಿಯ ಪಟ್ಟಣಗಳಿಗೆ ಈಗಾಗಲೇ ನಾವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಅದು ನಿಗದಿತ ಅವಧಿಯೊಳಗಡೆ ಮುಗಿಯುವ ಹಂತದಲ್ಲಿದೆ. ಅದೇ ರೀತಿಯಾಗಿ ನಮ್ಮ ಕೋಸ್ಟಲ್‌ಗಳ ಬಗ್ಗೆ ಹೇಳಿದರು, ಅದರೊಳಗೆ ಕೋಸ್ಟಲ್ Enviornment ಮ್ಯಾನೇಜ್‌ಮೆಂಟ್ ಅರ್ಬನ್ ಡೆವಲಪ್‌ಮೆಂಟ್ ಸ್ಕೀಂನೊಳಗಡೆ ಸುಮಾರು 330 ಕೋಟಿ ರೂಪಾಯಿಗಳ ಅನುದಾನವನ್ನು 10 ಪಟ್ಟಣಗಳಿಗೆ ತೆಗೆದುಕೊಂಡಿದ್ದೇವೆ. ಅದು ಬಹಳ ವರ್ಷದಿಂದ ನಡೆಯುತ್ತಿದೆ, ಅದು ಯಾವಾಗ ಆಗುತ್ತದೆಂದು ತಾವು ಕೇಳಿದ್ದೀರಿ, ಆದಷ್ಟು ಶೀಘ್ರವಾಗಿ ಅದನ್ನು ಮಂಜೂರಾತಿ ಪಡೆಯುವುದಕ್ಕಾಗಲಿ ಮತ್ತು ಆದಷ್ಟು ಕಾಮಗಾರಿಗಳನ್ನು ಪ್ರಾರಂಭ ಮಾಡುವುದಕ್ಕೂ ಕೂಡ ನಾವು ಹಾಗೂ ನಮ್ಮ ಇಲಾಖೆಯವರು ಕೂಡ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈಗ ಒಟ್ಟಾರೆಯಾಗಿ ಸುಮಾರು 4 ಕೋಟಿ ರೂಪಾಯಿಗಳೊಳಗಡೆ ಎನ್‌ಆರ್‌ಸಿಪಿ ಯೋಜನೆಗಳಲ್ಲಿ ತೆಗೆದುಕೊಂಡಿದ್ದೇವೆ. ಈ ರೀತಿ ಹಲವಾರು ಯೋಜನೆಗಳನ್ನು ಬೇರೆ ಬೇರೆ ವಿಧದಲ್ಲಿ ಒಂದು ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಂಡು ಹಲವಾರು ಕಾರ್ಯಕ್ರಮಗಳನ್ನು ರಾಜ್ಯದಾದ್ಯಂತ ನಾವು ಮಾಡುತ್ತಿದ್ದೇವೆ. ಇದರಿಂದ ಸುಮಾರು 3-4 ವರ್ಷಗಳಲ್ಲಿ ರಾಜ್ಯದಲ್ಲಿರತಕ್ಕಂತಹ ಕುಡಿಯುವ ನೀರಿನ ಸಮಸ್ಯೆಗೆ ಒಂದು ಪರಿಹಾರವನ್ನು ಕಂಡುಹಿಡಿಯತಕ್ಕಂತಹ, ಒಂದು ಪ್ರಾಮಾಣಿಕವಾದಂತಹ ಕರ್ತವ್ಯವನ್ನು ಸರ್ಕಾರವು ಕೂಡ ಈಗಾಗಲೇ ನಿಭಾಯಿಸಿದೆ. ಇದಲ್ಲದೆ ವೈಯಕ್ತಿಕವಾಗಿ ಎಲ್ಲಾ ಪಟ್ಟಣಗಳಿಗೂ ಉತ್ತರವನ್ನು ಕೊಡುವುದಕ್ಕೆ ಆಗದೆ ಇರಬಹುದು ತಾವು ಈಗಾಗಲೇ ನಿರ್ದೇಶನವನ್ನು ನೀಡಿದ್ದೀರಿ. ಎಲ್ಲಾ ಪಟ್ಟಣಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಹೇಳಿದರೆ ಸುಮಾರು 20 ಪಟ್ಟಣಗಳಿಗೆ 20 ಕುಡಿಯುವ ನೀರಿನ ಯೋಜನೆಗಳಿಗೆ ಹೇಳುವುದಕ್ಕೆ ವಿವರ ಆಗದೆ ಇರಬಹುದು. ಆದರೆ ಒಟ್ಟಾರೆಯಾಗಿ ಬಹಳ ಮುಖ್ಯವಾಗಿ ನಮ್ಮ ವಿರೋಧಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಬಹಳ ದಿವಸಗಳಿಂದ ಇದರ ಬಗ್ಗೆ ಕೇಳುತ್ತಿದ್ದಾರೆ. ನಮ್ಮ ಹುಬ್ಬಳ್ಳಿ-ಧಾರವಾಡಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕು, ಆದಷ್ಟು ಶೀಘ್ರವಾಗಿ ಈ ಕೆಲಸವಾಗಬೇಕು, ಸುಮಾರು 35 ಕೋಟಿ ರೂಪಾಯಿಗಳ ಯೋಜನೆಯಾಗಬೇಕೆಂದು ಹೇಳಿ ನಮ್ಮ ಸರ್ಕಾರಕ್ಕೂ ಕೂಡ ಹಲವಾರು ಬಾರಿ

ಒತ್ತಾಯವನ್ನು ಮಾಡಿದ್ದಾರೆ. ಅದರ ಬಗ್ಗೆಯೂ ನಿನ್ನೆದಿನ ಪ್ರಶ್ನಾವಳಿಯಲ್ಲಿ ಬಂದಾಗ ನಾನು ಮಂಜೂರಾತಿಯನ್ನು ನೀಡುತ್ತೇನೆಂದು ಹೇಳಿದ್ದೇನೆ. ಸರ್ಕಾರದಿಂದ ಮುಂದಿನ ನಮ್ಮ ಕ್ಯಾಬಿನೆಟ್ ಮೀಟಿಂಗ್‌ನಲ್ಲಿಟ್ಟು ಪಾಸ್ ಮಾಡುತ್ತೇವೆಂದು ಹೇಳಿದ್ದೇನೆ. ಆ ಮಾತನ್ನು ಕೂಡ ನಾವು ನಡೆಸಿಕೊಡುತ್ತೇವೆ. ಆ 35 ಕೋಟಿ ರೂಪಾಯಿಗಳ ಯೊಜನೆಯಾದರೆ ಹುಬ್ಬಳ್ಳಿ-ಧಾರವಾಡಕ್ಕೆ ಬಹುತೇಕವಾಗಿ ನನಗನಿಸಿದ ಹಾಗೆ ಆ ತೊಂದರೆಯು ನಿವಾರಣೆಯಾಗಬಹುದು. ಬಹಳ ದಿವಸದ ಕನಸು ನನಸಾಗಬಹುದು ಎಂದು ನಾನು ಕೂಡ ತಿಳಿದುಕೊಂಡಿದ್ದೇನೆ. ಅದೇ ರೀತಿಯಾಗಿ ನಮ್ಮ ಭೈರೇಗೌಡರು ಕೂಡ ಕುಡಿಯುವ ನೀರಿನ ವಿಚಾರದ ಬಗ್ಗೆ ಹೇಳಿದ್ದಾರೆ. ಅವರು ಕೋಲಾರ ಜಿಲ್ಲೆಯಲ್ಲಿರುವಂತಹ ಯುವಜನಗಳು, ಇದು ಆದಷ್ಟು ಶೀಘ್ರವಾಗಿ ಆಗಬೇಕೆಂದು ಹೇಳಿದ್ದಾರೆ. ಅದರಲ್ಲೂ ವಿಶೇಷವಾಗಿ ಕೋಲಾರ ಪಟ್ಟಣ ಆಗಬೇಕು, ಅಲ್ಲಿ ಬಹಳ ತೊಂದರೆ ಇದೆ ಎಂದು ಅವರು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಈಗಾಗಲೇ ಹಮ್ಮೀರನಹಳ್ಳಿ ಕೆರೆಯಿಂದ ಕೊಳವೆ ಬಾವಿಗಳ ಮೂಲಕ ಏನು ನಾವು ನೀರನ್ನು ತೆಗೆದುಕೊಳ್ಳುತ್ತೇವೆ, ಈಗ ಆ ಕೆರೆಯು ಒಣಗಿರುವುದರಿಂದ, ಹಾಗೂ ಈಗಾಗಲೇ ಬೋರ್‌ವೆಲ್‌ನಲ್ಲಿಯೂ ನೀರಿಲ್ಲದೆ ಇರುವುದರಿಂದ ನಾನು ಕೂಡ ಆ ಮಾತನ್ನು ಒಪ್ಪಿಕೊಳ್ಳುತ್ತೇನೆ. ಆ ದೃಷ್ಟಿಯಿಂದ ವಿಶೇಷವಾಗಿ ಒಂದು ಬರಗಾಲ ಕಾಮಗಾರಿಯೊಳಗಡೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳಿ ಮೊನ್ನೆಯೂ ಕೂಡ ಒತ್ತಾಯ ಮಾಡಿದ್ದಾರೆ. ಇಂದು ಕೂಡ ನಾನು ನಿಮ್ಮ ಪರವಾಗಿ ಮಾನ್ಯ ಕಂದಾಯ ಮಂತ್ರಿಗಳಲ್ಲಿ ಸುಮಾರು 40 ಲಕ್ಷ ರೂಪಾಯಿಗಳು ಬಿಡುಗಡೆಯಾಗಬೇಕೆಂದು ವಿನಂತಿಯನ್ನು ಮಾಡಿಕೊಂಡಿದ್ದೇನೆ. ಅವರು ಕೂಡ ಅದನ್ನು ಒಪ್ಪಿಕೊಂಡಿದ್ದಾರೆ. ಆ ಹಣವನ್ನು ಎರಡು ಕೆರೆಗಳಿಗೆ ಉಪಯೋಗ ಮಾಡಿದರೆ ಬಹುತೇಕವಾಗಿ ಕೋಲಾರ ಪಟ್ಟಣದಲ್ಲಿ ಆ ತೊಂದರೆಯನ್ನು ನಿಭಾಯಿಸಬಹುದು, ಅದೇ ರೀತಿಯಾಗಿ ಬಹುಮುಖ್ಯವಾಗಿ ಮಾನ್ಯ ಮಂತ್ರಿಗಳು ಬಹಳ ದೊಡ್ಡದಾದ ಯೋಜನೆಯನ್ನು ಮಾಡಿದ್ದಾರೆ. ಇಡೀ ಕೋಲಾರ ಜಿಲ್ಲೆಯೊಳಗಡೆ ಸುಮಾರು 602 ಕೋಟಿ ರೂಪಾಯಿಗಳ ಯೋಜನೆಯನ್ನು ಬಹುತೇಕ ಎಲ್ಲ ಗ್ರಾಮಗಳೂ ಮತ್ತು ಎಲ್ಲ ಪಟ್ಟಣಗಳೂ ಆನೇಕಲ್, ಮಾಲೂರು, ಬಂಗಾರಪೇಟೆ ಅನೇಕ ಹಳ್ಳಿಗಳನ್ನು ಕೊಟ್ಟಿದ್ದೀರಿ. ಸುಮಾರು 608 ಕೋಟಿ ರೂಪಾಯಿಗಳ ಯೋಜನೆ ಈಗಾಗಲೇ ಸಿದ್ಧವಾಗಿ ಇದು ಸರ್ಕಾರದ ಮುಂದೆ ಇದೆ. ಇದನ್ನು ಆರ್ಥಿಕ ಪರಿಸ್ಥಿತಿಯಿಂದ ಆದಷ್ಟು ಶೀಘ್ರವಾಗಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದರೆ ಇದನ್ನು ಪರಿಶೀಲನೆ ಮಾಡುತ್ತೇವೆ. ಈ ಯೋಜನೆಗೆ ಹಣಕಾಸಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಇದು ಅಷ್ಟು ಸುಲಭವಾಗಿ ಕೆಲಸವಾಗಿರಲಿಕ್ಕಿಲ್ಲ.

ಶ್ರೀ ಸಿ.ಬೈರೇಗೌಡ: ಹುಡ್ಕೋ ನೆರವನ್ನು ಇನ್‌ಪ್ರಿನ್ಸಿಪಲಿ ತಾವು ದಯವಿಟ್ಟು ಒಪ್ಪಿಕೊಳ್ಳಬೇಕು. ಇದನ್ನು ಹುಡ್ಕೋಗೆ ಕಳುಹಿಸಿ, ಅಲ್ಲಿ ಹಣವನ್ನು ಪಡೆಯುವುದಕ್ಕೆ

ಪ್ರಯತ್ನ ಪಡುತ್ತೇವೆ. ಇನ್‌ಪ್ರಿನ್ಸಿಪಲಿ ತಾವು ಒಪ್ಪಿಕೊಳ್ಳಿ, ಇದರ ವಿವರಗಳ ಬಗ್ಗೆ ನಂತರ ಚರ್ಚೆ ಮಾಡುವುದಕ್ಕಾಗುತ್ತದೆ, ಇದರ ಸಾಧಕಬಾಧಕಗಳನ್ನು ನಂತರ ನೋಡೋಣ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ನಾವು ಇನ್‌ಪ್ರಿನ್ಸಿಪಲಿ ಒಪ್ಪಿಕೊಂಡರೆ, ನಾಳೇ ದಿನ ರೀಪೇಮೆಂಟ್..

ಶ್ರೀ ಸಿ.ಬೈರೇಗೌಡ: ಇದು ವಿವರವಾದ ವಿಷಯವಾಗಿರುತ್ತದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಅದರ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲನೆಯನ್ನು ಮಾಡುತ್ತದೆ.

ಶ್ರೀ ಸಿ.ಬೈರೇಗೌಡ: ಹುಡ್ಕೋಗೆ ಇದನ್ನು ಕಳುಹಿಸುತ್ತೇವೆಂದು ತಾವು ಹೇಳಿ, ಏನು ತೀರ್ಮಾನಕ್ಕೆ ಬರುತ್ತಾರೋ ಅದು ಆಗಲಿ, ರೀಪೇಮೆಂಟ್ ಹೇಗೆ ಆಗಬೇಕು, ಯಾರು ಎಷ್ಟು ಕೊಡಬೇಕೆಂಬುದು It is a matter of detail which can be worked out later.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಅದನ್ನು ಪರಿಶೀಲನೆ ಮಾಡುತ್ತೇನೆ. Viability ನೋಡಬೇಕಾಗುತ್ತದೆ.

ಶ್ರೀ ಸಿ.ಬೈರೇಗೌಡ: ತಾವು ಕಳುಹಿಸುತ್ತೇವೆಂದು ಹೇಳಬೇಕು. Details can be worked up later. But, in principle you please accept. ನಾನು ಈಗಲೇ ಮಂಜೂರು ಮಾಡಿ ಎಂದು ಕೇಳುತ್ತಿಲ್ಲ. ನೀವು ಹುಡ್ಕೋ ಅಸಿಸ್ಟೆನ್ಸ್‌ನ್ನು ಪಡೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಿದೆ, ನಾವು ಅವರನ್ನು ಅಪ್ರೋಚ್ ಮಾಡುತ್ತೇವೆಂದು ಹೇಳಿ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಬೈರೇಗೌಡರವರೆ, ತಾವು ಹಿಂದೆ ಮಂತ್ರಿಯಾಗಿದ್ದಂಥವರು ತಮಗೆ ಅನುಭವವಿರತಕ್ಕಂಥವರು ಆಗಿದ್ದೀರಿ, ನಮ್ಮ ಇಡೀ ರಾಜ್ಯಕ್ಕೆ 600 ಕೋಟಿ ರೂಪಾಯಿಗಳನ್ನು ಕೊಟ್ಟರೆ ಪ್ರತಿ ಪಟ್ಟಣಗಳಿಗೆ ಎಷ್ಟು ನೀರು ಬೇಕೋ ಅಷ್ಟು ನೀರನ್ನು ಕೊಡಬಹುದು.

ಶ್ರೀ ಸಿ.ಬೈರೇಗೌಡ: ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ ಕೋಲಾರಕ್ಕೆ ತಾವು ಯಾವಾಗ ಬರುತ್ತೀರೋ ಬನ್ನಿ, ಒಂದು ಅಡಿ ಡಯಾಮೀಟರ್ ಇರತಕ್ಕಂಥದ್ದು 800 ಅಡಿ ಬೋರ್‌ವೆಲ್‌ನ್ನು ತೋಡಿದರೂ ಸಹ ಅಲ್ಲಿ ನೀರು ಬಂದಿಲ್ಲ. ನ್ಯಾಷನಲ್ ಹೈವೆ ರಸ್ತೆಯ ಪಕ್ಕದಲ್ಲೆ ಬೋರ್‌ವೆಲ್ ಇದೆ. ಅದರಲ್ಲಿ ನೀರಿಲ್ಲ, ಈ ಪರಿಸ್ಥಿತಿಯು ಉಂಟಾಗುತ್ತದೆ, ನಾವು ಬರೀ ಕೊಳವೆ ಬಾವಿಗಳನ್ನು ನಂಬಿಕೊಂಡಿದ್ದರೆ,

ನಮಗೆ ಕುಡಿಯುವುದಕ್ಕೆ ನೀರಿಲ್ಲ, ಈ ತರಹದ ಪರಿಸ್ಥಿತಿ ಬರುತ್ತದೆ ಆದ್ದರಿಂದ ತಾವು ಈಗಲೇ ತಡಮಾಡದೆ, ತಾವು ಆ ದಿಕ್ಕಿನಲ್ಲಿ ಆಲೋಚನೆಯನ್ನು ಮಾಡಿ ಇನ್ ಪ್ರಿನ್ಸಿಪಲ್ ಹುಡ್ಕೋ ಮೂಲಕ ಅದಕ್ಕೆ ನೆರವು ಕೊಡುವುದಕ್ಕೆ ತಾವು ಪ್ರಯತ್ನವನ್ನು ಪಡುತ್ತೇವೆಂದು ತಾವು ಒಪ್ಪಿಕೊಳ್ಳಿ. ತಾವು ಒಪ್ಪಿಕೊಂಡ ನಂತರ ಬರುವ ಸಾಧಕಬಾಧಕಗಳ ಬಗ್ಗೆ ಯೊಚನೆ ಮಾಡುವುದು ಆಗುತ್ತದೆ. ತಾವು ಅದನ್ನೇನು ಇವತ್ತೇ ಮಂಜೂರು ಮಾಡುವುದಿಲ್ಲ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ನಾವು ಈಗಾಗಲೇ ಹುಡ್ಕೋದಿಂದ 300 ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಂಡಿದ್ದೇವೆ. ಮೊದಲು ಅದು ಅಗ್ರಿಮೆಂಟ್ ಆಗಿ ಹಣ ರಿಲೀಸ್ ಆಗಬೇಕು ಮತ್ತೆ 600 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಅವರು ಸಿದ್ದತೆ ಆಗುವುದಿಲ್ಲ. ಇದನ್ನು ನಾನು ಪರಿಶೀಲನೆ ಮಾಡುತ್ತೇನೆ.

4-00 ಎ.ಎಂ

ಶ್ರೀ ಸಿ.ಬೈರೇಗೌಡ: ಕೇಂದ್ರಸರ್ಕಾರ ಮತ್ತು ಬೇರೆ ಕಡೆಗೆ ನಮ್ಮಲ್ಲಿರತಕ್ಕಂಥ ವಿವರಗಳನ್ನು ಕಳಿಸಿ ಹುಡ್ಕೋದಿಂದ ಕೊಡಿಸುವುದಕ್ಕೆ ತಮ್ಮ ಎಲ್ಲ ಪ್ರಯತ್ನ ಮಾಡುತ್ತೇನೆ ಎಂದು ಹೇಳಿ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ: ಹುಡ್ಕೋದವರು ರೆಡಿ ಇದ್ದಾರೆ. ನೀವು ಸರ್ಕಾರದಿಂದ ಪ್ರಸ್ತಾವನೆಯನ್ನು ಮಾಡಿ ಅವರಿಗೆ ಕೊಡಬೇಕು ಎನ್ನುವ ತೀರ್ಮಾನಕ್ಕೆ ಬನ್ನಿ. ಅವರು ಖಂಡಿತ ಕೊಡುತ್ತಾರೆ.

ಅಧ್ಯಕ್ಷರು: ಪ್ರಾಮಾಣಿಕ ಪ್ರಯತ್ನ ಪಡುತ್ತೇನೆ ಎಂದು ಹೇಳಿದ್ದಾರಲ್ಲ?

ಶ್ರೀ ಕೆ.ಶ್ರೀನಿವಾಸಗೌಡ: ಮಾಡುತ್ತೇನೆ ಎಂದು ಹೇಳಲಿಲ್ಲ.

ಶ್ರೀ ಸಿ.ಬೈರೇಗೌಡ: ನಮಗೂ ಗೊತ್ತಿದೆ. ಈ ಭಾಷೆ ಎಲ್ಲ ಬಳಸಿ ನಾವು ಇಲ್ಲಿ ಬಂದು ಕುಳಿತಿದ್ದೇವೆ. ಆದ್ದರಿಂದ, ಈ ಭಾಷೆ ಬಳಸುವುದರಿಂದ ಕೆಲಸ ಆಗುವುದಿಲ್ಲ. ನೀವು in principle 'yes we will approach HUDCO" ಎಂದು ಅಷ್ಟು ಹೇಳಿದರೆ ಸಾಕು.

ಶ್ರೀ ಕೆ.ಶ್ರೀನಿವಾಸಗೌಡ: ಅವರನ್ನು ಅಪ್ರೋಚ್ ಮಾಡುತ್ತೇವೆ ಎಂದು ಈ ಮನೆಯಲ್ಲಿ ಇವರು ಹೇಳಲಿ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಕೇವಲ ಅಪ್ರೋಚ್ ಮಾಡುವುದರಿಂದ ಕೆಲಸ

ಆಗುವುದಿಲ್ಲ.

ಶ್ರೀ ಸಿ.ಬೈರೇಗೌಡ: ನಾವು ಏನೇನು ಕೆಲಸ ಮಾಡಬೇಕೋ ಅದನ್ನು ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು: ನಿಮ್ಮಿಬ್ಬರಿಗೆ ಅನುಮತಿ ಕೊಟ್ಟಮೇಲೆ ಎಲ್ಲರಿಗೂ ಕೊಡಬೇಕಾಗುತ್ತದೆ, ಅಲ್ವೆ?

ಶ್ರೀ ಸಿ.ಬೈರೇಗೌಡ: ಹೌದು. ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೇನೆ. ನಾನು ಮಾಡುತ್ತೇನೆ. ನನ್ನ ಇಲಾಖೆಗೆ ಕೋಲಾರ ಜಿಲ್ಲೆಗಾಗಿ ದುಡ್ಡು ಬಂದರೆ ಬಿಡಬಹುದಾ? ಆ ಸಾಧಕಬಾಧಕಗಳನ್ನು ವಿಚಾರ ಮಾಡಬೇಕಾಗುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ: ಬೇರೆ ಜಿಲ್ಲೆಗಳ ಪರಿಸ್ಥಿತಿ ಬೇರೆ. ಕೋಲಾರ ಜಿಲ್ಲೆಯ ಪರಿಸ್ಥಿತಿಯನ್ನು ಬೈರೇಗೌಡರು ಹೇಳಿದ್ದಾರೆ. ನೀರು ಎಂಟುನೂರು ಅಡಿ ಆಳಕ್ಕೆ ಹೋಗಿದೆ. ಇನ್ನುಮುಂದೆ ನಾವು ಕಾವೇರಿ, ಕೃಷ್ಣಾ ನದಿ ದಂಡೆಗಳಿಗೆ ವಲಸೆ ಹೋಗುವಂಥ ಪರಿಸ್ಥಿತಿ ಇದೆ. ಈಗಾಗಲೇ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದರು. ಇವತ್ತು ನೀರಿನ ರಿಚಾರ್ಜ್ ಮಾಡಬೇಕಾದ ಪರಿಸ್ಥಿತಿ ಬಗ್ಗೆ ವಿಶದವಾಗಿ ಹೇಳಿದ್ದಾರೆ. ಆದ್ದರಿಂದ ಮುಂದಿನ ಪೀಳಿಗೆಗೆ ಬಹಳ ತೊಂದರೆಯಾಗುತ್ತದೆ. ಇನ್ನು ಹತ್ತು-ಹದಿನೈದು ವರ್ಷಗಳಲ್ಲಿ ನಾವು ಕಾವೇರಿ ಬೇಸಿನ್‌ಗೋ, ಕೃಷ್ಣಾ ಬೇಸಿನ್‌ಗೋ ಕುಡಿಯುವ ನೀರಿಗೆ ವಲಸೆ ಹೋಗುವ ಸಂದರ್ಭ ಬರುತ್ತದೆ. ಆದ್ದರಿಂದ ಈಗಿನಿಂದಲೇ ಪ್ರಯತ್ನ ಮಾಡಬೇಕೆಂಬುದು ನಮ್ಮ ಆಗ್ರಹ.

ಅಧ್ಯಕ್ಷರು: ಪ್ರಾಮಾಣಿಕವಾಗಿ ಮಾಡುತ್ತಾರೆ ಬಿಡಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಸ್ಕೇರ್‌ಸಿಟಿಯಿಂದ ದುಡ್ಡು ಕೊಡಿ ಎಂದು ನಾವು ಈಗ ಹೇಳಿದ್ದೇವೆ. ಬೈರೇಗೌಡರಿಗೆ ಸಮಾಧಾನವಾಗಬಹುದು....

ಅಧ್ಯಕ್ಷರು: ಕೋಲಾರ ಜಿಲ್ಲೆ ಎಂದರೆ ಬೈರೇಗೌಡರಿಗೆ ಉತ್ತರ ಕೊಟ್ಟರೆ ಸಾಕಾ? ನಮ್ಮಿಬ್ಬರನ್ನು ಮರೆತಿದ್ದೀರಲ್ಲ? ಕೋಲಾರ ಜಿಲ್ಲೆ ಎಂದರೆ ಬೈರೇಗೌಡರು ಒಬ್ಬರೇನಾ ನಮ್ಮನ್ನು ಮರೆತುಬಿಟ್ಟಿದ್ದೀರಲ್ಲ.

(ಗೊಂದಲ)

ಶ್ರೀ ಸಿ.ಬೈರೇಗೌಡ: ಈ ಯೋಜನೆ ಜಾರಿಗೆ ಬಂದರೆ.......

ಶ್ರೀ ಕೆ.ಶ್ರೀನಿವಾಸಗೌಡ: ಮೊದಲಿನಿಂದಲೂ ಈ ಬಗ್ಗೆ ಚಿಂತನೆ ಮಾಡುತ್ತಾ ಬಂದಿದ್ದರೆ ಇದು ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತಿತ್ತು.

ಶ್ರೀ ಸಿ.ಬೈರೇಗೌಡ: ಈ ಯೋಜನೆ ಜಾರಿಗೆಬಂದರೆ ಮುಳಬಾಗಿಲಿಗೂ ನೀರು ಬರುತ್ತದೆ.

ಶ್ರೀ ವಿ.ಮುನಿಯಪ್ಪ: ಈ ಪರಿಸ್ಥಿತಿ ಏಕಾಏಕಿ ಉದ್ಭವಿಸಿಲ್ಲ. ಕಳೆದ ಐದಾರು ವರ್ಷಗಳಿಂದ ಈ ಪರಿಸ್ಥಿತಿ ಇದೆ. ಅವರೇ ಹೇಳಿದಹಾಗೆ 1992-93ರಲ್ಲಿ ಪ್ರಾರಂಭ ಆಗಿರತಕ್ಕಂಥ ಸ್ಕೀಮ್‌ಗಳಿಗೆ ಹಣ ಬಿಡುಗಡೆಯಾಗಿಲ್ಲ. ಅದು ಎನ್.ಆರ್.ಡಬ್ಲ್ಯೂ.ಎಸ್. ಇರಬಹುದು, ಎ.ಆರ್.ಡಬ್ಲ್ಯೂ.ಎಸ್. ಇರಬಹುದು, ಎಂ.ಡಬ್ಲ್ಯೂ.ಎಸ್. ಇರಬಹುದು ಅಲೋಕೇಶನ್ ಪ್ರಕಾರ ಹಣ ಬಿಡುಗಡೆ ಮಾಡಿದ್ದರೆ ಈ ಸಮಸ್ಯೆ ಉದ್ಭವಿಸುತ್ತಿರಲಿಲ್ಲ.

ಶ್ರೀ ಸಿ.ಬೈರೇಗೌಡ: ನಾವು ಪ್ರಸ್ತಾಪ ಮಾಡತಕ್ಕಂಥ ಯೋಜನೆ ಕಾರ್ಯಗತ ಆದರೆ ಮುಳಬಾಗಿಲಿಗೂ ನೀರು ಬರುತ್ತದೆ. ಮುಳಬಾಗಿಲು ತಾಲ್ಲೂಕಿಗೆ ನೀರು ಬರುತ್ತದೆ, ಕೆ.ಜಿ.ಎಫ್.ಗೆ, ಬಂಗಾರಪೇಟೆಗೆ ನೀರು ಬರುತ್ತದೆ, ಮಾಲೂರಿಗೂ ನೀರು ಬರುತ್ತದೆ. ಇದೆಲ್ಲ ಆದಮೇಲೆ ಕೋಲಾರಕ್ಕೆ ಬರುತ್ತದೆ ಸ್ವಾಮಿ.

ಅಧ್ಯಕ್ಷರು: ಆಯಿತು, ಸಾಕುಬಿಡಿ. ಮಾನ್ಯ ಸದಸ್ಯರು ಇದು ಕೋಲಾರದ ಗೌಡರ ಗದ್ದಲ ಎಂದು ತಿಳಿದುಕೊಂಡಾರು.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ನನ್ನ ಕೋರಿಕೆ ಎಂದರೆ ಒಂದು ದಿವಸ ವಿಶೇಷ ಚರ್ಚೆಯನ್ನು ಕೋಲಾರದ ಕುಡಿಯುವ ನೀರಿನ ಬಗ್ಗೆ ಇಟ್ಟುಬಿಡೋಣ, ಅದನ್ನು ಅವರು ಬರೆದುಕೊಡಲಿ. ಉಳಿದ ಎಲ್ಲ ಸಮಸ್ಯೆಗಳ ಬಗ್ಗೆ ಒಂದು ದಿವಸ ಚರ್ಚೆ ಮಾಡೋಣ.

ಅಧ್ಯಕ್ಷರು: ಉತ್ತರ ಹೇಳಿ.

(ಗೊಂದಲ)

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಅವರನ್ನು ಸ್ವಲ್ಪ ದಿವಸ ಹೊರಗಡೆ ಕಳಿಸಿದರೆ ಚೆನ್ನಾಗಿ ಮಳೆ ಬೀಳಬಹುದು.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಬಚ್ಚೇಗೌಡರು ಕೂಡ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಮಾನ್ಯ ಕೋಳಿವಾಡ ಅವರು ರಾಣಿಬೆನ್ನೂರಿನಲ್ಲಿನ ಯೋಜನೆ

ಆದಷ್ಟು ಬೇಗ ಕಾರ್ಯಗತವಾಗಬೇಕು, 1990ರಲ್ಲಿ ಪ್ರಾರಂಭವಾದಂಥ ಕಾಮಗಾರಿ ಆದಷ್ಟು ಶೀಘ್ರವಾಗಿ ಮುಗಿಯಬೇಕೆಂದು ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಖಚಿತವಾಗಿ ಉತ್ತರ ಕೊಡಿ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ನಿಮಗೆ ಸಂತೃಪ್ತಿ ಆಗಲಿ ಎಂದು ವಿವರವಾಗಿ ಹೇಳುವುದಕ್ಕೆ ಹೊರಟಿದ್ದೇನೆ. ಪ್ರತಿಯೊಂದು ಪಟ್ಟಣ ಬಗ್ಗೆ ಬಹಳ ವಿವರವಾಗಿ ಹೇಳುವುದಕ್ಕೆ ತೊಂದರೆಯಾಗಬಹುದು. ಎಲ್ಲ ಕುಡಿಯುವ ನೀರಿನ ಯೋಜನೆ ಬಗ್ಗೆ ಕಾಮಗಾರಿಗಳು ಶೀಘ್ರವಾಗಿ ಮುಗಿಯಬೇಕೆಂದು ಹೇಳಿದ್ದಾರೆ. ಇನ್ನೂ ಹೆಚ್ಚು ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಬೆಳಕು ಚೆಲ್ಲಿದರೆ ನಾನು ಆಗ ವಿವರವಾಗಿ ಉತ್ತರ ಕೊಡುತ್ತೇನೆ. ಆಗ ಪ್ರತಿಯೊಂದು ಪಟ್ಟಣದಲ್ಲಿ ನಡೆಯುವಂಥ ಎಲ್ಲ ಯೋಜನೆಗಳ ಬಗ್ಗೆ ವಿವರಗಳನ್ನು ಕೊಡಬಹುದು.

ಶ್ರೀ ಎ.ರಾಮದಾಸ್: ಅಧ್ಯಕ್ಷರೇ, ಇದು ಯಾವ ರೀತಿಯ ತಾರತಮ್ಯ ಎಂದು ನನಗೆ ಅರ್ಥವಾಗಲಿಲ್ಲ. ಒಂದು ಜಿಲ್ಲೆ ಬಗ್ಗೆ 12 ನಿಮಿಷ ಚರ್ಚೆಯಾಗುತ್ತದೆ. ನಾವು ಇಷ್ಟು ಹೊತ್ತು ಮಾತನಾಡಿದರೂ ಏನೂ ಹೇಳಿಲ್ಲ. ನಮ್ಮ ಜಿಲ್ಲೆಯಲ್ಲಿರುವಂಥ ವಿಷಯಗಳನ್ನು ಸದನದ ಮುಂದಿಟ್ಟಿದ್ದೇವೆ, ಅದರ ಬಗ್ಗೆ ಹೇಳಲಿಲ್ಲ. ನಾವು ಅಲ್ಲಿ ಆಗಿರತಕ್ಕಂಥ ಸಮಸ್ಯೆಗಳನ್ನು ತಮ್ಮ ಮುಂದಿಟ್ಟಿದ್ದೇವೆ. ಮೈಸೂರು ನಗರಕ್ಕೆ 28 ಎಂ.ಜಿ.ಡಿ. ನೀರು ಬರುತ್ತದೆ. ಆದರೆ ಎರಡು ದಿವಸಕ್ಕೊಮ್ಮೆ ನೀರು ಬಿಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮೈಸೂರು ಜಿಲ್ಲೆಯದ್ದು ಉತ್ತರ ಹೇಳಿ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ನಿಮ್ಮ ಎಲ್ಲ ಪ್ರಶ್ನೆಗಳಿಗೆ ಉತ್ತರ ಸಿದ್ಧವಿದೆ. ಆದರೆ ನಿಮಗೆ ತೊಂದರೆ ಆಗಬಾರದು ಎಂದು ನಾನು ಬೇಗ ಮುಗಿಸುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ರಾಮದಾಸ್ ಅವರು ಮೈಸೂರು ಪಟ್ಟಣದಲ್ಲಿ ಇರತಕ್ಕಂಥ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅಲ್ಲಿ ಈಗ 525 ಬೋರ್‌ವೆಲ್‌ಗಳನ್ನು ಹಾಕಿದ್ದು ಸುಮಾರು 80 ಬೋರ್‌ವೆಲ್‌ಗಳು ಕಲುಶಿತವಾಗಿವೆ ಎಂದು ಹೇಳಿದ್ದಾರೆ. ಆ ಬಗ್ಗೆ ವರದಿ ಸರ್ಕಾರದ ಮುಂದಿದೆ. ಆ ಕಲುಶಿತ ನೀರನ್ನು ಕುಡಿಯಬಾರದು ಎಂದು ಈಗಾಗಲೇ ಆದೇಶವನ್ನು ನಮ್ಮ ಮಂಡಳಿಯವರು ಅಲ್ಲಿ ನೀಡಿದ್ದಾರೆ. ನಾನು ಕೂಡ ಆ ರೀತಿ ತೊಂದರೆಯಾಗಲಾರದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನೊಂದು ಇಲ್ಲೀಗಲ್ ಕನೆಕ್ಷನ್ಸ್ ಬಗ್ಗೆ ಅವರು ಒತ್ತಿ ಹೇಳಿದರು. ಇದು ಇಡೀ ರಾಜ್ಯದಾದ್ಯಂತ ಇರುವ ಒಂದು ದೊಡ್ಡ ಪಿಡುಗು. ಎಲ್ಲ ಪಟ್ಟಣಗಳಲ್ಲಿ ಸುಮಾರು 10 ರಿಂದ 13 ಪರ್ಸೆಂಟ್ ಇಲ್ಲೀಗಲ್ ಕನೆಕ್ಷನ್ಸ್ ಎಲ್ಲ ಕಡೆ ಇವೆ. ಇವತ್ತು ಕುಡಿಯುವ ನೀರು

ಯೋಜನೆ ವಿಫಲವಾಗಬೇಕಾದರೆ ಇದು ಒಂದು ಬಹಳ ಮುಖ್ಯವಾಗಿರತಕ್ಕಂಥ ಕಾರಣವೆಂದು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಅದಷ್ಟು ಈ ಕನೆಕ್ಷನ್‌ಗಳನ್ನು ಅವರಿಗೆ ಏನಾದರೂ ಪೆನಾಲ್ಟಿ ಹಾಕಿ ರೆಗ್ಯುಲರೈಸ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಇದು ಮೈಸೂರು ಒಂದೇ ಅಲ್ಲ, ಇಡೀ ರಾಜ್ಯದಲ್ಲಿರುವ ಒಂದು ದೊಡ್ಡ ಪಿಡುಗು. ಇನ್ನೊಂದು ಬಹಳ ಮುಖ್ಯವಾದ ವಿಚಾರ ಎಂದರೆ ನೀರಿನ ಕಂದಾಯ ಬಾಕಿ ಬಹಳ ಇದೆಯೆಂದು ನೀವು ಹೇಳಿದ್ದೀರಿ. ಇದು ವಸೂಲಿ ಆಗಬೇಕೆಂದು ಏನು ಹೇಳಿದ್ದೀರಿ ಇದನ್ನು ಇದನ್ನು ನಾನು ಸ್ವಾಗತ ಮಾಡುತ್ತೇನೆ. ಮಾಡತಕ್ಕಂಥ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಸುಮಾರು 5 ಕೋಟಿ 20 ಲಕ್ಷ ರೂಪಾಯಿಗಳು ಎಂದು ಹೇಳಿದ್ದಾರೆ. ಅದೆ ರೀತಿ ಮೈಸೂರಿಗೆ ಎಕ್ಸ್‌ಪ್ರೆಸ್ ಫೀಡರ್ ಸ್ಟೇಶನ್ ಕೊಡಬೇಕೆಂದು ಹೇಳಿದ್ದಾರೆ. ಅದನ್ನು ಕೂಡ ಮಾಡಿಸತಕ್ಕಂಥ ವ್ಯವಸ್ಥೆಯನ್ನು ನಾನು ಮಾಡುತ್ತೇನೆ. ಹಾಗೆಯೇ ಮಾನ್ಯ ಯೋಗೀಶ್ ಭಟ್ ಅವರು ಕೆಲವು ಪ್ರದೇಶಗಳಿಗೆ ಕುಡಿಯುವ ನೀರಿನ ಯೋಜನೆ ಆಗಿಲ್ಲ ಎಂದು ಹೇಳಿದ್ದಾರೆ. ಕೆಲವು ಏರಿಯಾಗಳು, ಬಹಳ ಬಡವರು ಇರತಕ್ಕಂಥ ಕಾಲೋನಿಗಳಿಗೆ ನೀರು ಸಿಗುತ್ತಿಲ್ಲ ಎಂದು ಹೇಳಿದ್ದಾರೆ. ಆ ಪ್ರದೇಶಗಳನ್ನು ನಾನು ನೋಟ್ ಮಾಡಿಕೊಂಡಿದ್ದೇನೆ. ಆ ಪ್ರದೇಶಗಳಿಗೆ ಕೂಡ ಕುಡಿಯುವ ನೀರಿನ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಇನ್ನು ಜನರೇಟರ್ ಸೆಟ್‌ಗಳನ್ನು ಇಟ್ಟುಕೊಳ್ಳಬೇಕೆಂದು ಹೇಳಿದ್ದಾರೆ. ಇದು ಬಹಳ ಎಕನಾಮಿಕಲ್ ಆಗಲಿಕ್ಕಿಲ್ಲ. ಇದಕ್ಕೆ ಐದುಕೋಟಿ-ಹತ್ತು ಕೋಟಿ ರೂಪಾಯಿ ಬೀಳಬಹುದು. ವಯಬಿಲಿಟಿ ಮತ್ತು ಫೀಸಿಬಿಲಿಟಿಯನ್ನು ನೋಡಿಕೊಂಡು ಅದನ್ನು ಮಾಡುವ ಕೆಲಸವನ್ನು ನಾವು ಮಾಡುತ್ತೇವೆ. ಇನ್ನು ಮಾನ್ಯ ಪಾಪಣ್ಣನವರು ಬಿಜಾಪುರ ನಗರದ ಬಗ್ಗೆ ಹೇಳಿದ್ದಾರೆ.

ಶ್ರೀ ಶಿವಾನಂದ ಪಾಟೀಲ್: ಎರಡು ವರ್ಷಗಳಿಂದ ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ನಿಮ್ಮ ಪಕ್ಷದ ಶಾಸಕರು ಬಿಜಾಪುರದ ಶಾಸಕರು. ನೀರು ಸಲುವಾಗಿ ಏನು ಮಾಡಿದ್ದಾರೆ. ಎಂದು ಅವರನ್ನೇ ಕೇಳಿ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಅವರದ್ದು ಡಿಸ್ಟ್ರಿಬ್ಯೂಶನ್ ಸಿಸ್ಟಮ್‌ಗೆ 21 ಕೋಟಿ ರೂಪಾಯಿಯ ಕೆಲಸ ಇದೆ. ಆ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಯಾವುದಾದರೂ ಒಂದು ವಿಧದಲ್ಲಿ ನಾವು ಮಾಡುತ್ತೇವೆ....

ಶ್ರೀ ಶಿವಾನಂದ ಪಾಟೀಲ್: ಈ ವರ್ಷ ಮಾಡುತ್ತೀರಾ?

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾಡುತ್ತೇವೆ. ಮತ್ತು ಪಾಪಣ್ಣನವರು ಕುಡಿಯುವ ನೀರಿನ ವ್ಯವಸ್ಥೆಗೆ ಲಕ್ಷ್ಮಣತೀರ್ಥ ನದಿ ನೀರು ಕೊಡಬೇಕೆಂದು ಹೇಳಿದ್ದಾರೆ. ಮೊದಲು ಯೋಜನೆ ಮಾಡಿದ್ದರು. ಆದರೆ,

ಶ್ರೀ ಪಿ.ಪಾಪಣ್ಣ: ಲಕ್ಷ್ಮಣತೀರ್ಥ ನದಿಯ ನೀರು ಕುಡಿಯುವುದಕ್ಕೆ ಯೋಗ್ಯವಿಲ್ಲವೆಂದು ಸರ್ಕಾರ ವರದಿ ಕೊಟ್ಟಿದೆ. ಅದಕ್ಕೋಸ್ಕರ ಜನರು ಆ ನೀರನ್ನು ಕುಡಿಯುತ್ತಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಮೇಲ್ಗಡೆ ಬ್ಯಾರೇಜ್ ಕಟ್ಟಿದ್ದಾರಂತೆ. ಬ್ಯಾರೇಜ್ ಕಟ್ಟಿ ನೀರು ಕೊಡುತ್ತಿದ್ದಾರೆ....

ಶ್ರೀ ಸಿ.ಬೈರೇಗೌಡ: ಆ ವಿಚಾರ ನನಗೆ ಗೊತ್ತಿರುವುದರಿಂದ ನಾನು ಹೇಳುತ್ತೇನೆ. ಯಾವತ್ತೂ ಕೂಡ ಹುಣಸೂರಿನಲ್ಲಿ ಏನು ಆಗುತ್ತದೆ ಎಂದರೆ ಇಡೀ ರಾಜ್ಯದಲ್ಲಿ ಕಾಲರಾ ಇಲ್ಲದಿದ್ದರೆ ಹುಣಸೂರಿನಲ್ಲಿ ಕಾಲರಾ ಇರುತ್ತದೆ. ಇದಕ್ಕೆ ಕಾರಣ ಏನೆಂದರೆ ನಾನು ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನ ಅಧ್ಯಕ್ಷನಾಗಿ ಕೆಲಸ ಮಾಡಿರುವುದರಿಂದ ಇದು ನನಗೆ ಗೊತ್ತಿದೆ. ಅಲ್ಲಿ ಏನಾಗುತ್ತಿದೆ ಎಂದರೆ ಅಲ್ಲಿರತಕ್ಕಂಥ ಸೀವರೇಜ್ ಎಲ್ಲವನ್ನೂ ಲಕ್ಷ್ಮಣತೀರ್ಥ ನದಿಗೆ ಬಿಡುತ್ತಿದ್ದಾರೆ.

ಆ ಲಕ್ಷ್ಮಣ ತೀರ್ಥ ನದಿಗೆ ಬಿಟ್ಟಿರುವ ಕಾರಣದಿಂದ ಯಾವತ್ತೂ ಆ ನೀರು ಕಲುಷಿತವಾಗುತ್ತದೆ. ಅದಕ್ಕೋಸ್ಕರವಾಗಿ ಆ ಹುಣಸೂರು ಪಟ್ಟಣಕ್ಕಿಂತ ಮೇಲೆಯೇ ಒಂದು ಬ್ಯಾರೇಜನ್ನು ಕಟ್ಟಿ, ಕೆಳಗಡೆ ಇರತಕ್ಕ ನೀರನ್ನು ನದಿಯಲ್ಲಿ ಕಲುಷಿತವಾಗದ ಹಾಗೆ ಮಾಡಬೇಕೆಂಬ ಒಂದು ಯೋಜನೆ ಇತ್ತು. ಅದು ಈಗ ಯಾವ ಮಟ್ಟದಲ್ಲಿದೆ ಎಂಬುದು ಗೊತ್ತಿಲ್ಲ. ಹುಣಸೂರಿನಲ್ಲಿ ಸಮಸ್ಯೆ ಭೀಕರವಾಗಿರುವುದು ನಿಜ. ಇಡೀ ರಾಜ್ಯದಲ್ಲೇ ಕಾಲರ ಇಲ್ಲದೇ ಇದ್ದರೂ, ಅಲ್ಲಿ ಮಾತ್ರ ಕಾಲರ ಇರುತ್ತದೆ. ಇದನ್ನು ತೀವ್ರವಾಗಿ ಗಮನಕ್ಕೆ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ತಾವು ಹೇಳಿದ ಯೋಜನೆ ಸುಮಾರು ಒಂದು ಸಾವಿರದ ಮುನ್ನೂರ ಐವತ್ತು ಲಕ್ಷ ರೂಪಾಯಿಗಳ ಯೋಜನೆ. ಆ ಮುನಿಸಿಪಾಲಿಟಿಯವರು ಈ ಯೋಜನೆ ಬೇಡ ಎಂದು ವಿರೋಧ ಮಾಡಿದ್ದಾರೆ.

ಶ್ರೀ ಪಿ.ಪಾಪಣ್ಣ: ಮುನಿಸಿಪಾಲಿಟಿಯವರು ಸತ್ತು ಹೋಗಿದ್ದಾರೆ. ಮುನಿಸಿಪಾಲಿಟಿಯವರಿಗೆ ಕುಡಿಯುವುದಕ್ಕೆ ಒಳ್ಳೆಯ ನೀರು ಬೇಕಾಗಿಲ್ಲ. ಏಕೆಂದರೆ, ಅವರ ಹತ್ತಿರ ಹಣ ಇಲ್ಲ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಅವರ ತೊಂದರೆಯನ್ನು ತೀವ್ರಗತಿಯಿಂದ ಪರಿಹಾರ ಮಾಡುತ್ತೇವೆ.

ಶ್ರೀ ಪಿ.ಪಾಪಣ್ಣ: ಒಳ್ಳೆಯ ನೀರು ಕೊಡುವುದಕ್ಕೆ, ಸರ್ಕಾರಕ್ಕೆ ವರದಿ ಕೊಟ್ಟು 5 ವರ್ಷಗಳು ಆಗಿದೆ.

ಶ್ರೀ ಮಹದೇವಪ್ರಸಾದ್: ನಮ್ಮ ಗುಂಡ್ಲುಪೇಟೆ ಸ್ಕೀಮ್ ಕೂಡ ಕಳೆದ 6 ತಿಂಗಳಿಂದ ನಿಂತು ಹೋಗಿದೆ.

ಶ್ರೀ ವಿ.ಪಾಪಣ್ಣ: ಮಾನ್ಯ ದೇವರಾಜ ಅರಸುವರು ಆ ಜಾಗದಲ್ಲಿ ಮುಖ್ಯಮಂತ್ರಿಯಾಗಿದ್ದರು. ಆ ಕಾಲದಿಂದ, ನಮ್ಮ ಭಾಗದಲ್ಲಿ ಕಾಲರ ತಪ್ಪಿಲ್ಲ. ಈ ರಾಜ್ಯದಲ್ಲಿಯೇ ಕಾಲರ ನಮ್ಮಲ್ಲಿ ಮೊದಲನೆಯದು. ಹಿರಿಯ ಸದಸ್ಯರಾದ ಶ್ರೀಮಾನ್ ಬೈರೇಗೌಡರು ಹೇಳಿದಹಾಗೆ, ಇವತ್ತು ಕಾಲರ ಅಲ್ಲಿದೆ. ಈಗ ಒಂದು ವಾರದ ಹಿಂದೆ, ಸದನದಲ್ಲಿ ನಮಗೆ ವರದಿ ಮಾಡಿ ಕೊಟ್ಟಿದ್ದಾರೆ. ಆ ನೀರು ಕುಡಿಯಲು ಯೋಗ್ಯವಲ್ಲವೆಂದು ತೀರ್ಮಾನ ಮಾಡಿ, ಸರ್ಕಾರವೇ ಪಟ್ಟಿ ಕೊಟ್ಟಿದೆ. ನೀವೇ ಕಳೆದ ಒಂದು ವಾರದಲ್ಲಿ, ಲಕ್ಷ್ಮಣತೀರ್ಥ ನೀರು ಕುಡಿಯುವುದಕ್ಕೆ ಯೋಗ್ಯವಲ್ಲವೆಂದು ವರದಿ ಕೊಟ್ಟಿದ್ದೀರಿ. ದಯವಿಟ್ಟು ಯೋಗ್ಯವಾದ ನೀರಿನ ವ್ಯವಸ್ಥೆಯನ್ನು ಮಾಡಿಕೊಡಿ. ಈ ಆಯವ್ಯಯದಲ್ಲಿಯೇ ಸೇರಿಸಿ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಅದಕ್ಕೆ ಎಸ್ಟಿಮೇಟ್ ಮಾಡಬೇಕು, ಪ್ರಪೋಸಲ್ಸ್ ತರಿಸಬೇಕು. ಆ ವರದಿ ಬೋರ್ಡಿಗೆ ಬಂದರೂ, ನಮ್ಮ ಸರ್ಕಾರಕ್ಕೆ ಬರಬೇಕಲ್ಲ. ಅದನ್ನು ಪರಿಶೀಲನೆ ಮಾಡಿ, ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳುತ್ತೇವೆ. ಅದೇರೀತಿ ಪಿರಿಯಾಪಟ್ಟಣದ ಬಗ್ಗೆ ಮಾನ್ಯ ಬಸವರಾಜುರವರು ಕೂಡ ಹೇಳಿದ್ದಾರೆ. 1998ರಲ್ಲಿ ಸುಮಾರು 4 ಕೋಟಿ ರೂಪಾಯಿಗಳಿಗೆ ಕೈಗೊಂಡಿರತಕ್ಕ ಕಾಮಗಾರಿ ಇನ್ನೂ ಕೂಡ ಮುಗಿಯಲಿಲ್ಲವೆಂದು ಹೇಳಿದ್ದಾರೆ. ಅದನ್ನೂ 2001ನೇ ಇಸವಿಗೆ ಮುಗಿಸತಕ್ಕ ಕ್ರಮವನ್ನೂ ಕೂಡ ಕೈಗೊಂಡಿದ್ದೇವೆ. ಸಾಧ್ಯವಿದ್ದಷ್ಟು ಪಟ್ಟಣಗಳಿಗೆ ಬಹುತೇಕ ಎಲ್ಲಾ ಸದಸ್ಯರುಗಳಿಗೆ ಯೋಜನೆಗಳು ಕಾರ್ಯಗತ ಆಗಬೇಕು.

ಶ್ರೀ ಕರಡಿ ಸಂಗಣ್ಣ: ಕೊಪ್ಪಳ ಪಟ್ಟಣದ ವಿಚಾರವಾಗಿಯೂ ಕೇಳಿದ್ದೇವೆ, ಅದರ ಬಗ್ಗೆಯೂ ಹೇಳಬೇಕು.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ತಾವು ಇರಲಿಲ್ಲ, ನಾನು ಮೊದಲೇ ಹೇಳಿದ್ದೇನೆ. ಈ ದೃಷ್ಟಿಯಿಂದ ಸರ್ಕಾರವು ಕೂಡ ಬಹಳ ತೀವ್ರಗತಿಯಿಂದ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಇರಬಹುದು, ನಗರಾಭಿವೃದ್ಧಿ ಸಚಿವರು ಇರಬಹುದು. ಕಳೆದ 2-3 ತಿಂಗಳಿಂದ ನೀರಿನ ಹಾಹಾಕಾರ ಎದ್ದಿದೆ. ಈ ವಿಷಯವಾಗಿ ರಾಜ್ಯ ಘೋರ ರೀತಿಯಿಂದ, ಗಂಬೀರ ಪರಿಸ್ಥಿತಿಯನ್ನು ಎದುರಿಸುತ್ತದೆಂದು ಹೇಳಿದ್ದೆವು. ನಾವು ಕೆಲವೊಂದು ನಿರ್ದಿಷ್ಟ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೆವು. ಇವುಗಳ ಬಗ್ಗೆ ಸರ್ಕಾರ ಬಹಳ ನಿರ್ಲಕ್ಷ್ಯ ಭಾವನೆಯನ್ನು ತೋರಿಸಿರುತ್ತದೆ. ಕುಡಿಯುವ ನೀರಿನ

ಅವಶ್ಯಕತೆಯನ್ನು ಸರ್ಕಾರ ಸೀರಿಯಸ್ಸಾಗಿ ತೆಗೆದುಕೊಳ್ಳಲಿಲ್ಲವೆಂಬ ವಿಷಯ. ಆಗಲೇ ನಮ್ಮ ಬೀದರ್ ಜಿಲ್ಲೆಯ ಔರಾದ್ ಶಾಸಕರು 22 ಗ್ರಾಮಗಳ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದರು. ಅದಕ್ಕೆ ಸರ್ಕಾರದವರು ತಕ್ಷಣ ಏನಾದರೊಂದು ಅಭಿಪ್ರಾಯವನ್ನು ಹೇಳಬೇಕಾಗಿತ್ತು. ಇಂತಹ ನಿರ್ದಿಷ್ಟ ವಿಷಯಗಳಿಗೂ ಉತ್ತರ ಹೇಳಲಿಲ್ಲ. ಕೋಲಾರದ ಬಗ್ಗೆ ಹುಡ್ಕೋಕ್ಕೆ ರೆಫರ್ ಮಾಡುವಾಂತಾದ್ದು. ಇಂಥಾದ್ದು ಸ್ಪೆಸಿಫಿಕ್ ಆಗಿ ಎಲ್ಲಿ ಅರ್ಜೆಂಟ್ ಇದೆ, ಎಲ್ಲಿ ನೆಸೆಸಿಟಿ ಇದೆ ಅಂತಹ ಸ್ಥಳಗಳ ಬಗ್ಗೆ ಏನನ್ನೂ ಹೇಳಲಿಲ್ಲ. ಆಮೇಲೆ ನಮ್ಮ ರೇವುನಾಯಕರು ಕಮಲಾಪುರದ ವಿಷಯ ಹೇಳಿದರು. ಹೀಗೆ ನಿರ್ದಿಷ್ಟವಾಗಿ ಹೇಳಿದಂಥ ವಿಷಯಗಳಿಗೆ ಸ್ಪೆಸಿಫಿಕ್ ಉತ್ತರವನ್ನು ಕೊಡಲಿಲ್ಲ. ಆದ್ದರಿಂದ ಸರ್ಕಾರಕ್ಕೆ ಇದರ ಬಗ್ಗೆ ಯಾವುದೇ ಒಂದು ಸೀರಿಯಸ್‌ನೆಸ್ ಇಲ್ಲ, ಯಾವುದೇ ಒಂದು ಗಂಭೀರತೆ ಇಲ್ಲ. ಇವತ್ತು ಸರ್ಕಾರ, ಜನತೆಯನ್ನು ನಿರ್ಲಕ್ಷ್ಯ ಮಾಡುತ್ತಿದೆ. ಈ ಕುಡಿಯುವ ನೀರಿನ ಸಮಸ್ಯೆಗೆ ಏನೂ ಪರಿಹಾರವನ್ನು ಕೊಡುತ್ತಾ ಇಲ್ಲ. ಅದಕ್ಕಾಗಿ ನಾವು ಇದನ್ನು ಪ್ರತಿಭಟಿಸುತ್ತಿದ್ದೇವೆ. 22 ಹಳ್ಳಿಗಳಿಗೆ ಟ್ಯಾಂಕರುಗಳ ಮುಖಾಂತರ ನೀರನ್ನು ಕೊಡಿ ಎಂದು ಹೇಳಿದರೂ, ಅದನ್ನೂ ಕೂಡ ವ್ಯವಸ್ಥೆ ಮಾಡುತ್ತಾ ಇಲ್ಲ. ಅದಕ್ಕಾಗಿ ಸರ್ಕಾರದ ಈ ನಿರ್ಲಕ್ಷ್ಯ ನೀತಿಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತಲ್ಲಿ ಬಿ.ಜೆ.ಪಿ. ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಬಿ.ಸೋಮಶೇಖರ್: ಮಾನ್ಯ ಸಭಾಧ್ಯಕ್ಷರೇ, ನಮ್ಮ ಮಳವಳ್ಳಿ ಯೋಜನೆ ಪ್ರಾಥಮಿಕ ಹಂತದಲ್ಲಿ ಸುಮಾರು ಎರಡೂವರೆ ಕೋಟಿ ರೂಪಾಯಿಗಳಿಗೆ 1994ರಲ್ಲಿ ಮಂಜೂರಾತಿಯಾಯಿತು. ಇವತ್ತು 6 ಕೋಟಿ ರೂಪಾಯಿಗಳಿಗೆ ಪರಿಷ್ಕರಣೆಯಾಗಿದೆ. ಒಂದಲ್ಲ ಒಂದು ಕಾರಣದಿಂದ ಮುಂದಕ್ಕೆ ಹೋಗುತ್ತಿದೆ. ನಿಜವಾಗಿಯೂ ಏನು ಕಾರಣ ಇದೆಯೆಂಬುದನ್ನು ನೋಡಿ, ಎಷ್ಟು ಬೇಗ ಮಾಡುತ್ತೀರಿ ಎಂಬದನ್ನು ಹೇಳಬೇಕು. ನಾನು ಎಷ್ಟೇ ಪ್ರಯತ್ನ ಮಾಡಿದರೂ ಬಹಳ ವಿಳಂಬವಾಗುತ್ತಿದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಸುಮಾರು 4 ಕೋಟಿ ರೂಪಾಯಿಗಳಿಗೆ ಮಂಜೂರಾಗಿರತಕ್ಕ ಮಳವಳ್ಳಿ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಅಂದರೆ, 2001ನೇ ಮಾರ್ಚಿಯೊಳಗಾಗಿ ಮುಗಿಸತಕ್ಕ ಕಾರ್ಯಕ್ರಮ ಮಾಡುತ್ತೇವೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ನಿನ್ನೆ ಮಾತನಾಡುವಾಗ 210 ಪಟ್ಟಣ ಪ್ರದೇಶಗಳಿಗೆ ಕೊಳವೆ ಬಾವಿಗಳಿಗೆ ಹ್ಯಾಂಡ್‌ಪಂಪ್ ಹಾಕುವುದಕ್ಕೆ 5 ಅಥವಾ 10 ಮಂಜೂರಾತಿ ಮಾಡಿದರೆ, ಬೇಸಿಗೆ ಸಮಯದಲ್ಲಿ ನೀರಿನ ಅಭಾವ ಕಡಿಮೆಯಾಗುತ್ತದೆಂದು ಹೇಳಿದ್ದೆ. ಅದರ ಬಗ್ಗೆ ಮಾನ್ಯ ಸಚಿವರು ಏನೂ ಉತ್ತರ ಕೊಡಲಿಲ್ಲ. ಜೊತೆಗೆ, ಸಿ.ಆರ್.ಎಫ್.ನಲ್ಲಿ ಬಂದಂಥ ಹಣವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಕೊಟ್ಟಿದ್ದಾರೆ. ಇದನ್ನು ಮಾನ್ಯ ಕಂದಾಯ ಸಚಿವರು ಗಮನಿಸಬೇಕು.

ನಮ್ಮ ಜಿಲ್ಲೆಯಲ್ಲೂ 8 ತಾಲ್ಲೂಕುಗಳಲ್ಲಿ ಬಹಳಷ್ಟು ಬರ ಇದೆ, ಕ್ಷಾಮ ಇದೆ, ನೀರಿನ ಅಭಾವ ಇದೆ. ಇದಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಿದ್ದಾರೆಯೇ ಎಂಬ ಬಗ್ಗೆ ಮಾಹಿತಿ ಇಲ್ಲ. ದಯಮಾಡಿ, ಕಂದಾಯ ಸಚಿವರು ಅದರ ಬಗ್ಗೆ ತಿಳಿಸಬೇಕು.

ಶ್ರೀ ಹಂಪನಗೌಡ ಬಾದರ್ಲಿ: ಮಾನ್ಯ ಅಧ್ಯಕ್ಷರೇ, ನನ್ನ ಸಿಂಧನೂರು ಕ್ಷೇತ್ರದಲ್ಲಿಯೂ ಕೂಡ. ಶುದ್ಧವಾದ ಕುಡಿಯುವ ನೀರಿನ ಯೋಜನೆಯನ್ನು ಇನ್ನೂ ಪೂರ್ಣಗೊಳಿಸಿರುವುದಿಲ್ಲ. ಈ ರೀತಿ ಅಪೂರ್ಣವಾದ ಕೆಲಸವನ್ನು ಪೂರ್ಣಮಾಡಬೇಕು. ಸುಮಾರು 9 ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಖರ್ಚುಮಾಡಲಾಗಿದೆ. ಆದರೂ 26-28ನೇ ವಾರ್ಡಿಗೆ ಇವತ್ತು ನೀರು ಕೊಡುತ್ತಾ ಇಲ್ಲ. ಆ ಎಸ್ಟಿಮೇಟ್‌ನಲ್ಲಿ ಡಿಸ್ಟ್ರಿಬ್ಯೂಷನ್ ಲೈನ್ ಬಗ್ಗೆ ಇನ್‌ಕ್ಲೂಡ್ ಆಗಿಲ್ಲ. ಅದಕ್ಕಾಗಿ 40 ಲಕ್ಷ ರೂಪಾಯಿಗಳ ಅಂದಾಜುಪಟ್ಟಿ ಕಳುಹಿಸಿದ್ದೆ. ದಯವಿಟ್ಟು ಸರ್ಕಾರ ಇದಕ್ಕೆ ಒಪ್ಪಿಗೆ ನೀಡಿ, ಆ ಕೆಲಸವನ್ನು ತೀವ್ರಗತಿಯಲ್ಲಿ ಮಾಡಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಅಮರೇಗೌಡ: ಅಧ್ಯಕ್ಷರೇ, ನಾನು ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಸರಿಯಾದ ಉತ್ತರ ಬಂದಿಲ್ಲ. ಈ ಬೋರ್‌ವೆಲ್ ನಿರ್ವಹಣೆ ಮತ್ತು ಕಿರು ನೀರು ಸರಬರಾಜು ಯೋಜನೆ ಮತ್ತು ಕೊಳಾಯಿ ಮೂಲಕ ಸರಬರಾಜು ಮಾಡತಕ್ಕ ಕುಡಿಯುವ ನೀರಿನ ಯೋಜನೆಗಳ ಬಗ್ಗೆ ನಿರ್ವಹಣೆ ಮಾಡತಕ್ಕ ಯೋಜನೆ ಏನಿದೆ, ಇದನ್ನು ಕೆಲವೊಂದು ಕಡೆ ಗ್ರಾಮ ಪಂಚಾಯ್ತಿ, ಕೆಲವೊಂದು ಕಡೆ ತಾಲ್ಲೂಕು ಪಂಚಾಯ್ತಿ, ಮತ್ತೆ ಕೆಲವೊಂದು ಕಡೆ ಜಿಲ್ಲಾ ಪಂಚಾಯ್ತಿಯವರು ನಿರ್ವಹಣೆ ಮಾಡುತ್ತಿದ್ದಾರೆ. ಇದನ್ನು ಎಲ್ಲಾ ಕಡೆಯಲ್ಲೂ ಜಿಲ್ಲಾ ಪಂಚಾಯ್ತಿಯಿಂದಲೇ ಮಾಡಬೇಕೆಂದು ಹೇಳಿದ್ದೆ.

ಅಧ್ಯಕ್ಷರು: ಮಾನ್ಯ ಘೋರ್ಪಡೆಯವರುತ್ತರ ಬೆಳಿಗ್ಗೆಯೇ ಮುಗಿದುಹೋಯಿತು. ನೀವು ಈಗ ಆ ಪ್ರಶ್ನೆ ಎತ್ತಿದರೆ ಹೇಗೆ?

ಶ್ರೀ ಅಮರೇಗೌಡ: ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ತರಹ ಇದೆ. ಅವರ ಜಿಲ್ಲೆಯಲ್ಲಿ ಯಾವರೀತಿ ಇದೆಯೆಂದು ಹೇಳಲಿ. ಬಳ್ಳಾರಿ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯ್ತಿಯಿಂದ ಮಾಡುತ್ತಾರೆ. ಕೊಪ್ಪಳ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯ್ತಿಯವರು ಮಾಡುತ್ತಾರೆ ಮತ್ತೆ ರಾಯಚೂರು ಜಿಲ್ಲೆಯಲ್ಲಿ ತಾಲ್ಲೂಕು ಪಂಚಾಯ್ತಿಯವರು ಮಾಡುತ್ತಾರೆ. ಆದಕಾರಣ ನಿರ್ವಹಣೆ ಬಗ್ಗೆ ಏಕರೂಪದ ನೀತಿಯನ್ನು ಅವರು ಮಾಡಬೇಕು. ಜಿಲ್ಲಾ ಪಂಚಾಯ್ತಿಯಿಂದಲೇ ಆ ನಿರ್ವಹಣೆ ಆಗಬೇಕೆಂಬ ಬೇಡಿಕೆಯನ್ನು ನಾನು ಮಂಡಿಸುತ್ತೇನೆ.

ಅಧ್ಯಕ್ಷರು: ಕಂದಾಯ ಇಲಾಖೆ ವತಿಯಿಂದ ಕುಡಿಯುವ ನೀರಿನ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ, ಅಷ್ಟು ಮಾತ್ರ ಹೇಳಿ.

+ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಯಾವ ಯಾವ ಜಿಲ್ಲೆಗಳಲ್ಲಿ ಅಭಾವ ಕಂಡುಬಂದಿದೆ, ಅಂತಹ ಜಿಲ್ಲೆಗಳಿಗೆ, ಜಿಲ್ಲಾಧಿಕಾರಿಗಳ ವರದಿ ಮೇಲೆ, ಸರ್ಕಾರ ಹಣವನ್ನು ಎಲ್ಲಾ ಜಿಲ್ಲೆಗಳಿಗೂ ಒದಗಿಸಿದೆ. ಸನ್ಮಾನ್ಯ ಬಚ್ಚೇಗೌಡರು ಹೇಳಿದಹಾಗೆ, ಬೆಂಗಳೂರು ರೂರಲ್‌ಗೆ ಹಣ ಇವತ್ತಿನವರೆಗೆ ಕೊಟ್ಟಿಲ್ಲ, ಇನ್ನು ಮುಂದೆ ಕೊಡುತ್ತೇವೆ. ಅವರಿಗೆ, ಆಗ ಅಷ್ಟು ಅಭಾವ ಪರಿಸ್ಥಿತಿ ಬಂದಿರಲಿಲ್ಲ. ಜಿಲ್ಲಾಧಿಕಾರಿಗಳಿಂದಲೂ ಸಾಕಷ್ಟು ಒತ್ತಾಯ ಬಂದಿರಲಿಲ್ಲ. ನಾವು ಬಿಡುಗಡೆ ಮಾಡಿರತಕ್ಕ ಹಣದ ಪಟ್ಟಿಯನ್ನು ಸಭೆಯ ಮುಂದಿಡುತ್ತಿದ್ದೇನೆ. ಕೋಲಾರ 400 ಲಕ್ಷ ರೂಪಾಯಿಗಳು, ತುಮಕೂರು 100 ಲಕ್ಷ ರೂಪಾಯಿಗಳು, ಚಿತ್ರದುರ್ಗ 100 ಲಕ್ಷ ರೂಪಾಯಿಗಳು, ದಾವಣಗೆರೆ 75 ಲಕ್ಷ ರೂಪಾಯಿಗಳು, ಹಾಸನ 25 ಲಕ್ಷ ರೂಪಾಯಿಗಳು, ದಕ್ಷಿಣ ಕನ್ನಡ 50 ಲಕ್ಷ ರೂಪಾಯಿಗಳು, ಗುಲ್ಬರ್ಗಾ 100 ಲಕ್ಷ ರೂಪಾಯಿಗಳು, ಬೀದರ್ 45 ಲಕ್ಷ ರೂಪಾಯಿಗಳು, ರಾಯಚೂರು 50 ಲಕ್ಷ ರೂಪಾಯಿಗಳು, ಕೊಪ್ಪಳ 150 ಲಕ್ಷ ರೂಪಾಯಿಗಳು, ಬೆಳಗಾಂ 180 ಲಕ್ಷ ರೂಪಾಯಿಗಳು, ಬಾಗಲಕೋಟೆ 50 ಲಕ್ಷ ರೂಪಾಯಿಗಳು, ಧಾರವಾಡ 25 ಲಕ್ಷ ರೂಪಾಯಿಗಳು, ಗದಗ್ 100 ಲಕ್ಷ ರೂಪಾಯಿಗಳು, ಹಾವೇರಿ 75 ಲಕ್ಷ ರೂಪಾಯಿಗಳು, ಉತ್ತರ ಕನ್ನಡ 50 ಲಕ್ಷ ರೂಪಾಯಿಗಳು ಹೀಗೆ 1575 ಲಕ್ಷ ರೂಪಾಯಿಗಳು, ಎರಡನೇ ಬಾರಿ ರಾಯಚೂರು ಜಿಲ್ಲೆಗೆ ಪುನಃ 50 ಲಕ್ಷ ರೂಪಾಯಿಗಳು, ಬಳ್ಳಾರಿಗೆ 50 ಲಕ್ಷ ರೂಪಾಯಿಗಳು, ಹಾಸನ 20 ಲಕ್ಷ ರೂಪಾಯಿಗಳು, ಚಾಮರಾಜನಗರ 20 ಲಕ್ಷ ರೂಪಾಯಿಗಳು, ಬೆಳಗಾಂಗೆ 69.87 ಲಕ್ಷ ರೂಪಾಯಿಗಳು, ಬಿಜಾಪುರಕ್ಕೆ 50 ಲಕ್ಷ ರೂಪಾಯಿಗಳು, ಮೈಸೂರು 50 ಲಕ್ಷ ರೂಪಾಯಿಗಳು, ಉಡುಪಿ 30 ಲಕ್ಷ ರೂಪಾಯಿಗಳು, ಬಾಗಲಕೋಟೆ 30 ಲಕ್ಷ ರೂಪಾಯಿಗಳು, ಕಾರವಾರ 25 ಲಕ್ಷ ರೂಪಾಯಿಗಳು, ತುಮಕೂರು 25 ಲಕ್ಷ ರೂಪಾಯಿಗಳು, ಗುಲ್ಬರ್ಗಾ 50 ಲಕ್ಷ ರೂಪಾಯಿಗಳು, ಒಟ್ಟು 469.87 ಲಕ್ಷ ರೂಪಾಯಿಗಳು, ಹೀಗೆ ಕಳೆದ ಏಪ್ರಿಲ್ ತಿಂಗಳಿಂದ ಈತನಕ ಒಟ್ಟು 2,044.87 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ನಮಗೆ ಕೇಂದ್ರದಿಂದ ಬರಬೇಕಾದ ಹಣ ಇನ್ನೂ ಸಾಕಷ್ಟು ಬಂದಿಲ್ಲ. ಮೊದಲ ಬಾರಿಗೆ ಸುಮಾರು 30 ಕೋಟಿ ರೂಪಾಯಿಗಳನ್ನು ಅವರು ಕೊಟ್ಟರು, ಪುನಃ 13 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ, ಅದೂ ಸಹ ನಮಗೆ ಇನ್ನೂ ಬಂದಿಲ್ಲ. ಬಂದಮೇಲೆ, ಆ ಹಣ ಬರಲಿ ಬಾರದೇ ಹೋಗಲಿ ಈ ತಿಂಗಳು ಆದಷ್ಟು ಬೇಗ ಬೆಂಗಳೂರು ರೂರಲ್ ಜಿಲ್ಲೆಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ.

ಅಧ್ಯಕ್ಷರು: ತಾವು ಡೆಲ್ಲಿಗೆ ಹೋಗಿ ಕೇಳಿದರೆ ಕೊಡುವುದು.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ನಾವು ಡೆಲ್ಲಿಗೆ ಹೋಗಿ ಸೆಕ್ರೆಟರಿಯನ್ನು ಕಂಡು ಬಂದಿದ್ದೇವೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, 1999-2000 ವರ್ಷದ್ದು ಮಾರ್ಚಿಗೆ ಮುಗಿದಿದೆ. 48 ಕೋಟಿ ರೂಪಾಯಿಗಳು ಆನ್ಯುಯಲ್ ಅಲೋಕೇಶನ್ ಆಫ್ ಅಂಡರ್ ಸಿ.ಆರ್.ಎಫ್. ಆ ದುಡ್ಡು ಸಂಪೂರ್ಣವಾಗಿ ಬಂದಿದೆಯೇ? ಈ ವರ್ಷದ ಹಣಕಾಸಿನ ವರ್ಷ ಮುಗಿದಿದೆ. ಈ ಫೈನಾನ್ಷಿಯಲ್ ಇಯರ್ ಮುಗಿದು ಒಂದು ತಿಂಗಳು ಆಯಿತು. ಹೋದ ವರ್ಷದ ಹಣವೇ ಬಂದಿಲ್ಲವೆಂದರೆ ಹೇಗೆ? ಹೊಸ ಫೈನಾನ್ಷಿಯಲ್ ಇಯರ್ ಈಗಾಗಲೇ ಶುರುವಾಗಿದೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ನಿನ್ನೆ ನಮಗೆ ಬಂದಿರುವ ಇನ್‌ಫರ್‌ಮೇಷನ್ನಿನ ಪ್ರಕಾರ 13 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಹಣ ಇನ್ನೂ ಬಂದಿಲ್ಲ.

ಶ್ರೀ ಬಿ.ಸೋಮಶೇಖರ್: 13 ಕೋಟಿ ಹಿಂದಿನ ವರ್ಷದ್ದೋ ಅಥವಾ ಈ ವರ್ಷದ್ದೋ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಹೋದವರ್ಷ ಬಂದಿರತಕ್ಕಂಥಾದ್ದು ಈ ವರ್ಷಕ್ಕೆ ಅಲ್ಲ. ನಾವು ಡೆಲ್ಲಿಗೆ ಹೋಗಿ ಅಲ್ಲಿನ ಸೆಕ್ರೆಟರಿಗಳನ್ನು ಕಂಡು ಬಂದಮೇಲೆ, ಅವರು ಪರಿಸ್ಥಿತಿಯನ್ನು ಅವಲೋಕಿಸಲು ಕಮಿಟಿಯನ್ನು ಕಳುಹಿಸಿಕೊಟ್ಟರು. ಅವರು ಬಂದು ಇಲ್ಲಿ ನೋಡಿ ಆಮೇಲೆ ಕೇವಲ 17 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು. ಅದೇ ಮೊದಲನೆಯ ಕಂತು.

ಶ್ರೀ ಬಿ. ಸೋಮಶೇಖರ್: ಆ 17 ಕೋಟಿ ರೂಪಾಯಿಗಳು ಆನ್ಯುಯಲ್ ಅಲೋಕೇಶನ್ ಅಥವಾ ಅಡಿಶನಲ್ ಅಲೋಕೇಶನ್ ಎನ್ನುವುದನ್ನು ತಿಳಿಸಬೇಕು.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಅವರು ಕೊಟ್ಟಿದ್ದು ಒಂದೇ ಒಂದು ಕಂತು.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಪ್ರತಿ ವರ್ಷ ಪ್ರತಿಯೊಂದು ರಾಜ್ಯಕ್ಕೂ ಆನ್ಯುಯಲ್ ಅಲೋಕೇಶನ್ ಇಷ್ಟು ಎಂದು ನಿಗದಿ ಮಾಡಿರುತ್ತಾರೆ. ಅದಕ್ಕೆ 5 ಪರ್ಸೆಂಟ್ ಪ್ರತಿ ವರ್ಷ ಜಾಸ್ತಿ ಮಾಡುತ್ತಾ ಹೋಗುತ್ತಾರೆ. ಹೋದ ವರ್ಷ 46 ಕೋಟಿ ರೂಪಾಯಿಗಳು ಇತ್ತು, ಈ ವರ್ಷ 48 ಕೋಟಿ ರೂಪಾಯಿಗಳು ಆಗಿದೆ. ಇವರು ಅಡಿಶನಲ್ ಮೆಮೊರಾಂಡಮ್ ಕಳುಹಿಸಿಕೊಡಲಿ ಕಳುಹಿಸಿಕೊಡದೇ ಇರಲಿ ಅಷ್ಟು ಹಣ ಬಂದುಬಿಡುತ್ತದೆ. ಅದು ಅಲ್ಲದೆ ಅಡಿಶನಲ್ ಆಗಿ ಏನು ಮೆಮೋರಾಂಡಮ್ ಕಳುಹಿಸಿಕೊಟ್ಟಿದ್ದೀರಿ 400 ಕೋಟಿ ರೂಪಾಯಿಗಳಿಗೆ ಹೆಚ್ಚು ಬರ ಬಂದಿದೆ ಎಂದು ಅದರಲ್ಲಿ ಏನಾದರೂ ಈ ಹಣ ಕಳುಹಿಸಿಕೊಟ್ಟಿದ್ದಾರಾ ಹೇಗೆ ಎಂದು ತಿಳಿಸಬೇಕು. ಅಥವಾ ಆನ್ಯುಯಲ್ ಅಲೋಕೇಶನ್ ಒಳಗೆ ಏನಾದರೂ ಕಳುಹಿಸಿಕೊಟ್ಟಿದ್ದಾರಾ ಎಂದು ತಿಳಿಸಬೇಕು.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಮೊದಲು ನಮ್ಮಲ್ಲಿ 48 ಕೋಟಿ ರೂಪಾಯಿಗಳಷ್ಟು

ಕೇಂದ್ರದ ಹಣ ಇತ್ತು.

ಶ್ರೀ ಬಿ.ಸೋಮಶೇಖರ್:ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಅಧಿಕಾರಿಗಳನ್ನು ಕೇಳಿ ಹೇಳಲಿ ಈಗ ಕಳುಹಿಸಿಕೊಟ್ಟಿರುವ ಹಣ ಆನ್ಯುಯಲ್ ಅಲೋಕೇಶನ್ ಹಣವೋ ಅಥವಾ ಅಡಿಶನಲ್ ಅಲೋಕೇಶನ್ ಹಣವೋ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಅಡಿಶನಲ್ ಅಲೋಕೇಶನ್ ಹಣ ಅಲ್ಲ. ಆನ್ಯುಯಲ್ ಅಲೋಕೇಶನ್ ಹಣ ಇದು.

ಶ್ರೀ ಬಿ.ಸೋಮಶೇಖರ್: ಅಡಿಶನಲ್ ಅಲೋಕೇಶನ್‌ನಲ್ಲಿ ಹಣ ಬಂದಿಲ್ಲ.

ಶ್ರೀ ಎಂ.ಎಸ್.ಆತ್ಮಾನಂದ: ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿಯೂ ಸಹ ಸಾಕಷ್ಟು ಕುಡಿಯುವ ನೀರಿನ ಅಭಾವ ಇದೆ. ಮಾನ್ಯ ಸಚಿವರು ಮಂಡ್ಯ ಜಿಲ್ಲೆಗೆ ಯಾವುದೇ ಹಣ ಬಿಡುಗಡೆ ಮಾಡಿರತಕ್ಕಂಥಾದ್ದು ಕಂಡು ಬರಲಿಲ್ಲ. ಆದ್ದರಿಂದ ಮಂಡ್ಯ ಜಿಲ್ಲೆಗೂ ಹಣ ಕುಡಿಯುವ ನೀರಿಗೆ ಬಿಡುಗಡೆ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಎರಡು ಪಟ್ಟಿಯಲ್ಲಿಯೂ ಸಹ ಮಂಡ್ಯ ಜಿಲ್ಲೆಗೆ ಹಣ ಬಿಡುಗಡೆ ಮಾಡಿಲ್ಲ. ನಮಗೆ ನಾಲೆ ನೀರು ಬರತಕ್ಕಂಥಾದ್ದು 20-25 ದಿವಸಕ್ಕೆ ಒಂದು ಸಲ ಆಗುತ್ತದೆ. ಮಂಡ್ಯ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿಗೆ ಅಭಾವ ಇರುವುದರಿಂದ ನಮಗೂ ಸಹ ಹಣ ಬಿಡುಗಡೆ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಮಾನ್ಯ ಅಧ್ಯಕ್ಷರೇ ಮಂಡ್ಯ ಜಿಲ್ಲೆಯಲ್ಲಿ ಎರಡು ತಾಲ್ಲೂಕುಗಳನ್ನು ಬಿಟ್ಟರೆ ಅಲ್ಲಿ ಕುಡಿಯುವ ನೀರಿಗೆ ಅಷ್ಟು ಅಭಾವವೇನೂ ಇಲ್ಲ. ನಮ್ಮ ರಾಜ್ಯದ ನೀರೆಲ್ಲ ಅವರೇ ಕುಡಿಯುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ ಮತ್ತೊಂದು ವಿಷಯವೇನೆಂದರೆ ಈಗ ಏನು 17 ಕೋಟಿ ರೂಪಾಯಿಗಳು ಕೇಂದ್ರದಿಂದ ಬಿಡುಗಡೆಯಾಗಿದೆ ಅದು ಅಡಿಶನಲ್ ಅಲೋಕೇಶನ್‌ನಲ್ಲಿ ಬಿಡುಗಡೆಯಾಗಿರುವುದೆಂದು ಅಧಿಕಾರಿಗಳು ಈಗ ತಿಳಿಸಿದ್ದಾರೆ.

ಶ್ರೀ ಎಂ.ಎಸ್.ಆತ್ಮಾನಂದ: ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿ ಕುಡಿಯುವ ನೀರಿನ ಅಭಾವ ಇದೆ. ಆದ್ದರಿಂದ ಸರ್ಕಾರ ಹಣ ಬಿಡುಗಡೆ ಮಾಡಿಕೊಡಲೇ ಬೇಕು. ಮಾನ್ಯ ಮಂತ್ರಿಗಳು ಮಂಡ್ಯ ಜಿಲ್ಲೆಯಲ್ಲಿ ಕುಡಿಯುವ ನೀರಿನ ತೊಂದರೆ ಇಲ್ಲ ಎಂದು ಹೇಳಿಬಿಟ್ಟರು. ಮಂಡ್ಯ ಜಿಲ್ಲೆಯಲ್ಲಿಯೂ ಸಹ ಕುಡಿಯುವ ನೀರಿನ ಅಭಾವ ಇದೆ.

ಶ್ರೀ ಎನ್.ಚೆಲುವರಾಯಸ್ವಾಮಿ: ಮಾನ್ಯ ಅದ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿ 30 ಭಾಗ ನೀರಾವರಿ ಇದ್ದರೆ ಇನ್ನುಳಿದ 70 ಭಾಗ ನೀರಾವರಿ ಇಲ್ಲದೇ ಇರತಕ್ಕಂಥ ಜಾಗ ಇದೆ. ಕೆ.ಆರ್. ಪೇಟೆ ಆಗಿರಬಹುದು, ಮಳವಳ್ಳಿ ಆಗಿರಬಹುದು, ನಾಗಮಂಗಲ

ಇರಬಹುದು. ಶ್ರೀರಂಗಪಟ್ಟಣದಲ್ಲಿ ಅರಕೆರೆ ಎನ್ನುವ ಭಾಗದಲ್ಲಿ 40 ಪರ್ಸೆಂಟ್ ಕುಡಿಯುವುದಕ್ಕೆ ನೀರಿಲ್ಲ. ಅಥವಾ ಯಾವುದೇ ತರಹದ ಬೆಳೆ ಬೆಳೆಯುವುದಕ್ಕೆ ನೀರು ಇಲ್ಲದೇ ಇರುವಂತಹ ಪರಿಸ್ಥಿತಿ ಇದೆ. ಮಾನ್ಯ ಕಂದಾಯ ಸಚಿವರು ಹಣ ಬಿಡುಗಡೆ ಮಾಡಿರುವ ಎರಡೂ ಪಟ್ಟಿಯಲ್ಲಿ ಸಹ ನಮ್ಮ ಮಂಡ್ಯ ಜಿಲ್ಲೆಯನ್ನು ಬಿಟ್ಟಿದ್ದಾರೆ. ಮಂಡ್ಯ ಜಿಲ್ಲೆ ನೀರಾವರಿ ಜಿಲ್ಲೆಯಾಗಿರುವುದರಿಂದ ಹಣ ಬಿಡುಗಡೆ ಮಾಡುವ ಅವಶ್ಯಕತೆ ಇಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ, ಆದ್ದರಿಂದ ದಯಮಾಡಿ ಮಾನ್ಯ ಮಂತ್ರಿಗಳು ಮಂಡ್ಯ ಜಿಲ್ಲೆಗೆ ಕುಡಿಯುವ ನೀರಿಗೆ ಹಣವನ್ನು ಬಿಡುಗಡೆ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಬಿ.ಚಂದ್ರಶೇಖರ್: ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿ ಕೆಲವು ಭಾಗದಲ್ಲಿ ನೀರಾವರಿ ಇರತಕ್ಕಂಥಾದ್ದು ಸತ್ಯಾಂಶವಾದರೂ ಅದರಲ್ಲೂ ಪಾಂಡವಪುರ ಎನ್ನುವ ಸಬ್ ಡಿವಿಜನ್‌ನಲ್ಲಿ ಏನು ನಾಲ್ಕು ತಾಲ್ಲೂಕುಗಳು ಇವೆ, ಅಲ್ಲಿ ಕುಡಿಯುವ ನೀರಿಗೆ ಬಹಳ ಅಭಾವ ಇದೆ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ನಮ್ಮ ಜಿಲ್ಲೆಯವರೇ ಈ ಸದನದ ನಾಯಕರು ಮತ್ತು ಮುಖ್ಯಮಂತ್ರಿಗಳು. ಆದರೆ ಮಂಡ್ಯ ಜಿಲ್ಲೆಗೆ ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡಿಲ್ಲ. ದಯಮಾಡಿ ನಾನು ತಮ್ಮ ಮೂಲಕ ಕೇಳಿಕೊಳ್ಳುವುದು ಇಷ್ಟೇ, ಮಂಡ್ಯ ಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇರುವುದರಿಂದ ಹಣ ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜ. ನಮ್ಮ ಮಂಡ್ಯ ಜಿಲ್ಲೆಯಲ್ಲಿಯೂ ಸಹ ನೀರಿನ ಅಭಾವ ಹೆಚ್ಚಾಗಿದೆ. ನಾವು ಸುತ್ತಲೂ ಕಾವೇರಿಯಿಂದ ಆವರಿಸಲ್ಪಟ್ಟಿದ್ದರೂ ನಮಗೆ ಕುಡಿಯಲು ನೀರು ಇರುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿಗೆ ಎಲ್ಲಿ ಅಭಾವ ಇದೆಯೋ ಅದನ್ನು ಪರಿಶೀಲನೆ ಮಾಡಿ ಹಣ ಬಿಡುಗಡೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಕೈಲಾಸನಾಥ ಪಾಟೀಲ್: ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಬಹಳಷ್ಟು ಅಭಾವ ಇದೆ. ಕಳೆದ ವಾರ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದಾಗ ಗುಲ್ಬರ್ಗ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಇರುವ ಅಭಾವದ ಬಗ್ಗೆ ನಮ್ಮ ಜಿಲ್ಲಾ ಮಂತ್ರಿಗಳು ಮತ್ತು ಎಲ್ಲಾ ಶಾಸಕರು ಸೇರಿ ಚರ್ಚೆ ಮಾಡಿ ಸುಮಾರು 10 ಕೋಟಿ ರೂಪಾಯಿಗಳ ಅವಶ್ಯಕತೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಅವಶ್ಯಕತೆ ಇದೆ ಎನ್ನುವ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಈಗತಾನೆ ಮಾನ್ಯ ಕಂದಾಯ ಸಚಿವರು ಹೇಳಿದಂತೆ ಗುಲ್ಬರ್ಗ ಜಿಲ್ಲೆಗೆ ಒಂದೂವರೆ ಕೋಟಿ

ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. ಇದು ಸಾಲದು ಎನ್ನುವಂತಹ ವಿಚಾರವನ್ನು ಅವರ ಗಮನಕ್ಕೆ ತರುತ್ತೇನೆ. ನನ್ನ ಚಿಂಚೋಳಿ ತಾಲ್ಲೂಕಿನಲ್ಲಿ ಕುಡಿಯುವ ನೀರಿಗೆ ಬಹಳಷ್ಟು ಕಷ್ಟದ ಪರಿಸ್ಥಿತಿ ಇದೆ. ಕೆಲವು ತಾಂಡಗಳಿಗೆ ಮತ್ತು ಹಳ್ಳಿಗಳಿಗೆ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರನ್ನು ಒದಗಿಸುವ ಪರಿಸ್ಥಿತಿ ಬಂದಿದೆ. ಇದುವರೆಗೂ ಟ್ಯಾಂಕರ್ ಮೂಲಕ ನೀರನ್ನು ಒದಗಿಸುವ ವ್ಯವಸ್ಥೆ ಆಗಿಲ್ಲ. ನಾನು ಜಿಲ್ಲಾಧಿಕಾರಿಗಳಿಗೆ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು ಇತರೆ ಅಧಿಕಾರಿಗಳಿಗೆ ವಿನಂತಿ ಮಾಡಿದ್ದೇನೆ. ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರನ್ನು ಒದಗಿಸಬೇಕೆಂದು ನಾನು ಸರ್ಕಾರದ ಗಮನಕ್ಕೂ ಸಹ ತರುತ್ತಿದ್ದೇನೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಮಾನ್ಯ ಅಧ್ಯಕ್ಷರೇ, ಜರೂರಾಗಿ ಎಲ್ಲೆಲ್ಲಿ ಹಣ ಕುಡಿಯುವ ನೀರಿಗೆ ಅವಶ್ಯಕತೆ ಇದೆಯೋ ಅಲ್ಲಿಗೆ ಹಣ ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ನಾನು ಇದುವರೆಗೂ ಗಮನಿಸಿದಂತೆ ಬಹುತೇಕ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಆಯಿತು. ಸರ್ಕಾರದಿಂದ ಸಾಕಷ್ಟು ಕ್ರಮ ತೆಗೆದುಕೊಂಡಿಲ್ಲ ಎನ್ನುವುದು ನಮಗೆ ಮನವರಿಕೆಯಾಗಿದೆ. ಮುಖ್ಯವಾಗಿ ಆಗಬೇಕಾಗಿರುವಂತಹದ್ದು ಹಣದ ಬಿಡುಗಡೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಪ್ರತಿಯೊಂದು ಜಿಲ್ಲಾ ಪರಿಷತ್ತಿನಿಂದ ವರದಿಗಳನ್ನು ತರಿಸಿಕೊಂಡಿದ್ದಾರೆ. ನಿನ್ನೆ ಮೊನ್ನೆ ಕೆಲವು ಜಿಲ್ಲೆಗಳ ಆಕ್ಷನ್ ಪ್ಲಾನ್ ಅನ್ನು ಅಪ್ರೂವ್ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಆದರೆ ಅದಕ್ಕೆ ಬೇಕಾಗಿರತಕ್ಕಂಥ ಹಣ ಪೂರ್ತಿ ಬಿಡುಗಡೆ ಆಗಿಲ್ಲ. ನನ್ನ ಸಮಸ್ಯೆ ಒಂದೇ ನಾನು ಕೇಳತಕ್ಕಂಥದ್ದು. ತಾವು ಚುನಾವಣೆಗಳನ್ನು ಜೂನ್ 7 ಮತ್ತು 12ರ ಒಳಗೆ ಮಾಡಬೇಕೆಂದು ಅದಲ್ಲಿ ಚುನಾವಣೆ ಕೆಲಸಕಾರ್ಯಗಳನ್ನು ನಾವು ಮೇ ಫಸ್ಟ್ ವೀಕ್‌ನಲ್ಲಿ ಶುರು ಮಾಡಬೇಕಾಗುತ್ತದೆ. ಆಮೇಲೆ ಚುನಾವಣೆ ನೀತಿ ಸಂಹಿತೆ ಅಡ್ಡ ಬರುತ್ತದೆ. ಮೇ ಮೊದಲ ವಾರದಿಂದ ಜೂನ್ 15ರವರೆಗೂ ಬೋರ್‌ವೆಲ್‌ಗಳ ಹೊಸ ಪಾಯಿಂಟ್‌ಗಳನ್ನು ಹಾಕುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಾವು ಚುನಾವಣಾ ಆಯೋಗಕ್ಕೆ ಬರೆದು ಅವರಿಂದ ವಿಶೇಷ ಅನುಮತಿಯನ್ನು ಪಡೆದುಕೊಳ್ಳಿ. ಕುಡಿಯುವ ನೀರಿಗೆ ನೀತಿ ಸಂಹಿತೆ ಬರಬಾರದು ಎಂದು ಹೇಳಿ. ಜನಗಳಿಗೆ ಕುಡಿಯುವ ನೀರಿಗೆ ನಿಜವಾಗಿಯೂ ಬಹಳ ತೊಂದರೆ ಇದೆ. ಇದನ್ನು ತಾವು ಮಾಡಬೇಕೆಂದು ನನ್ನ ಒತ್ತಾಯ. ನಾನು ಈಗಾಗಲೇ ಈ ಸಲಹೆಯನ್ನು ಕೊಟ್ಟಿದ್ದೇನೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು, ವಿದ್ಯುತ್ ಖಾತೆ ಸಚಿವರು ಮತ್ತು ಪಟ್ಟಣ ಪ್ರದೇಶಗಳ ಸಚಿವರು ಕಂದಾಯ ಖಾತೆ ಸಚಿವರು ಇವರುಗಳನ್ನು ಕರೆದು ತಾವು ಚರ್ಚೆ ಮಾಡಿ ಒಂದು ಕೋ ಆರ್ಡಿನೇಟ್ ಮಾಡಿಕೊಳ್ಳಿ. ಪ್ರತಿಯೊಂದು ತಾಲ್ಲೂಕಿಗೂ ತಾತ್ಕಾಲಿಕವಾಗಿ ಎಷ್ಟೆಷ್ಟು ಹಣ ಬೇಕೋ ಅಷ್ಟು ಹಣವನ್ನು ಬಿಡುಗಡೆ ಮಾಡುವುದಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತೇನೆ.

4.30 ಪಿ.ಎಂ

ಶ್ರೀ ಎಂ.ವೈ.ಘೋರ್ಪಡೆ: ಕುಡಿಯುವ ನೀರಿನ ವಿಚಾರದಲ್ಲಿ ಎಲೆಕ್ಷನ್ ಕಮೀಶನ್‌ನವರು ಅಡ್ಡ ಬರುವುದಿಲ್ಲ. ಹಾಗೇನಾದರೂ ಅಡ್ಡ ಬಂದರೆ ಪ್ರಪಂಚ ನಿಂತು ಹೋಗುತ್ತದೆ. ಕೋಡ್ ಆಫ್ ಕಾಂಡಕ್ಟ್ ಇದೆ ಎಂದು ಹೇಳಿ ನೀರಿನ ಅಭಾವ ಇರುವಾಗ ಕೊರೆಯುವ ಬಾವಿಗಳನ್ನು ನಿಲ್ಲಿಸುವುದೇ? ನನಗೆ ತಿಳಿದ ಮಟ್ಟಿಗೆ ಕುಡಿಯುವ ನೀರಿನ ವಿಚಾರದಲ್ಲಿ ಯಾವ ಅಡತಡೆಯೂ ಇರಲಾರದು.

ಅಧ್ಯಕ್ಷರು: ಕುಡಿಯುವ ನೀರಿನ ವಿಚಾರದಲ್ಲಿ ಎಲೆಕ್ಷನ್ ಕಮೀಶನ್‌ರವರ ಪರ್ಮಿಶನ್ ತೆಗೆದುಕೊಂಡು ಬಿಡಿ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಒಂದು ಸರ್ಕ್ಯುಲರ್ ಇದೆ ಅದನ್ನು ವಾಪಸ್ ತೆಗೆದುಕೊಳ್ಳಿ, ಇಲ್ಲವಾದಲ್ಲಿ ಕೊಳವೆಬಾವಿಗಳು ಎಲ್ಲವೂ ಹೋಗುತ್ತವೆ ಎಂದು ಪದೇ ಪದೇ ಹೇಳುತ್ತಾ ಬಂದಿದ್ದೇನೆ. ಇದರಿಂದ ಸರಕಾರಕ್ಕೆ ಪುನಃ ಪುನಃ ಅಪಾರವಾದಂಥ ಹಣದ ನಷ್ಟ ಉಂಟಾಗುತ್ತದೆ. ಈಗ ಕಳುಹಿಸಿರತಕ್ಕಂಥ ಸರ್ಕ್ಯುಲರ್ ಸರಿಯಾಗಿಲ್ಲ. ಅದರಲ್ಲಿ 825 ಅಡಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಇರತಕ್ಕಂಥ ಕೊಳವೆಬಾವಿ ಪ್ರದೇಶದಲ್ಲಿ ಬೇರೆ ಯಾವ ಕೊಳವೆಬಾವಿಗಳನ್ನು ಮಾಡಬಾರದು ಎಂದು ಸುತ್ತೋಲೆಯೂ ಇತ್ತು. ಅದನ್ನು ಇವರು ವಾಪಸ್ಸು ಪಡೆದಿದ್ದಾರೆ. ಅದೇ ರೀತಿಯ ಸುತ್ತೋಲೆಯನ್ನು ಪುನಃ ತರತಕ್ಕಂಥಾದ್ದು ಮತ್ತು ವಿದ್ಯುತ್ ಮಂಡಳಿಗೆ ಆ ಕುರಿತು ಹೇಳತಕ್ಕಂಥ ಅವಶ್ಯಕತೆಯು ಈಗ ಇದೆ. ಒಂದೇ ಮಿತಿಯಲ್ಲಿ ಬಾವಿಗಳನ್ನು ಕೊರೆಯುತ್ತಾ ಬರುವುದರಿಂದ ಬತ್ತಿ ಹೋಗಿ ಸರಕಾರಕ್ಕೆ ನಷ್ಟವುಂಟಾಗುತ್ತದೆ. ಆದ್ದರಿಂದ ಆ ಸುತ್ತೋಲೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಆ ಕುರಿತು ತಮ್ಮ ಭರವಸೆಯನ್ನು ಬಯಸುತ್ತೇನೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರು ಹೇಳತಕ್ಕಂಥಾದ್ದರಲ್ಲಿ ಸತ್ಯಾಂಶವಿದೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ ಲೋನ್ ಮಂಜೂರು ಮಾಡಬೇಕಾದರೆ ಒಂದು ಬಾವಿಯಿಂದ ಇನ್ನೊಂದು ಬಾವಿಯು 800 ಅಡಿಗಳಷ್ಟು ಅಂತರದಲ್ಲಿರಬೇಕು. ಇಲ್ಲವಾದರೆ ಲೋನ್ ಕೊಡುವುದಿಲ್ಲ. ಸಾಲ ಮರುಪಾವತಿ ಮಾಡಲು ತೋಡಿದ ಬಾವಿಗಳಲ್ಲಿ ನೀರು ಬರಬೇಕಲ್ಲವೆ? ಒಂದು ಬೋರ್‌ವೆಲ್‌ಗೆ ಹತ್ತಿರದಲ್ಲಿ ಇನ್ನೊಂದು ಇದ್ದರೆ ನೀರು ಎರಡಕ್ಕೂ ಸೇರುತ್ತದೆ. ಹೀಗೆ ಆಗುವುದರಿಂದ ಬೇಗ ಬತ್ತಿ ಹೋಗುವ ಸಂಭವ ಇರುತ್ತದೆ. ಸರಕಾರದಲ್ಲಿಯೂ 800 ಅಡಿಗಳ ವ್ಯಾಪ್ತಿಯನ್ನು ಅಂತರ ಎಂದು ಪರಿಗಣಿಸಲು ಕಾನೂನು ಮಾಡಿದೆ. ಇದನ್ನು ಕೂಡ ಹಾಗೆ ಮಾಡಬೇಕು. ಇಲ್ಲವಾದರೆ ಕಷ್ಟವಾಗುತ್ತದೆ. 800 ಅಡಿಗಳ ಅಂತರದಿಂದ ಆಚೆಗೆ ಇದ್ದರೆ ಮಾತ್ರ ಬಾವಿಗಳಲ್ಲಿ ನೀರು ಬರಲು ಸಾಧ್ಯ. ಅದನ್ನು ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಹೇಳಬೇಕು.

ಶ್ರೀ ಎಂ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಸಚಿವರು): ಮಾನ್ಯ ಕಂದಾಯ ಸಚಿವರು ಜಿಲ್ಲಾಧಿಕಾರಿಗಳಿಗೆ ಆ ರೀತಿಯ ಡೈರೆಕ್ಷನ್ಸ್ ಕೊಡುವುದಾದರೆ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಸಿ.ಬೈರೇಗೌಡ: ಅಂಥ ಒಂದು ಸುತ್ತೋಲೆಯು ಹಿಂದೆಯೇ ಇತ್ತು. ಅದನ್ನು ಈಗ ಮಾಡಿಫೈ ಮಾಡಿದ್ದಾರೆ. ಹೀಗೆ ಮಾಡಿಫಿಕೇಶನ್ ಮಾಡಿರುವುದನ್ನು ಈಗ ವಾಪಸ್ ತೆಗೆದುಕೊಳ್ಳಿ. ಪುನಃ ಹಳೆಯ ಸುತ್ತೋಲೆಯನ್ನು ಎನ್‌ಫೋರ್ಸ್ ಮಾಡುತ್ತೇವೆಂದು ದಯವಿಟ್ಟು ಹೇಳಲಿ.

ಶ್ರೀ ಎಂ.ವೈ.ಘೋರ್ಪಡೆ: ಜಿಲ್ಲಾಧಿಕಾರಿಗಳಿಗೆ ಡೈರೆಕ್ಷನ್ಸ್ ಕೊಡುವವರು ಮಾನ್ಯ ಕಂದಾಯ ಸಚಿವರು. ಅವರು ಕೊಟ್ಟರೆ ನನ್ನ ಯಾವ ಆಕ್ಷೇಪಣೆಯೂ ಇಲ್ಲ.